ಸಂಪುಟ: 04 ಸಂಚಿಕೆ: 348 ಪುಟಗಳು: 08 ಶನಿವಾರ 01 ಮಾರ್ಚ್ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

ಮುಂಜಾನೆ ಮಾತು

ದೊಡ್ಡ ಗುರಿಯನ್ನು ಹೊಂದುವುದು, ನಿರಂತರವಾಗಿ ಜ್ಞಾನವನ್ನು ಪಡೆದುಕೊಳ್ಳುವುದು, ಪರಿಶ್ರಮ ಪಡುವುದು, ತಾಳ್ಮೆಯಿಂದಿರುವುದು ಈ ನಾಲ್ಕು ವಿಷಯಗಳನ್ನು ಅನುಸರಿಸಿದರೆ ನೀವು ಏನನ್ನಾದರೂ ಸಾಧಿಸಬಹುದು

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ನೆರೆ ರಾಜ್ಯಗಳಿಗೆ ನೀರು ಬಿಟ್ಟು ಜನತೆಗೆ ಕಾಂಗ್ರೇಸ್‌ನಿಂದ ದ್ರೋಹ : ನಿಖಿಲ್

• ಉದಯವಾಹಿನಿ, ಬೆಂಗಳೂರು

ತನ್ನ ಇಂಡಿ ಮಿತ್ರ ಪಕ್ಷ ಡಿಎಂಕೆ ಮೆಚ್ಚಿಸಲು ಕದ್ದುಮುಚ್ಚಿ ಕಾವೇರಿ ನೀರನ್ನು ತಮಿಳುನಾಡಿಗೆ ಬಿಟ್ಟಿದ್ದ ರಾಜ್ಯ ಕಾಂಗ್ರೇಸ್‌ಗೆ ರಾತ್ರೋರಾತ್ರಿ ತೆಲಂಗಾಣ ರಾಜ್ಯದ ಮೇಲೆ ಪ್ರೇಮಾಂಕುರವಾಗಿದೆ ಎಂದು ಜೆಡಿಎಸ್ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದ್ದಾರೆ. ಈ ಸಂಬಂಧ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಅವರು, ವಿಜಯಪುರದ ಆಲಮಟ್ಟಿ ಜಲಾಶಯದಿಂದ ಫೆ. 20 ಮತ್ತು 21 ರಂದು ತೆಲಂಗಾಣ ರಾಜ್ಯಕ್ಕೆ 1.27 ಟಿಎಂಸಿ ಅಡಿ ನೀರನ್ನು ಉಡುಗೊರೆಯಾಗಿ ನೀಡಿದೆ ಎಂದು ಆರೋಪಿಸಿದ್ದಾರೆ.

ತೆಲಂಗಾಣ, ತಮಿಳುನಾಡಿನ ಬಗ್ಗೆ ರಾಜ್ಯ ಸರ್ಕಾರದ ಒಲವು ತೋರಿದ್ದು ಮತ್ತೊಮ್ಮೆ ಕನ್ನಡಿಗರಿಗೆ ದ್ರೋಹ ಬಗೆದಿದೆ. ರಾಜ್ಯದ ರೈತರಿಗೆ ನೀರು ಬಿಡುವಲ್ಲಿ ಒಂದು ಸೆಕೆಂಡ್ ಕೂಡಾ ಹೆಚ್ಚಾಗದಂತೆ ಸಮಯ ಪಾಲನೆ ಮಾಡುವ ಅಧಿಕಾರಿಗಳು ಇದರ ಬಗ್ಗೆ ಏನು ಹೇಳುತ್ತಾರೆ? ಎಂದು ಪ್ರಶ್ನಿಸಿದ್ದಾರೆ. ರಾಜ್ಯದ ಜನತೆಗೆ ಮುಂದೆ ಕುಡಿಯುವ ನೀರು, ಬೆಳೆಗೆ ನೀರಿನ ಕೊರತೆಯಾದರೆ ಯಾರನ್ನು ದೂಷಿಸುವಿರಿ? ಎಂದು ಪ್ರಶ್ನಿಸಿರುವ ಅವರು, ಈ ಸರ್ಕಾರಕ್ಕೆ ರೈತರ ಶಾಪವಂತೂ ತಟ್ಟುವುದು ಶತ ಸಿದ್ದ ಎಂದಿದ್ದಾರೆ.

ಸರ್ಕಾರ ಹಾಗೂ ರಾಜಭವನ ನಡುವೆ ಮುಂದುವರೆದ ಜಟಾಪಟಿ

• ಉದಯವಾಹಿನಿ, ಬೆಂಗಳೂರು

ರಾಜ್ಯಪಾಲರು ಹಾಗೂ ಕಾಂಗ್ರೇಸ್ ಸರ್ಕಾರದ ನಡುವಿನ ಜಟಾಪಟಿ ಮುಂದುವರೆದಿದೆ. ಇದೀಗ ಮತ್ತೆ ಎರಡು ವಿಧೇಯಕಗಳನ್ನು ಸಹಿ ಮಾಡದೇ ರಾಜ್ಯಪಾಲ ಥಾವರ್ ಚಂದ್‌ಗೆಹ್ಲೋಟ್‌ಗೆ ವಾಪಾಸ್ ಕಳುಹಿಸಿದ್ದಾರೆ. ಕೆಲ ದಿನಗಳ ಹಿಂದೆ ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ತಿದ್ದುಪಡಿ ಮಸೂದೆ-2024 ನ್ನು ಸಹಿ ಮಡದೇ ಹಿಂತಿರುಗಿಸಿದ್ದ ರಾಜ್ಯಪಾಲರು ಇದೀಗ ಮತ್ತೆ ಎರಡು ಮಸೂದೆ ವಪಾಸ್ ಕಳುಹಿಸಿದ್ದಾರೆ.

ಕರ್ನಾಟಕ ಸಹಕಾರಿ ಸಂಘಗಳ ತಿದ್ದುಪಡಿ ವಿದೇಶಕ-2024 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ವಿಧೇಯಕ-2024 ಈ ಎರಡೂ ಮಸೂದೆಗಳನ್ನು ರಾಜ್ಯಪಾಲರು ವಾಪಾಸ್ ಕಳುಹಿಸಿದ್ದಾರೆ. ಈ ಮಸೂದೆಗಳ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ. ಸಹಕಾರಿ ಸಂಘಗಳ ತಿದ್ದುಪಡಿ ವಿಧೇಯಕಕ್ಕೆ ರಾಜ್ಯಪಾಲರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಹಕಾರಿ ಸಂಘಗಳಿಗೆ ಮೀಸಲಾತಿ ಆಧಾರದ ಮೇಲೆ ನಾಮನಿರ್ದೇಶನ ಮಾಡಲು ಸರ್ಕಾರ ಮುಂದಾಗಿತ್ತು. ಆದರೆ ಇದಕ್ಕೆ ರಾಜ್ಯಪಾಲರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ಪಷ್ಟನೆ ಕೇಳಿ ರಾಜ್ಯಪಾಲರು ಮಸೂದೆ ವಾಪಾಸ್ ಕಳುಹಿಸಿದ್ದಾರೆ.

ಮಾ. 3ರಂದು ರಾಜಭವನ ಮುತ್ತಿಗೆ

• ಉದಯವಾಹಿನಿ, ಬೆಂಗಳೂರು

ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಮೇಲೆ ಎಂಇಎಸ್ ಪುಂಡರ ಹಲ್ಲೆ ಪ್ರಕರಣ ಖಂಡಿಸಿ ಕನ್ನಡಪರ ಸಂಘಟನೆಗಳು ಸಿಡಿದೆದ್ದಿದ್ದು, ಅಖಂಡ ಕರ್ನಾಟಕ ಬಂದ್ ಹೋರಾಟಕ್ಕೆ ಕರೆ ನೀಡಿದೆ. ಬೆಂಗಳೂರಿನಲ್ಲಿ ಸಭೆ ನಡೆಸಿದ ಬಳಿಕ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಈ ವಿಷಯ ತಿಳಿಸಿದ್ದಾರೆ. ಮಾರ್ಚ್ ತಿಂಗಳಲ್ಲಿ ಸಾಲು ಸಾಲು ಹೋರಟಕ್ಕೆ ಕನ್ನಡಪರ ಸಂಘಟನೆಗಳು ನಿರ್ಧರಿಸಿವೆ. ಮಾರ್ಚ್ 3ರಿಂದ ಮಾರ್ಚ್ 22ರ ವರೆಗೆ ಪ್ರತಿಭಟನೆಗೆ ರೂಪುರೇಷೆ ಸಿದ್ಧಪಡಿಸಿವೆ.

ಮಾರ್ಚ್ 3ರಂದು ರಾಜಭವನ ಮುತ್ತಿಗೆ ಹಾಕಲು ನಿರ್ಧರಿಸಲಾಗಿದೆ. ಕಂಡಕ್ಟರ್ ಮೇಲೆ ಹಲ್ಲೆ ಖಂಡಿಸಿ ಮಾರ್ಚ್ 7ರಂದು ಬೆಳಗಾವಿ ಚಲೋಗೆ ತೀರ್ಮಾನಿಸಲಾಗಿದೆ. ಮಾರ್ಚ್ 11ರಂದು ಅತ್ತಿಬೆಲೆ ಗಡಿ ಬಂದ್ ಹೋರಾಟಕ್ಕೆ ಕರೆ ನೀಡಲಾಗಿದೆ ಮಾರ್ಚ್ 16ರಂದು ಹೊಸಕೋಟೆ ಟೋಲ್ ಬಂದ್ ಗೆ ನಿರ್ಧರಿಸಲಾಗಿದೆ. ಮೇಕೆದಾಟು ಯೋಜನೆಗೆ ಆಗ್ರಹಿಸಿ ಈ ಬಂದ್ ಕರೆ ನೀಡಲಾಗಿದೆ ಎಂದು ತಿಳಿಸಿದರು.

ಇನ್ನು ಮಾರ್ಚ್ 22ರಂದು ಅಖಂಡ ಕರ್ನಾಟಕ ಬಂದ್ ಕರೆ ನೀಡಲಾಗಿದೆ. ಅಂದು ರಾಜ್ಯಾಧ್ಯಂತ ಬಸ್ ಸಂಚಾರ ಸ್ಥಗಿತಗೊಳ್ಳಲಿದೆ. ಆಟೋ ಸಂಘಟನೆಗಳು, ಕ್ಯಾಬ್, ಹೋಟೆಲ್ ಮಾಲೀಕರು ಎಲ್ಲರೂ ಬಂದ್‌ಗೆ ಬೆಂಬಲ ನೀಡಬೇಕು ಎಂದು ವಾಟಾಳ್ ನಾಗರಾಜ್ ತಿಳಿಸಿದ್ದಾರೆ.

ಪೊಲೀಸರು ವಾಟ್ಸಾಪ್ ಮೂಲಕ ನೋಟಿಸ್ ನೀಡುವಂತಿಲ್ಲ

• ಉದಯವಾಹಿನಿ, ಬೆಂಗಳೂರು

ಪೊಲೀಸರು ವಾಟ್ಸಾಪ್ ಮೂಲಕ ನೋಟಿಸ್ ನೀಡುವಂತಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ. ಸುಪ್ರೀಂ ಕೋರ್ಟ್ ತೀರ್ಪು ಉಲ್ಲೇಖಿಸಿ ಹೈಕೋರ್ಟ್ ಈ ಆದೇಶ ನೀಡಿದೆ. ತಮಿಳುನಾಡಿನ ಪವನ್ ಕುಮಾರ್ ಎಂಬಾತನಿಗೆ ಪೊಲೀಸರು ವಾಟ್ಸಾಪ್ ಮೂಲಕ ಆಡುಗೋಡಿ ಠಾಣೆಯ ಪೊಲೀಸರು ನೋಟಿಸ್ ನೀಡಿದ್ದರು.

ಐಟಿ ಕಾಯ್ದೆಯ ಸೆಕ್ಷನ್ 66(ಸಿ), 66(ಡಿ) ಅಡಿ ಅವರಿಗೆ ನೋಟಿಸ್ ನೀಡಲಾಗಿತ್ತು. ಸುಪ್ರೀಂಕೋರ್ಟ್ ಸತ್ಯೇಂದರ್ ಕುಮಾರ್ ಅಂಟಿಲ್ ಪ್ರಕರಣದಲ್ಲಿ ಈ ಕುರಿತಾಗಿ ತೀರ್ಪು ನೀಡಿದೆ. CRPC BNSS ಅಡಿಯಲ್ಲಿ ಸೂಚಿಸಿರುವಂತೆ ನೋಟಿಸ್ ನೀಡಬೇಕಿದೆ. ವಾಟ್ಸಾಪ್ ಮೂಲಕ ಪೊಲೀಸರು ನೋಟಿಸ್ ನೀಡುವಂತಿಲ್ಲ ಎಂದು ಸುಪ್ರೀಂಕೋರ್ಟ್ ತೀರ್ಪು ಆಧರಿಸಿ ಹೈಕೋರ್ಟ್ ಆದೇಶ ನೀಡಿದೆ.

ಘೋರ ದುರಂತ

ದೇವಭೂಮಿಯಲ್ಲಿ ಭಾರೀ ಹಿಮಪಾತ

- ಬದ್ರಿನಾಥ್ ಧಾಮ್‌ನಲ್ಲಿ ಭಾರೀ ಹಿಮಪಾತ, 57ಕ್ಕೂ ಹೆಚ್ಚು ಕಾರ್ಮಿಕರು ಸಿಲುಕಿರುವ ಶಂಕೆ
- ಉತ್ತರಾಖಂಡದಲ್ಲಿ ಭಾರೀ ಹಿಮಪಾತ
- ಹಿಮದಡಿ 41 ಬಿಆರ್‌ಒ ಕಾರ್ಮಿಕರು
- ಸಮರೋಪಾದಿಯಲ್ಲಿ ರಕ್ಷಣಾ ಕಾರ್ಯ
- ಹಿಮಪಾತದಲ್ಲಿ 8 ಕಂಟೈನರ್ಸ್ ಮತ್ತು ಒಂದು ಶೆಡ್ ಮುಳುಗಡೆ

1. ಉತ್ತರಾಖಂಡ್ ಚಮೋಲಿ ಜಿಲ್ಲೆಯಲಿ ಭಾರೀ ಹಿಮಪಾತ
2. ಬದರಿನಾಥ್ ಬಳಿ ಹಿಮಪಾತದಲ್ಲಿ ಸಿಲುಕಿದ BRO ಕಾರ್ಮಿಕರು
3. BRO ಕಾರ್ಮಿಕರ ಹುಡುಕಾಟಕ್ಕೆ ರಕ್ಷಣಾ ಕಾರ್ಯಾಚರಣೆ ಆರಂಭ ರಕ್ಷಣಾ ಕಾರ್ಯಾಚರಣೆಯಲ್ಲಿ ಇದುವರೆಗೆ 16 BRO ಕಾರ್ಮಿಕರ ರಕ್ಷಣೆ

ಸ್ಥಳಕ್ಕೆ ಆಂಬ್ಯುಲೆನ್ಸ್

ಬಿಆರ್‌ಒ ಕಾರ್ಯನಿರ್ವಾಹಕ ಇಂಜಿನಿಯರ್ ಸಿಆರ್ ಮೀನಾ ಮಾತನಾಡಿ, ಮೂರರಿಂದ ನಾಲ್ಕು ಆಂಬ್ಯುಲೆನ್ಸ್‌ಗಳನ್ನು ಘಟನಾ ಸ್ಥಳಕ್ಕೆ ಕಳುಹಿಸಲಾಗಿದೆ, ಆದರೆ ಭಾರೀ ಹಿಮ ಪಾತದಿಂದಾಗಿ ರಕ್ಷಣಾ ತಂಡವು ಅಲ್ಲಿಗೆ ತಲುಪಲು ತೊಂದರೆಗಳನ್ನು ಎದುರಿಸುತ್ತಿದೆ ಎಂದು ಹೇಳಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ಪಡೆಯ (ಎಸ್‌ಡಿಆರ್‌ಎಫ್) ಕಮಾಂಡೆಂಟ್ ಅರ್ಪಣ್ ಯಾದವಂಶಿ ಮಾತನಾಡಿ, ಎಸ್‌ಡಿಆರ್‌ಎಫ್ ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಎರಡನ್ನೂ ಸ್ಥಳಕ್ಕೆ ರವಾನಿಸಲಾಗಿದೆ. ಆದಾಗ್ಯೂ, ಹೆದ್ದಾರಿ ಮುಚ್ಚಿರುವುದರಿಂದ ಅವರು ಪ್ರಸ್ತುತ ಸಿಲುಕಿಕೊಂಡಿದ್ದಾರೆ. ಇಂಡೋ-ಟಿಬೆಟಿಯನ್ ಗಡಿ ಪೊಲೀಸರು (ಐಟಿಬಿಪಿ) ಪ್ರಸ್ತುತ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದೆ. ಹವಾಮಾನ ವೈಪರೀತ್ಯದಿಂದಾಗಿ ಹನುಮಾನ್ ಚಟ್ಟಿಯ ಆಚೆಯ ಹೆದ್ದಾರಿಯನ್ನು ಮುಚ್ಚಲಾಗಿದೆ ಎಂದು ತಿಳಿಸಿದ್ದಾರೆ.

ಸಿಎಂ ಪುಷ್ಕರ್ ಸಿಂಗ್ ಧಾಮಿ ಪೋಸ್ಟ್

ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಪ್ರತಿಕ್ರಿಯಿಸಿ, ಉಳಿದ ಕಾರ್ಮಿಕರನ್ನು ರಕ್ಷಿಸಲು ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ. "ಚಮೋಲಿ ಜಿಲ್ಲೆಯ ಮಾನಾ ಗ್ರಾಮದ ಬಳಿ ಬಿಆರ್‌ಒ ನಿರ್ವಹಿಸುತ್ತಿರುವ ನಿರ್ಮಾಣ ಕಾರ್ಯದ ಸಮಯದಲ್ಲಿ ಹಿಮಪಾತದಿಂದಾಗಿ ಹಲವಾರು ಕಾರ್ಮಿಕರು ಸಿಲುಕಿದ್ದಾರೆ ಎಂಬ ದುರಂತ ಸುದ್ದಿ ಬಂದಿದೆ. ಐಟಿಬಿಪಿ, ಬಿಆರ್‌ಒ ಮತ್ತು ಇತರ ರಕ್ಷಣಾ ತಂಡಗಳು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿವೆ. ಎಲ್ಲಾ ಕಾರ್ಮಿಕ ಸಹೋದರರ ಸುರಕ್ಷತೆಗಾಗಿ ನಾನು ಭಗವಾನ್ ಬದರಿ ವಿಶಾಲ್ ಅವರನ್ನು ಪ್ರಾರ್ಥಿಸುತ್ತೇನೆ" ಎಂದು ತಿಳಿಸಿದ್ದಾರೆ.

• ಉದಯವಾಹಿನಿ, ಉತ್ತರಾಖಂಡ

ಚಮೋಲಿ ಜಿಲ್ಲೆಯ ಮಾನಾ ಬಳಿ ಶುಕ್ರವಾರ ಸಂಭವಿಸಿದ ಭಾರಿ ಹಿಮಪಾತದಲ್ಲಿ ಗಡಿ ರಸ್ತೆಗಳ ಸಂಸ್ಥೆಯ ಕನಿಷ್ಠ 57 ಮಂದಿ ಕಾರ್ಮಿಕರು ಸಿಲುಕಿ ಕೊಂಡಿರುವ ಶಂಕೆ ವ್ಯಕ್ತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬದರಿನಾಥ್ ಧಾಮ್‌ನ ಮಾನಾ ಗ್ರಾಮದ ಸಮೀಪ ಭಾರೀ ಹಿಮಪಾತವಾಗಿ ಕನಿಷ್ಠ 57 ಮಂದಿ ಬಾರ್ಡರ್ ರೋಡ್ಸ್ ಆರ್ಗ ನೈಸೇಶನ್ ಕಾರ್ಮಿ ಕರು ಸಿಲುಕಿಕೊಂಡಿದ್ದಾರೆ.

ಸದ್ಯ 16 ಕಾರ್ಮಿ ಕರನ್ನು ರಕ್ಷಿಸಲಾಗಿದ್ದು, ಉಳಿದ 41 ಮಂದಿಯ ರಕ್ಷಣೆಗೆ ಕಾರ್ಯಾಚರಣೆ ಭರದಿಂದ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳೀಯ ಆಡಳಿತ, ಪೊಲೀಸರು, ಇಂಡೋ- ಟಿಬೆಟಿಯನ್ ಗಡಿ ಪೊಲೀಸ್, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ತಂಡಗಳು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿವೆ.ಈ ಪ್ರದೇಶದಲ್ಲಿ ಸುರಿಯುತ್ತಿರುವ ಮಳೆ, ಹಿಮಪಾತ ಸೇರಿ ದಂತೆ ಕಠಿಣ ಹವಾಮಾನ ಪರಿಸ್ಥಿತಿಗಳ ನಡುವೆಯೂ ರಕ್ಷಣಾ ತಂಡಗಳು ಹಿಮ ಪಾತದಡಿ ಸಿಲುಕಿರುವವರನ್ನು ರಕ್ಷಿಸಲು ಅವಿರತವಾಗಿ ಶ್ರಮಿಸುತ್ತಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಗರ್ವಾಲ್ ಇನ್ಸ್‌ಪೆಕ್ಟರ್ ಜನರಲ್ ರಾಜೀವ್ ಸ್ವರೂಪ್ ಈ ಘಟನೆ ಯನ್ನು ದೃಢಪಡಿಸಿದ್ದು, ಮಾನಾ ಗ್ರಾಮದ ಬಳಿ ಹಿಮಪಾತವಾಗಿ ಅನೇಕ ಬಿಆರ್‌ಒ ಕಾರ್ಮಿಕರು ಸಿಲುಕಿಕೊಂಡಿದ್ದಾರೆ. ಎಲ್ಲಾರನ್ನೂ ಸುರಕ್ಷಿತವಾಗಿ ಹೊರತರಲು, ರಸ್ತೆಯ ಮೇಲಿನ ಹಿಮರಾಶಿಯನ್ನು ತೆರವುಗೊಳಿಸಲು ಪ್ರಯತ್ನಗಳು ನಡೆಯುತ್ತಿವೆ ಎಂದು ತಿಳಿಸಿದರು.

ಅಯ್ಯೋ ಬದ್ರಿನಾಥ ಬದಕಿಸೋ

ಭಾರೀ ಮಳೆ ಮುನ್ನೆಚ್ಚರಿಕೆ: ಉತ್ತರಾಖಂಡದ ಚಮೋಲಿ ಸೇರಿದಂತೆ ಬೆಟ್ಟ ಗುಡ್ಡಗಳ ಸಾಲಿನ ಭಾಗದಲ್ಲಿ ಉತ್ತರಾಖಂದದಾದ್ಯಂತ ಭಾರಿ ಹಿಮಮಳೆ ಸುರಿಯುತ್ತಿದ್ದು, ಹಿಮಪಾತದಿಂದಾಗಿ ರಕ್ಷಣಾ ಕಾರ್ಯಾಚರಣೆಗೂ ಅಡ್ಡಿಯುಂಟಾಗಿದೆ. ದುರಂತ ನಡೆದಿರುವ ಸ್ಥಳವೂ ಸೇರಿದಂತೆ ಹಲವು ಕಡೆಗಳಲ್ಲಿ ಭಾರೀ ಮಳೆಯಾಗಿದೆ. ಯಲ್ಲೊ ಅಲರ್ಟ್‌ಅನ್ನು ಈ ಭಾಗದಲ್ಲಿ ಭಾರತೀಯ ಹವಾಮಾನ ಇಲಾಖೆಯ ಡೆಹ್ರಾಡೂನ್ ಪ್ರಾದೇಶಿಕ ಕಚೇರಿ ನೀಡಿದೆ.

ಜನಜೀವನ ಅಸ್ತವ್ಯಸ್ಥ

ಹಿಮಾಚಲ ಪ್ರದೇಶದ ಬುಡಕಟ್ಟು ಜಿಲ್ಲೆಗಳಾದ ಲಹೌಲ್, ಸ್ಪಿತಿ, ಚಂಬಲ್ ಮತ್ತು ಮಂಡಿ ಸೇರಿದಂತೆ ಹಲವು ಭಾಗಗಳಲ್ಲಿ ಭಾರೀ ಹಿಮಪಾತದ ಜೊತೆಗೆ ಮಳೆಯಾಗುತ್ತಿದ್ದು, ಈ ನಡುವೆ ಅಲ್ಲಲ್ಲಿ ಭೂಕುಸಿತ ಸಂಭವಿಸಿದ್ದು ಜನಜೀವನ ಅಸ್ತವ್ಯಸ್ತವಾಗಿದೆ. ಹಲವು ಪ್ರದೇಶಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಮೂರು ದಿನಗಳ ನಂತರವೂ ಲಾಹೌಲ್-ಸ್ಪಿಟಿಯಲ್ಲಿ ಹಿಮಪಾತ ಮುಂದುವರೆದಿದೆ. ಹಲವಾರು ಪ್ರದೇಶಗಳಲ್ಲಿ ಮೂರು ಅಡಿಗೂ ಹೆಚ್ಚು ಹಿಮ ಸಂಗ್ರಹವಾಗಿದ್ದು, ಭಾರೀ ಹಿಮಪಾತದ ಅಪಾಯವೂ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮತ್ತೊಂದೆಡೆ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಕುಲ್ಲು ಜಿಲ್ಲೆಯಲ್ಲಿ ಅವ್ಯವಸ್ಥೆ ಉಂಟಾಗಿದ್ದು, ಭೂತ್‌ನಾಥ್ ನಾಲಾ ಪ್ರದೇಶದಲ್ಲಿ ಹಲವಾರು ವಾಹನಗಳು ಕೊಚ್ಚಿ ಹೋಗಿವೆ. ಗಾಂಧಿನಗರದಲ್ಲಿ ಅವಶೇಷಗಳ ಅಡಿಯಲ್ಲಿ ವಾಹನಗಳು ಸಿಲುಕಿವೆ. ನಿರಂತರವಾದ ಭಾರೀ ಹಿಮಪಾತವನ್ನು ಪರಿಗಣಿಸಿ, ಜಿಲ್ಲಾಡಳಿತವು ಶುಕ್ರವಾರ ಲಹೌಲ್-ಸ್ಪಿಟಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವಂತೆ ಸೂಚಿಸಿದೆ. ಮಂಡಿ ಜಿಲ್ಲೆಯಲ್ಲಿ ಭೂಕುಸಿತ ಸಂಭವಿಸಿದ್ದು, ಚಂಡೀಗಢ-ಮನಾಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಸ್ಥಗಿತಗೊಂಡಿದ್ದು, ಬಸ್‌ವೊಂದು ಅಪಘಾತಕ್ಕೀಡಾಗಿದೆ. ಇದರಿಂದಾಗಿ ಸಂಚಾರ ದಟ್ಟಣೆ ಹೆಚ್ಚುತ್ತಿದೆ, ಅಧಿಕಾರಿಗಳು ರಸ್ತೆ ತೆರವು ಕಾರ್ಯ ಆರಂಭಿಸಿದ್ದಾರೆ.

ಯೋಧ ಹನುಮಂತಪ್ಪ ನೆನಪಿಸಿದ ದುರ್ಘಟನೆ

ಇನ್ನು ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ನಡೆದ ಹಿಮಪಾತದಲ್ಲಿ BRO ಕಾರ್ಮಿಕರು ಸಿಲುಕಿರುವ ಘಟನೆಯು, 8 ವರ್ಷಗಳ ಹಿಂದೆ ಸಿಯಾಚಿನ್ ಗಡಿಯಲ್ಲಿ ಸಂಭವಿಸಿದ ಹಿಮಪಾತವನ್ನು ನೆನಪಿಸಿದೆ. ಈ ಹಿಮಪಾತದಲ್ಲಿ ಹುಬ್ಬಳ್ಳಿಯ ಯೋಧ ಹನುಮಂತಪ್ಪ ಸೇರಿ ಭಾರತೀಯ ಸೇನೆಯ ಒಟ್ಟು 10 ಯೋಧರು ಹುತಾತ್ಮನಾಗಿದ್ದರು. ಹನುಮಂತಪ್ಪ ಹುತಾತ್ಮರಾಗುವುದಕ್ಕೂ ಮೊದಲು ಪ್ರಧಾನಿ ಮೋದಿ ಅವರು ಸೇನಾ ಆಸ್ಪತ್ರೆಯಲ್ಲಿ ಹನುಮಂತಪ್ಪ ಅವರನ್ನು ಭೇಟಿ ಮಾಡಿ ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಡಿಕೆಶಿ ರಕ್ತದಲ್ಲೇ ಕಾಂಗ್ರೇಸ್ ಇದೆ, ಬೇರೆ ಪಕ್ಷಕ್ಕೆ ಸೇರುತ್ತಾರೆಂಬುದು ವದಂತಿಯಷ್ಟೇ

• ಉದಯವಾಹಿನಿ, ವಿಜಯಪುರ,

ಡಿ.ಕೆ.ಶಿವಕುಮಾರ್‌ರವರ ರಕ್ತದಲ್ಲೇ ಕಾಂಗ್ರೇಸ್ ಇದೆ. ಹೀಗಾಗಿ ಅವರು ಬೇರೆ ಪಕ್ಷಕ್ಕೆ ಸೇರುತ್ತಾರೆ ಎಂಬುದು ತಪ್ಪು ವದಂತಿ ಎಂದು ಸಚಿವ ಜಮೀರ್ ಅಹಮ್ಮದ್ ಖಾನ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಕ್ಷಿಪ್ರ ರಾಜ್ಯ ಕ್ರಾಂತಿಯಾಗಲಿದೆ ಎಂದು ಬಿಜೆಪಿಯವರು ಹಗಲುಗನಸು ಕಾಣುತ್ತಿದ್ದಾರೆ. ಈ ಸರ್ಕಾರ ಅವಧಿ ಪೂರ್ಣಗೊಳಿಸಲಿದೆ. ಮುಂದಿನ 15 ವರ್ಷಗಳಲ್ಲೂ ಕಾಂಗ್ರೇಸ್ ಪಕ್ಷವೇ ಆಡಳಿತದಲ್ಲಿರಲಿದೆ. ಬಿಜೆಪಿಯವರು ಕೇವಲ ಕನಸು ಕಾಣುತ್ತಾ ಇರಬೇಕು ಎಂದು ಲೇವಡಿ ಮಾಡಿದರು. ಬಿಜೆಪಿಯಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಮೊದಲು ಅದರತ್ತ ಗಮನ ಹರಿಸಲಿ. ಕಾಂಗ್ರೇಸ್‌ನಲ್ಲಿ ಯಾವುದೇಗೊಂದಲಗಳಿಲ್ಲ, ಆಪರೇಷನ್ ಕಮಲ ಯಾವುದೂ ನಡೆಯುವುದಿಲ್ಲ. ಬಿಜೆಪಿಯ ಏಳೆಂಟು ಮಂದಿ, ಜೆಡಿಎಸ್‌ನ 12 ರಿಂದ 13 ಮಂದಿ ಶಾಸಕರು ಕಾಂಗ್ರೇಸ್ ಸೇರಲು ಮುಂದಾಗಿದ್ದಾರೆ. ಆದರೆ ಈಗಾಗಲೇ ನಮ್ಮ ಸಂಖ್ಯಾಬಲ 140ರಷ್ಟಿದೆ. ಬೇರೆ ಪಕ್ಷಗಳ ಶಾಸಕರ ಅಗತ್ಯ ಇಲ್ಲ ಎಂದರು. ಬಿಜೆಪಿ-ಜೆಡಿಎಸ್‌ನವರು ರಾಜಕೀಯವಾಗಿ ಆಟ ಆಡಲು ಪ್ರಯತ್ನಿಸುವ ಅವಕಾಶವೇ ಇಲ್ಲ ಎಂದ ಅವರು, ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ತಿಳಿಸಿದರು.

ಹಂಪಿ ಉತ್ಸವಕ್ಕೆ ಎಲ್ಲಾ ಸಿದ್ಧತೆ

ರಾಜ್ಯಾಧ್ಯಂತ ಸಂಚರಿಸುತ್ತಿದ್ದಾರೆ. ಕೆ.ಎನ್.ರಾಜಣ್ಣ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಕೊಯ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಸ್ತ್ರೀಣಾಂ ಸುಖೋದ್ಯಮಕ್ರೂರಂ

ಮನುಸ್ಮೃತಿಯ ಎರಡನೇ ಅಧ್ಯಾಯದ ಮೂವತ್ಮೂರನೇ ಶ್ಲೋಕ. ಹೆಣ್ಣುಮಕ್ಕಳ ಹೆಸರು ಹೇಗಿರಬೇಕೆಂದು ತಿಳಿಸುತ್ತಾರೆ. ಹೆಸರು ವ್ಯಕ್ತಿಯನ್ನು ಕರೆಯಲು ಬಳಕೆ. ಯಾವ ಹೆಸರನ್ನಿಟ್ಟರೂ ಆ ಹೆಸರಿನಿಂದ ಕರೆಯಬಹುದು. ಆದರೆ ಹೆಸರು ಉತ್ತಮ ಅರ್ಥವುಳ್ಳದ್ದಾಗಿದ್ದರೆ ಬಹೂಪಯೋಗ. ಈಶ್ವರ ಸೂರ್ಯ ಸತ್ಯಮೂರ್ತಿ ಧರ್ಮರಾಜ ಇಂಥ ಹೆಸರುಗಳಿದ್ದರೆ ಕರೆಯುವವರಿಗೆ ಕರೆಸಿಕೊಳ್ಳುವವರಿಗೆ ಆ ಹೆಸರಿನ ಮೂಲ ವ್ಯಕ್ತಿಗಳ ನೆನಪಾಗಿ ಅವರ ಗುಣಾದರ್ಶಗಳು ಮನಸ್ಸಿನಲ್ಲಿ ಮೂಡಿ ನಾವೂ ಹಾಗಾಗಬೇಕು ಎಂಬ ಪ್ರೇರಣೆ ಸಿಗುತ್ತದೆ. ಪಾಲಕರು ಪೋಷಕರು ಹಿರಿಯರು ಇಂಥ ಹೆಸರಿನ ಮಕ್ಕಳನ್ನು ಹೆಸರಿಗೆ ತಕ್ಕಂತೆ ಬೆಳೆಸುವ ಪ್ರಯತ್ನ ಮಾಡುತ್ತಾರೆ. ಮೂಲ ವ್ಯಕ್ತಿಗಳಂತೆಯೇ ಆಗದಿದ್ದರೂ ಆ ದಿಕ್ಕಿನಲ್ಲಿ ಬೆಳೆಯುವ ಸಾಧ್ಯತೆ ಇದೆ. ಹೆಣ್ಣು ಮಕ್ಕಳ ಹೆಸರು ಬಹುತೇಕವಾಗಿ ಗಂಗಾ ಯಮುನಾ ಸೀತಾ ಉಮಾ ಪಾರ್ವತೀ ಲಕ್ಷ್ಮೀ ಸರಸ್ವತೀ ಎಂಬುದಾಗಿ ದೀರ್ಘ ಆಕಾರಾಂತ ಈಕಾರಾಂತವಾಗಿ ಇರಬೇಕು. ಕೆಲವರು ಆಧುನಿಕತೆಯನ್ನು ಪ್ರದರ್ಶಿಸಲು ಡಿಂಪಲ್ ಟಿಂಪಲ್ ಇತ್ಯಾದಿ ಅರ್ಥವಿಲ್ಲದ ಹೆಸರುಗಳನ್ನು, ಶಾರದಾವನ್ನು ಶಾರದ ಅನಸೂಯಾವನ್ನು ಅನುಸುಯ ಇತ್ಯಾದಿ ವಿಕೃತಗೊಳಿಸಿ ಬಳಸುತ್ತಾರೆ. ಇದಾಗಬಾರದು. ಭಾಷೆಯನ್ನು ಸರಿಯಾಗಿ ಓದದ್ದರ ದುಷ್ಪರಿಣಾಮ ಇದು.

ಸಿದ್ಧಾಮೃತ ಗುರುಕುಲಂಗೆ ಪ್ರವೇಶಾತಿ

• ಉದಯವಾಹಿನಿ, ಬೆಂಗಳೂರು

ದಕ್ಷಿಣ ತಾಲ್ಲೂಕು ಕೆಂಗೇರಿ ಹೋಬಳಿ ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಸಿದ್ಧಾಮೃತ ಗುರುಕುಲ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. 6 ರಿಂದ 10 ನೇ ತರಗತಿಯ ಗಂಡುಮಕ್ಕಳಿಗೆ ಪ್ರವೇಶ ನೀಡಲಾಗುವುದು. ರಾಮೋಹಳ್ಳಿಯ ಸರ್ಕಾರಿ ಅಥವಾ ಖಾಸಗಿ, ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮದ ಶಾಲೆಗೆ ಸೇರಿಸುವುದು ಪಾಲಕ/ ಪೋಷಕರ ಐಚ್ಛಿಕ ಹೊಣೆ. ಆಶ್ರಮದಲ್ಲಿ ಊಟ ವಸತಿಯನ್ನು ನೀಡುವುದರ ಜೊತೆಗೆ ವೇದ ಹಾಗೂ ಸಂಸ್ಕೃತದ ಪಾಠಗಳನ್ನು ಮಾಡಲಾಗುವುದು. ಆಶ್ರಮದ ಪವಿತ್ರ ಪ್ರಶಾಂತ ಪರಿಸರ, ಪ್ರಾರ್ಥನೆ, ಸ್ವಾಮೀಜಿಯವರ ಸಾನ್ನಿಧ್ಯ ಹಾಗೂ ಸ್ವಾವಲಂಬನೆ – ಸೇವೆ – ಯೋಗ – ಸಂಗೀತ – ಶಿಸ್ತು–ಸಂಸ್ಕಾರಗಳ ಕಲಿಕೆ ವಿದ್ಯಾರ್ಥಿಯನ್ನು ಆದರ್ಶದತ್ತ ಕೊಂಡೊಯ್ಯುವವು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮಾರ್ಚ್ 31. ಎಪ್ರಿಲ್ ತಿಂಗಳಲ್ಲಿ ಸಂದರ್ಶನ ನಡೆಸಿ ಆಯ್ಕೆ ಮಾಡಲಾಗುವುದು. ಆಸಕ್ತರು ವಾಟ್ಸಾಪ್ , ಈ ಮೇಲ್ ಅಥವಾ ಪೋಸ್ಟ್ ಮೂಲಕ ಅರ್ಜಿ ಪಡೆದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ : 93430 88778, 9731004160

ಪ್ಯಾನಾಸಾನಿಕ್ ಕಾರ್ಯಾಗಾರ

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ಛಾಯಾಚಿತ್ರಗ್ರಾಹಕರ ಸಂಘ ಇವರ ನೇತೃತ್ವದಲ್ಲಿ ಪೆನಾಸೋನಿಕ್ ಕಂಪನಿಯ ವಿಶೇಷ ಕಾರ್ಯಾಗಾರವನ್ನು ಕೆಪಿಎ ಸಭಾಂಗಣದಲ್ಲಿ ಆಯೋಜಿಸಲಾಯಿತು, ಈ ಕಾರ್ಯಾಗಾರದಲ್ಲಿ ಪೆನಾಸೋನಿಕ್ ಹಾಗೂ ಸಿಗ್ಮಾ ಕಂಪನಿಯ ಕ್ಯಾಮರಾ ಪರಿಕರಗಳ ಬಗ್ಗೆ ಕ್ಯಾಮರಾ ಟೆಕ್ನೀಷಿಯನ್ ಅಶೋಕ್ ಪ್ರಾತ್ಯಕ್ಷಿಕೆನ್ನು ನೀಡಿದರು. ಈ ಕಾರ್ಯಕ್ರಮವನ್ನು ಕೆಪಿಎ ಅಧ್ಯಕ್ಷರಾದ ಹೆಚ್.ಎಸ್. ನಾಗೇಶ್, ಉಪಾಧ್ಯಕ್ಷರಾದ ರವಿಕುಮಾರ್,ಹೇಮರಾಜು ನಿರ್ದೇಶಕರಾದ ಸುರೇಶ್, ಮಾಜಿ ಅಧ್ಯಕ್ಷರಾದ ಪರಮೇಶ್ ಹಾಗೂ ಮಾಜಿ ನಿರ್ದೇಶಕರಾದ ಚಂದ್ರಶೇಖರ ಬೆಳಗುಂಬ ಹಾಲಪ್ಪ ಉಪಸ್ಥಿತರಿದ್ದರು ಇವರೊಂದಿಗೆ ಪೆನಾಸೋನಿಕ್ ಕಂಪನಿಯ ಪ್ರದ್ಯುಮ್ನ, ಚೇತನ್, ರಘು, ವೆಂಕಟೇಶ್ ಭಾಗವಹಿಸಿದ್ದರು.

ಬಿಎಂಟಿಸಿ ಬಸ್‌ಗಳಿಗೆ ಸಿಲುಕಿ ಅಪ್ಪಚ್ಚಿಯಾದ ಆಟೋ ಚಾಲಕ ಸೇರಿ ಇಬ್ಬರು ಬಲಿ

• ಉದಯವಾಹಿನಿ, ಬೆಂಗಳೂರು

ಎರಡು ಬಿಎಂಟಿಸಿ ಬಸ್‌ಗಳಿಗೆ ಸಿಲುಕಿ ಆಟೋ ಅಪ್ಪಚ್ಚಿಯಾದ ಪರಿಣಾಮ ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿರುವ ಘಟನೆ ನಗರದ ಬನಶಂಕರಿ ಸಂಚಾರಿ ಪೊಲೀಸ್ ಠಾಣೆಯ ಸೀತಾ ಸರ್ಕಲ್ ಬಳಿ ನಡೆದಿದೆ. ಮೃತರನ್ನು ಪ್ರಯಾಣಿಕ ವಿಷ್ಣು (80) ಎಂದು ಗುರುತಿಸಲಾಗಿದ್ದು, ಡಾಕ್ಟರ್ ಆಗಿದ್ದರು. ಇನ್ನೂ ಆಟೋ ಚಾಲಕನನ್ನು ಅನಿಲ್ ಕುಮಾರ್ ಎಂದು ತಿಳಿಯಲಾಗಿದೆ. ಡಾ.ವಿಷ್ಣು ಗುರುವಾರ ತಮ್ಮ ಬರ್ತ್‌ಡೇ ಆಚರಿಸಿಕೊಂಡಿದ್ದರು. ತಂದೆಯ ಬರ್ತ್‌ಡೇಗಾಗಿ ವಿದೇಶದಿಂದ ಬಂದಿದ್ದ ಮಗ, ಗುರುವಾರ ವಾಪಸ್ ತೆರಳಿದ್ದರು. ಆದರೆ ಮಗ ವಿದೇಶಕ್ಕೆ ಹೋಗಿ ತಲುಪುವ ಮುನ್ನ ತಂದೆ ಮೃತಪಟ್ಟಿದ್ದಾರೆ. ಆಟೋದಲ್ಲಿ ವಿಷ್ಣು ತೆರಳುತ್ತಿದ್ದರು. ಈ ವೇಳೆ ಬಿಎಂಟಿಸಿ ಬಸ್, ಹಿಂದಿನಿಂದ ಡಿಕ್ಕಿ ಹೊಡೆದಿದ್ದು, ಆಟೋದಲ್ಲಿದ್ದ ಇಬ್ಬರು ಕೂಡ ಮೃತಪಟ್ಟಿದ್ದಾರೆ. ಇಂದಿರಾನಗರ ಡಿಪೋಗೆ ಸೇರಿದ್ದ ಬಸ್ ಇದಾಗಿದ್ದು, ಬಸ್ ಸಂಖ್ಯೆ ಏ057ಈ9574 ಎಂದು ತಿಳಿಯಲಾಗಿದೆ. ಬನಶಂಕರಿ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

ಮಾ.22 ರಂದು ಕರ್ನಾಟಕ ಬಂದ್

• ಉದಯವಾಹಿನಿ, ಬೆಂಗಳೂರು

ಕನ್ನಡಿಗರ ಮೇಲೆ ಮರಾಠಿಗರ ದಬ್ಬಾಳಿಕೆ ಖಂಡಿಸಿ ಮತ್ತು ಬೆಳಗಾವಿಯಲ್ಲಿ ಎಂಇಎಸ್ ಪುಂಡರಿಗೆ ಕಡಿವಾಣ ಹಾಕುವಂತೆ ಆಗ್ರಹಿಸಿ ವಿವಿಧ ಕನ್ನಡಪರ ಸಂಘಟನೆಗಳು ಮಾ.22 ಶನಿವಾರ ಕರ್ನಾಟಕ ಬಂದ್‌ಗೆ ಕರೆ ನೀಡಿವೆ.

ಬೆಂಗಳೂರಿನಲ್ಲಿ ವಿವಿಧ ಕನ್ನಡ ಸಂಘಟನೆಗಳ ಸಭೆ ಸೇರಿ ಈ ಮಹತ್ವದ ನಿರ್ಧಾರವನ್ನು ತೆಗೆದುಕೊಂಡಿದೆ. ಕನ್ನಡಕ್ಕಾಗಿ, ಕನ್ನಡಿಗರಿಗಾಗಿ ಮಾ.22 ರಂದು ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ ಕರ್ನಾಟಕ ಬಂದ್ ನಡೆಯಲಿದೆ ವಾಟಾಳ್ ನಾಗರಾಜ್ ಹೇಳಿದ್ದಾರೆ. ಸುದ್ದಿಗೋಷ್ಠಿ ನಡೆಸಿದ ಮಾತನಾಡಿದ ಅವರು, ಮಾ.3 ರಂದು ಬೆಳಗ್ಗೆ 11 ಗಂಟೆಗೆ ರಾಜಭವನ ಮುತ್ತಿಗೆ ಹಾಕಲಿದ್ದೇವೆ. ಮಾ.7ಕ್ಕೆ ಬೆಳಗಾವಿ ಚಲೋ ಕೈಗೊಳ್ಳುತ್ತೇವೆ. ಮಾ.11 ರಂದು ಮೇಕೆದಾಟು ಯೋಜನೆಗೆ ಆಗ್ರಹಿಸಿ ಅತ್ತಿಬೆಲೆ ತಮಿಳುನಾಡು ಗಡಿ ಬಂದ್ ಮಾಡಿ ಪ್ರತಿಭಟಿಸುತ್ತೇವೆ. ಮಾ.14 ರಂದು ಮೈಸೂರು, ಮಂಡ್ಯ, ರಾಮನಗರ ಡಿಸಿ ಕಚೇರಿಗೆ ಮುತ್ತಿಗೆ ಹಾಕುತ್ತೇವೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಸೇರಿದಂತೆ ಇಡೀ ಬೆಳಗಾವಿಯ ಎಲ್ಲಾ ಅಧಿಕಾರಿಗಳ ಬದಲಾವಣೆ ಆಗಬೇಕು. ಎಲ್ಲಾ ಕನ್ನಡ ಅಧಿಕಾರಿಗಳನ್ನ ಹಾಕಬೇಕು. ಎಂಇಎಸ್ ನಿಷೇಧ ಮಾಡಿ ಶಿವಸೇನೆ ಕಾರ್ಯಕರ್ತರನ್ನು ಗಡಿಪಾರು ಮಾಡಬೇಕು. ಸಾಂಬಾಜಿ ಪ್ರತಿಮೆ ತೆರವು ಮಾಡಬೇಕು. ಕೇಂದ್ರ ಸರ್ಕಾರ ರಾಜ್ಯಕ್ಕೆ ಮಲತಾಯಿ ಧೋರಣೆ ಮಾಡುತ್ತಿದೆ ಎಂದು ಆಕ್ರೋಶ ಹೊರಹಾಕಿದರು.

ದ್ವಿತೀಯ ಪಿಯುಸಿ ಪರೀಕ್ಷೆ: ಬಿಗಿ ಭದ್ರತೆ

ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭ, ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ಕೆಲವು ಮುಖ್ಯ ಸೂಚನೆ

• ಉದಯವಾಹಿನಿ, ಬೆಂಗಳೂರು

ನಾಳೆಯಿಂದ ರಾಜ್ಯಾದ್ಯಂತ ದ್ವಿತೀಯ ಪಿಯುಸಿ ಪರೀಕ್ಷೆಗಳು ಆರಂಭವಾಗಲಿದ್ದು, ಈ ಬಾರಿ ಮುಖ್ಯ ಅಧೀಕ್ಷಕರು ಕ್ಯಾಮರಾ ಇಲ್ಲದ ಸಾಮಾನ್ಯ ಮೊಬೈಲ್ ಫೋನ್ ಅನ್ನು ಮಾತ್ರ ಇಟ್ಟುಕೊಳ್ಳಲು ಅವಕಾಶ ನೀಡಲಾಗಿದೆ. ಮಾರ್ಚ್ 1 ರಿಂದ 20 ರವರೆಗೆ ಈ ಪರೀಕ್ಷೆಗಳು ನಡೆಯಲಿವೆ. ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ಕೆಲವು ಮುಖ್ಯ ಸೂಚನೆಗಳನ್ನು ಅನುಸರಿಸಬೇಕು. ಜತೆಗೆ ಯಾವುದೇ ಎಲೆಕ್ಟ್ರಾನಿಕ್ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ತರುವುದು ಮತ್ತು ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ.

ಪರೀಕ್ಷಾ ಅಕ್ರಮ ತಡೆಗೆ ಕಳೆದ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಜಾರಿಗೊಳಿಸಿದ್ದ ವೆಬ್ ಕಾಸ್ಟಿಂಗ್ ಕಣ್ಗಾವಲನ್ನು ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆಗೆ ವಿಸ್ತರಿಸಲಾಗಿದೆ. ಪರೀಕ್ಷೆ ಗೌಪ್ಯತೆ, ಪರೀಕ್ಷೆಯ ಪಾವಿತ್ರ್ಯತೆ ಮತ್ತು ಸಮಗ್ರತೆಗೆ ಧಕ್ಕೆಯಾಗದಂತೆ ಮುಕ್ತ ಹಾಗೂ ನ್ಯಾಯಸಮ್ಮತವಾಗಿ ಪರೀಕ್ಷಾ ಕಾರ್ಯವನ್ನು ಯಶಸ್ವಿಗೊಳಿಸಬೇಕು ಎಂದು ಸೂಚನೆ ನೀಡಲಾಗಿದೆ. ಒಟ್ಟಾರೆ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನೀಡಿರುವ ಮಾರ್ಗಸೂಚಿಗಳನ್ನು ಎಲ್ಲ ಹಂತದ ಅಧಿಕಾರಿಗಳು ಕಟ್ಟುನಿಟ್ಟಾಗಿ ಪಾಲಿಸಬೇಕು. 1171 ಕೇಂದ್ರಗಳ ಪ್ರತಿ ಕೊಠಡಿಯಲ್ಲಿಯೂ ಸಿಸಿ ಕ್ಯಾಮರಾ ಅಳವಡಿಸಲಾಗಿದೆ. ಯಾವುದೇ ಕೊಠಡಿಯಲ್ಲಿ ವಿದ್ಯಾರ್ಥಿ ಮಾತನಾಡುವುದು, ನಕಲು ಮಾಡುವುದು, ಕಾಪಿ ಚೀಟಿ ಇಟ್ಟುಕೊಂಡು ಪರೀಕ್ಷೆ ಬರೆಯುವುದು ಇತರೆ ಯಾವುದೇ ಅಕ್ರಮ ನಡೆದರೆ ಅದನ್ನು ವೆಬ್ ಕಾಸ್ಟಿಂಗ್ ಮೂಲಕ ಆಯಾ ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಿರುವ ನಿಯಂತ್ರಣ ಕೊಠಡಿಗಳಲ್ಲಿ ಗಮನಿಸಬಹುದು.

ಉದಯವಾಹಿನಿ ಚಿತ್ರ

ಅಧಿಕಾರಿಗಳು ಅಗತ್ಯ ಕ್ರಮ

ನಿಷೇಧಾಜ್ಞೆ ಜಾರಿ

ಪರೀಕ್ಷಾ ಗೌಪ್ಯತೆ ಹಾಗೂ ಪಾರದರ್ಶಕತೆ ಕಾಪಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಅಗತ್ಯ ಕ್ರಮವಹಿಸಬೇಕು. ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಕಲಂ 163ರ ನಿಷೇಧಾಜ್ಞೆಯನ್ನು ಜಿಲ್ಲಾಧಿಕಾರಿಗಳು ಜಾರಿಗೊಳಿಸಿ, ಆದೇಶಿಸುವರು.

ವಿದ್ಯಾರ್ಥಿಗಳಿಗೆ ಈ ನಿಯಮ ಕಡ್ಡಾಯ

- ಮುಖ್ಯ ಅಧೀಕ್ಷಕರು ಕ್ಯಾಮರಾ ಹೊಂದಿರದ ಸಾಮಾನ್ಯ ಮೊಬೈಲ್ ಮಾತ್ರ ಇರಿಸಿಕೊಳ್ಳಬಹುದು.
- ಎಲ್ಲಾ ಪರೀಕ್ಷಾ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಮೊಬೈಲ್, ಸ್ಮಾರ್ಟ್ ವಾಚ್ ಬಳಕೆ ನಿಷೇಧ
- ಎಲೆಕ್ಟ್ರಾನಿಕ್ ಸಾಮಾಗ್ರಿಗಳನ್ನು ಒಯ್ಯುವುದು ಮತ್ತು ಬಳಸುವುದನ್ನು ನಿಷೇಧಿಸಿದೆ.
- ಪರೀಕ್ಷಾ ಕೇಂದ್ರದೊಳಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ, ಚಿತ್ರೀಕರಣ ಮುಂತಾದವುಗಳನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಎಷ್ಟು ವಿದ್ಯಾರ್ಥಿಗಳು: 7,13 862 ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆ-1 ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ 6,61,474 ತರಗತಿ ವಿದ್ಯಾರ್ಥಿಗಳಿದ್ದಾರೆ. 34,071 ಪುನರಾವರ್ತಿತ, 18,317 ಖಾಸಗಿ ಅಭ್ಯರ್ಥಿಗಳಾಗಿದ್ದಾರೆ. ಐವರು ತೃತೀಯ ಲಿಂಗಿಗಳಿದ್ದಾರೆ. ಪರೀಕ್ಷಾ ಕೇಂದ್ರಗಳ ಸುತ್ತ ಅಗತ್ಯ ಪೊಲೀಸ್ ಬಂದೋಬಸ್ತ್ ಕಲ್ಪಿಸಬೇಕು. ಪೊಲೀಸ್ ರಕ್ಷಣೆಯಲ್ಲಿಯೇ ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ತಲುಪಿಸಬೇಕು. ಪ್ರಶ್ನೆಪತ್ರಿಕೆಗಳ ರಕ್ಷಣೆಗಾಗಿ ನೇಮಿಸಿರುವ ತಹಶೀಲ್ದಾರ್, ಬಿಇಒ, ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರನ್ನು ಒಳಗೊಂಡ ವಿಶೇಷ ಪ್ರಶ್ನೆ ಪತ್ರಿಕಾ ಪಾಲಕರ ತ್ರಿಸದಸ್ಯ ಸಮಿತಿ ನಿಯಮಾನುಸಾರ ಕಾರ್ಯನಿರ್ವಹಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಲ್ಲಿ ಉತ್ತಮ ಆಹ್ಲಾದಕರ ವಾತಾವರಣದಲ್ಲಿ ಪರೀಕ್ಷೆ ಬರೆಯುವಂತಾಗಬೇಕು. ಈ ನಿಟ್ಟಿನಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಡೆಸ್ಕ್, ಗಾಳಿ–ಬೆಳಕಿನ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯ ಸೇರಿದಂತೆ ಅಗತ್ಯ ಸೌಲಭ್ಯಗಳು ಕಲ್ಪಿಸಬೇಕು.

ಹಲವೆಡೆ (ಮಾ.2) ದಿನವಿಡೀ ವಿದ್ಯುತ್ ಕಡಿತ

• ಉದಯವಾಹಿನಿ, ಬೆಂಗಳೂರು

ಬೆಸ್ಕಾಂ ಪೀಣ್ಯ ಸ್ಟೇಷನ್‌ನಲ್ಲಿ ತುರ್ತು ಕಾಮಗಾರಿ ಹಿನ್ನೆಲೆ ಮಾರ್ಚ್ 2 (ಭಾನುವಾರ) ಬೆಂಗಳೂರಿನ ಹಲವು ಬಡಾವಣೆಗಳಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ವಿದ್ಯುತ್ ಕಡಿತವಾಗಲಿದೆ. 220/66/11 ಇಗಿ ಎಸ್.ಆರ್.ಎಸ್ ಪೀಣ್ಯ ಉಪಕೇಂದ್ರದಲ್ಲಿ ಕೆಪಿಟಿಸಿಎಲ್ ವತಿಯಿಂದ ತುರ್ತು ನಿರ್ವಹಣಾ ಕಾಮಗಾರಿ ಹಿನ್ನೆಲೆಯಲ್ಲಿ ಈ ಕೆಳಕಂಡ ಪ್ರದೇಶಗಳಲ್ಲಿ ದಿನಾಂಕ 02.03.2025 (ಭಾನುವಾರ) ರಂದು ಬೆಳಗ್ಗೆ 10:00 ಯಿಂದ ಮಧ್ಯಾಹ್ನ 05:00 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.



ವಿದ್ಯುತ್ ಕಡಿತವಾಗುವ ಪ್ರದೇಶಗಳು ಯಾವೆಲ್ಲಾ

ಗೃಹಲಕ್ಷ್ಮಿ–ಅಪಾರ್ಟ್ ಮೆಂಟ್, ಎಸ್ ಎಂ ರಸ್ತೆ, ಜಾಲಹಳ್ಳಿ ಕ್ರಾಸ್, ಚೊಕ್ಕಸಂದ್ರ, ಮಾರುತಿ ಲೇಔಟ್, ಕೆಂಪಯ್ಯ ಲೇಔಟ್, ಜಿಜಿ ಪಾಳ್ಯ, ಇಸ್ರೋ, ನಾರಾಯಣಪುರ, ಟಿಟಿಎಫ್,ಸರ್ಕಲ್, ಗಣಪತಿನಗರ ಮುಖ್ಯ ರಸ್ತೆ, ಪೋಲಿಸ್ ಠಾಣೆ ರಸ್ತೆ, ಚಾಮುಂಡಿಪುರ, ರಾಜೇಶ್ವರಿನಗರ, ಆಕಾಶ್ ಥೀಯೇಟರ್ ರಸ್ತೆ, ವಿಜ್ಞಾನ ಪಬ್ಲಿಕ್ ಸರ್ಕಲ್ ರಸ್ತೆ, ಬೈರವೇಶ್ವರ ನಗರ, ಬ್ಯಾಂಕ್ ಕಾಲೋನಿ, ಮುನೇಶ್ವರ ಲೇಔಟ್, ಎಫ್ ಎಫ್ ಲೇಔಟ್, ಎನ್ ಎಸ್ ಲೇಔಟ್, ಕೆಜಿ ಲೇಔಟ್, ರಾಜೀವ್ ಗಾಂಧಿನಗರ ಭಾಗಶಃ, ಚೌಡೇಶ್ವರಿ ನಗರ ಭಾಗಶಃ, ಲಗ್ಗೆರೆ ಹಳೆಗ್ರಾಮ ಭಾಗಶಃ. ಪೀಣ್ಯ 4ನೇ ಹಂತ, 4ನೇ ಮುಖ್ಯ, 8ನೇ ಕ್ರಾಸ್, ಎಚ್ ಎಂಟಿ, ಬಿ.ಎಂ.ಟಿ. ಗಾರ್ಡನ್, ಪೀಣ್ಯ ಪೊಲೀಸ್ ಸ್ಟೇಷನ್ ರಸ್ತೆ, ಟೆಲಿಫೋನ್ ಎಕ್ಸ್ ಚೇಂಜ್, 6ನೇ ಕ್ರಾಸ್, ರಿಲಯನ್ಸ್ ಕಮ್ಯೂನಿಕೇಷನ್, ಮುನೇಶ್ವರ ದೇವಸ್ಥಾನ ರಸ್ತೆ, ಮೆಕ್ ಲೇಔಟ್, ಮಲಯಾ:ಳಿ ಅಥಿತಿ ಗೃಹ ರಸ್ತೆ, ಕೆಎಚ್ ಬಿ ಲೇಔಟ್, ರಾಜೇಶ್ವರಿನಗರ, ಆಕಾಶ್ ಥಿಯೇಟರ್ ರಸ್ತೆ, ಫ್ರೆಂಡ್ಸ್ ಸರ್ಕಲ್, 6ನೇ ಮುಖ್ಯ ರಸ್ತೆ, ವಿಭಾಗ ರಸ್ತೆ, 5ನೇ ಮುಖ್ಯ ರಸ್ತೆ, ಯೂಕೋ ಬ್ಯಾಂಕ್ ರಸ್ತೆ, ಥರ್ಲಾಕ್ ರಸ್ತೆ, 7ನೇ ಮುಖ್ಯ ರಸ್ತೆ, 3ನೇ ಹಂತ, ರಾಜಗೋಪಾಲ್ ನಗರ ಕಸ್ತೂರಿ ಬಡಾವಣೆ, ಜೆಕೆ ಡಬ್ಲ್ಯೂ ಲೇಔಟ್, ಯಶವಂತಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಟ್ಯಾಟು ಇಂಕ್ ನಿಷೇಧಕ್ಕೆ ದಿನೇಶ್ ಆಗ್ರಹ

• ಉದಯವಾಹಿನಿ, ಬೆಂಗಳೂರು

ಟ್ಯಾಟು ಹಾಕುವ ಇಂಕ್ ನಿಂದಾಗಿ ಮಾರಣಾಂತಿಕ ಕಾಯಿಲೆ ಹಾಗೂ ಗಂಭೀರ ಚರ್ಮ ರೋಗಗಳು ಉಲ್ಬಣಗೊಳ್ಳುವ ಸಾಧ್ಯತೆ ಹಿನ್ನೆಲೆ ಕೇಂದ್ರ ಸರ್ಕಾರ ಇದನ್ನು ನಿಷೇಧಿಸಲು ಮುಂದಾಗಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆಗ್ರಹಿಸಿದ್ದಾರೆ.

ಆಹಾರ ಸುರಕ್ಷತೆ ಮತ್ತು ಔಷಧಿ ಗುಣಮಟ್ಟದ ಕುರಿತಂತೆ ಇತ್ತಿಚಿನ ಬೆಳವಣಿಗೆಗಳ ಕುರಿತು ಆರೋಗ್ಯ ಸೌಧದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಟ್ಯಾಟು ಇಂಕ್‌ಗೆ ಸಂಬಂಧಿಸಿದಂತೆ, ಯಾವುದೇ ಗುಣಮಟ್ಟ ಇರುವುದಿಲ್ಲ ಹಾಗೂ ಔಷಧ ಮತ್ತು ಕಾಂತಿವರ್ಧಕ ಅಧಿನಿಯಮಗಳ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ಈ ಟ್ಯಾಟು ಇಂಕ್ ನಲ್ಲಿ ಇರುವ ರಸಾಯನಿಕ ಮತ್ತು ಇತರೆ ಅಂಶಗಳು ಚರ್ಮದ ಮೂಲಕ ದೇಹವನ್ನು ಪ್ರವೇಶಿಸ

ದಲಿತರ ಅಭಿವೃದ್ಧಿಗೆ ಮೀಸಲಿಟ್ಟ ಹಣ ಗ್ಯಾರಂಟಿಗಳಿಗೆ ಬಳಕೆ: ಕೋಟಾ ಶ್ರೀನಿವಾಸ

• ಉದಯವಾಹಿನಿ ಮಂಡ್ಯ

ಎಸ್ಸಿ ಎಸ್ಟಿಗೆ ನೀಡಿದ ಅನುದಾನ ದುರ್ಬಳಕೆ

ಕಾಂಗ್ರೇಸ್ ಸರ್ಕಾರ ಎಸ್ಸಿ, ಎಸ್ಟಿಗೆ ಮೀಸಲಿಟ್ಟ ಅನುದಾನವನ್ನು ಗ್ಯಾರಂಟಿಗಳಿಗೆ ಸೇರಿದಂತೆ ಇತರೆ ಕಾರ್ಯಕ್ರಮಕ್ಕೆ ಬಳಸಿ, ಎಸ್ಸಿ, ಎಸ್ಟಿ ಸಮುದಾಯದ ವಿರೋಧಿ ಸರ್ಕಾರದಂತೆ ವರ್ತಿಸುತ್ತಿದೆ ಎಂದು ಮಾಜಿ ಸಚಿವ ಹಾಗೂ ಹಾಲಿ ಸಂಸದ ಕೋಟಾ ಶ್ರೀ ನಿವಾಸ ಪೂಜಾರಿ ಆರೋಪಿಸಿದರು.

ಬಿಜೆಪಿ ರಾಜ್ಯದಲ್ಲಿ 14 ತಂಡ ರಚಿಸಿ ಪ್ರತಿ ತಂಡಕ್ಕೆ 2 ಲೋಕಸಭಾ ಕ್ಷೇತ್ರಗಳ ಹಂಚಿ ರಾಜ್ಯದಲ್ಲಿ ಪ್ರಸ್ತುತ ಸರ್ಕಾರ ಎಸ್ಸಿ ಎಸ್ಟಿಗೆ ನೀಡಿದ ಅನುದಾನ ದುರ್ಬಳಕೆ ಮಾಡುತ್ತಿದ್ದು, ಆ ಹಣವನ್ನು ಎಸ್ಸಿ ಎಸ್ಟಿ ಸಮುದಾಯಕ್ಕೆ ಬಳಸಲು ಆಗ್ರಹಿಸಿದರು. 2023ರಲ್ಲಿ ಎಸ್ಸಿ, ಎಸ್ಟಿಗೆ ಮೀಸಲಿರಿಸಿದ 11,144 ಕೋಟಿ ರೂ, 2024ರಲ್ಲಿ 14,282 ಸಾವಿರ ಕೋಟಿ ರೂ ಹಣವನ್ನು ಗ್ಯಾರಂಟಿಗೆ ಬಳಸಿದ್ದು, ಈಗ 2025ರಲ್ಲಿ ಮಂಡನೆ ಮಾಡುವ ಬಜೆಟ್‌ನಲ್ಲಿ 14,488 ಸಾವಿರ ಕೋಟಿ ತೆಗೆದಿಡಲು ಯೋಜನೆ ರೂಪಿಸುತ್ತಿದೆ. 2023ರಿಂದ 25ರವರೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಮೀಸಲಿರಿಸಿದ 39,914 ಸಾವಿರ ಕೋಟಿಗಳನ್ನು ಬಳಸಲಾಗುತ್ತಿದೆ ಎಂದು ಆರೋಪಿಸಿದರು.

ಗ್ಯಾರಂಟಿಗೆ ಎಸ್ಸಿಪಿ ಹಾಗೂ ಟಿಎಸ್ಪಿ ಹಣವನ್ನು ಬಳಸಿಕೊಂಡು ಪರಿಶಿಷ್ಟರ ಹಣವನ್ನು ಪರಿಶಿಷ್ಟರಿಗೆ ನೀಡಲಾಗುತ್ತಿದೆ ಎಂದು ಹೇಳುತ್ತಿರುವ ಸರ್ಕಾರ ಗ್ಯಾರಂಟಿ ಯೋಜನೆಯು ಎಲ್ಲಾ ವರ್ಗ

ಉದಯವಾಹಿನಿ ಚಿತ್ರ

ದವರಿಗೂ ದೊರೆಯುತ್ತಿದ್ದು, ಅಲ್ಪಸಂಖ್ಯಾತ, ಹಿಂದುಳಿದ ವರ್ಗ, ಹಾಗೂ ಸಾಮಾನ್ಯ ವರ್ಗದ ಹಣವನ್ನು ಯಾಕೆ ಗ್ಯಾರಂಟಿಗೆ ಬಳಸುತ್ತಿಲ್ಲ ಎಂದು ಪ್ರಶ್ನಿಸಿದರು. ಇದು ಸಾಲದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾರಿ ಇರುವಂತಹ ವಿವಿಧ ನಿಗಮಗಳಿಗೂ ಮೀಸಲಿರಿಸಲಾದ 332 ಸಾವಿರ ಕೋಟಿ ಹಣದಲ್ಲಿ ಕನಿಷ್ಠ ಮಟ್ಟದ ಹಣವನ್ನು ಪರಿಶಿಷ್ಠ ಜಾತಿ, ಪರಿಶಿಷ್ಟ ಪಂಗಡಗಳಿಗೆ ಬಳಸಿ, ಬೃಹತ್ ಮೊತ್ತದ ಹಣವನ್ನು ಗ್ಯಾರಂಟಿಗೆ ವಿನಿಯೋಗಿಸಲಾಗಿದೆ ಎಂದರು.

ಮೀಸಲಿರಿಸಿದ ಅನುದಾನ ಅನ್ಯ ಕಾರ್ಯಕ್ರಮಗಳಿಗೆ ವಿನಿಯೋಗಿಸುವುದರಿಂದ ಸದರಿ ಸಮುದಾಯದ ಅಭಿವೃದ್ಧಿ ಕುಂಠಿತವಾಗಲಿದ್ದು, ಸದರಿ ಹಣವನ್ನು ಹಿಂದಿರುಗಿಸಿ, ಮುಂದಿನ ಬಜೆಟ್‌ನಲ್ಲಿಯೂ ಎಸ್ಸಿ ಎಸ್ಟಿ ಸಮುದಾಯದ ಹಣವನ್ನು ಗ್ಯಾರಂಟಿಗೆ ಬಳಸದೇ ಸಮುದಾಯಕ್ಕೆ ಸದ್ವಿನಿಯೋಗವಾಗುವಂತೆ ಮಾಡಬೇಕು ಎಂದು ಆಗ್ರಹಿಸಿ ಜನಜಾಗೃತಿ ಮಾಡಲಾಗುತ್ತಿದೆ ಎಂದು ಹೇಳಿದರು.

ಸಿಎ ನಿವೇಶನ ವಶಕ್ಕೆ ಪಡೆಯಲು ಸಹಕಾರ: ನಂಜೇಗೌಡ

ಕೆಲವು ಬಡಾವಣೆಗಳಲ್ಲಿ ಪುರಸಭೆಗೆ ಸೇರಿದ ನಿವೇಶನಗಳನ್ನು ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಖಾತೆ ಮಾಡಿಕೊಂಡಿದ್ದಾರೆ

• ಉದಯವಾಹಿನಿ ಮಾಲೂರು

ಪುರಸಭಾ ವ್ಯಾಪ್ತಿಯಲ್ಲಿ ಅಧಿಕಾರಿಗಳು ಗುರುತಿಸಿರುವ 329 ಸಿಎ ನಿವೇಶನಗಳ ವೈಕಿ ಸಂಘ ಸಂಸ್ಥೆಗಳು ನಿರ್ಮಿಸಿಕೊಂಡಿರುವ ಕಟ್ಟಡಗಳನ್ನು ಹೊರತುಪಡಿಸಿ ಉಳಿದ ಸಿಎ ನಿವೇಶನಗಳು ಪುರಸಭೆ ವಶಕ್ಕೆ ಪಡೆಯಲು ಎಲ್ಲಾ ಸದಸ್ಯರು ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡುವಂತೆ ಶಾಸಕ ಕೆ ವೈ ನಂಜೇಗೌಡ ಹೇಳಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ಪುರ ಸಭಾ ಅಧ್ಯಕ್ಷ ಕೋಮಲ ನಾರಾಯಣ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಪುರಸಭೆಯ ವ್ಯಾಪ್ತಿಯಲ್ಲಿರುವ ಕೆಲವು ಬಡಾವಣೆಗಳಲ್ಲಿ ಪುರಸಭೆಗೆ ಸೇರಿದ ನಿವೇಶನಗಳನ್ನು ಕೆಲವರು ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಖಾತೆ ಮಾಡಿಸಿಕೊಂಡಿದ್ದು, ಅಂತಹ ನಿವೇಶನಗಳನ್ನು ಗುರುತಿಸುವಂತೆ ಪುರಸಭಾ ಅಧಿಕಾರಿಗಳಿಗೆ ಸೂಚಿಸಲಾಗಿತ್ತು, ಅದರಂತೆ ಪುರಸಭೆಯ ಕಂದಾಯ ಶಾಖೆಯ ಅಧಿಕಾರಿಗಳು ಈಗಾಗಲೇ 329 ಸಿಎ ನಿವೇಶನಗಳನ್ನು ಗುರುತಿಸಿದ್ದಾರೆ, ಆ ನಿವೇಶನಗಳಲ್ಲಿ ಸಮುದಾಯಗಳ ಸಂಘಗಳ ಸಿಎ ನಿವೇಶನಗಳಲ್ಲಿ ಕಟ್ಟಡಗಳನ್ನು ನಿರ್ಮಿಸಿಕೊಂಡಿದ್ದರೆ, ಅವರಿಗೆ ಪುರಸಭೆಯಿಂದ ದಾಖಲೆಗಳನ್ನು ಮಾಡಿಕೊಟ್ಟು ಅಂತಹ ನಿವೇಶನಗಳನ್ನು ಹೊರತುಪಡಿಸಿ ಇನ್ನುಳಿದ ವೈಯಕ್ತಿಕವಾಗಿ ಹೊಂದಿದ್ದರೆ, ಅಂತಹ ಸಿಎ ನಿವೇಶನಗಳನ್ನು ಮುಲಾಜಿಲ್ಲದೆ ಪುರಸಭೆಯ ವಶಕ್ಕೆ ಪಡೆಯುವ ಕೆಲಸ ಮಾಡಬೇಕು ಪುರಸಭೆಯ ಅಧಿಕಾರಿಗಳು ಸಿಎನಿವೇಶನಗಳನ್ನು ವಶಪಡಿಸಿಕೊಳ್ಳಲು ಬಂದಾಗ ಅವರಿಗೆ ಸದಸ್ಯರು ಆಯಾ ವಾಡುಗಳಲ್ಲಿ ಸಂಪೂರ್ಣ ಸಹಕಾರ ನೀಡುವಂತೆ ಹೇಳಿದರು.

ಎತ್ತಿನಹೊಳೆ ಯೋಜನೆಯಿಂದ 2 ವರ್ಷದೊಳಗೆ ಪಟ್ಟಣದ ದೊಡ್ಡ ಕೆರೆ ಮಾಕಂಡಯ್ಯ ಡ್ಯಾಮ್ ಸೇರಿದಂತೆ 6 ಕೆರೆಗಳಿಗೆ ಹರಿದು ಬರಲಿದೆ ಅಂತರ್ಜಲ ಕುಸಿಯುತ್ತಿದ್ದು ನೀರಿನ ಸಮಸ್ಯೆಯನ್ನು ನೀಗಿಸಲು ಕೆಸಿ ವ್ಯಾಲಿ ನೀರನ್ನು ಹರಿಸಲು ಕ್ರಮ ವಹಿಸಲು ಜಿಲ್ಲಾಧಿಕಾರಿಗಳ ಬಳಿ ಮನವಿ ಮಾಡಲಾಗಿದೆ.

ಸದಸ್ಯ ಎಂ.ವಿ.ವೇಮನ ಮಾತನಾಡಿ ಪಟ್ಟಣದ ನಡೆಯುವ ಪ್ರಸಿದ್ಧ ಕರಗ ಮತ್ತು ಜಾತ್ರಾ ಮಹೋತ್ಸವ ಸಮಿಪಿಸುತ್ತಿದ್ದು, ರಸ್ತೆಗಳಲ್ಲಿ ಗುಂಡಿಗಳು ಬಿದ್ದಿರುವುದರಿಂದ ಕರಗ ಸಂಚಾರ ಮಾಡಲು ಕಷ್ಟಕರವಾಗಿದ್ದು, ತಕ್ಷಣ ಗುಂಡಿಗಳನ್ನು ಮುಚ್ಚಲು ಪುರಸಭೆ ಅಧಿಕಾರಿಗಳು ಮುಂದಾಗಬೇಕೆಂದು ಶಾಸಕ ಗಮನಕ್ಕೆ ತಂದರು. ಪಟ್ಟಣದಲ್ಲಿ ಅಂಗಡಿ ಮುಂಗಟುಗಳು ಹೋಟೆಲ್‌ಗಳು, ಲಾಡ್ಜ್‌ಗಳು, ಟ್ರೇಡ್ ಲೈಸೆನ್ಸ್ ಪರಿಷ್ಕರಣೆ ಮಾಡಿದರೆ ಪಟ್ಟಣದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಈ ನಿಟ್ಟಿನಲ್ಲಿ ಅಧಿಕಾರಿಗಳು ಏಕೆ ಮುಂದಾಗುತ್ತಿಲ್ಲ ಎಂದರು. ಸದಸ್ಯ ಜಾಕೀರ್ ಖಾನ್ ಮಾತನಾಡಿ ಬೆಂಗಳೂರು ಇನ್ನುಳಿದ ವೈಯಕ್ತಿಕವಾಗಿ ಹೊಂದಿದ್ದರೆ, ಅಂತಹ ಸಿಎ ನಿವೇಶನಗಳನ್ನು ಮುಲಾಜಿಲ್ಲದೆ ಪುರಸಭೆಯ ವಶಕ್ಕೆ ಪಡೆಯುವ ಕೆಲಸ ಮಾಡಬೇಕು ಪುರಸಭೆಯ ಅಧಿಕಾರಿಗಳು ಸಿಎನಿವೇಶನಗಳನ್ನು ವಶಪಡಿಸಿಕೊಳ್ಳಲು ಬಂದಾಗ ಅವರಿಗೆ ಸದಸ್ಯರು ಆಯಾ ವಾಡುಗಳಲ್ಲಿ ಸಂಪೂರ್ಣ ಸಹಕಾರ ನೀಡುವಂತೆ ಹೇಳಿದರು.

ಉದಯವಾಹಿನಿ ಚಿತ್ರ

ಸಚಿವರು ಸರ್ಕಾರಕ್ಕೆ ಪ್ರಸ್ತಾವನೆ

ಅಂತರ್ಜಲ ಕುಸಿಯುತ್ತಿರುವುದರಿಂದ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ತಾಲ್ಲೂಕಿನಲ್ಲಿ ಉಲ್ಬಣಗೊಳ್ಳುತ್ತಿದೆ ಬೇಸಿಗೆ ಸಮೀಪಿಸುತ್ತಿದ್ದು ಪಟ್ಟಣದಲ್ಲಿ ಕುಡಿಯುವ ನೀರು ಸಮಸ್ಯೆಯಾಗದಂತೆ ಪುರಸಭೆಯ ಅಧಿಕಾರಿಗಳು ಎಚ್ಚರವಹಿಸಿ ನೀರಿನ ಸಮಸ್ಯೆ ಇರುವ ವಾರ್ಡುಗಳಲ್ಲಿ ನೀರು ಸರಬರಾಜು ಮಾಡಲು ಕ್ರಿಯಾ ಪ್ರಯೋಜನ ರೂಪಿಸಿಕೊಳ್ಳಬೇಕು, ಯರಗೋಳು ಯೋಜನೆಯಿಂದ ನಮ್ಮ ತಾಲೂಕಿಗೆ ನಿಗದಿಪಡಿಸಿರುವ ನೀರು ಸರಬರಾಜಿಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ನಮ್ಮ ಪಾಲಿನ ನೀರು ಶೀಘ್ರದಲ್ಲಿಯೇ ನಮಗೆ ಬರಲಿದೆ, ಪೈಪ್ ಲೈನ್ ಮೂಲಕ ಈಗಾಗಲೇ 26 ಹಳ್ಳಿಗಳಿಗೆ ಸರಬರಾಜಾಗುತ್ತಿದ್ದು, ಉಳಿದ ಗ್ರಾಮಗಳಿಗೂ ಪೈಪ್ ಲೈನ್ ಕಾಮಗಾರಿ ಮಾಡಲು ಆರ್‌ಡಿಪಿಆರ್ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ನೂತನ ಆಸ್ಪತ್ರೆ ನಿರ್ಮಾಣಕ್ಕೆ 40 ಕೋಟಿ

ಪುರಸಭಾ ವ್ಯಾಪ್ತಿಯಲ್ಲಿರುವ ಸರ್ವೆ ನಂಬರಗಳ ಆಸ್ತಿಗಳ ಗಡಿ ತಹಶೀಲ್ದಾರ್ ಅವರು ಸರ್ವೇ ಇಲಾಖೆ ಮೂಲಕ ಗುರುತಿಸಿ ಕೊಡಲಿದ್ದಾರೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯು ಶಿಥಿಲಗೊಂಡಿರುವುದರಿಂದ ನೂತನ ಆಸ್ಪತ್ರೆ ನಿರ್ಮಾಣಕ್ಕೆ ಆರೋಗ್ಯ ಸಚಿವರು ಭರವಸೆ ನೀಡಿದ್ದು ಅದರಂತೆ ಬಜೆಟ್‌ನಲ್ಲಿ ನೂತನ ಆಸ್ಪತ್ರೆ ನಿರ್ಮಾಣಕ್ಕೆ 40 ಕೋಟಿ ರೂಗಳು ಅನುದಾನವನ್ನು ನಿಗದಿಪಡಿಸಲಿದ್ದಾರೆ

-ಕೆ ವೈ ನಂಜೇಗೌಡ, ಶಾಸಕ

ಪಟ್ಟಣದಲ್ಲಿ ಶೇಕಡ 35ರ? ಮಾತ್ರ ಟ್ರೇಡ್ ಲೈಸೆನ್ಸ್ ನೀಡಿದ್ದು ಶೇಕಡ 100ರ ಟ್ರೇಡ್ ಲೈಸೆನ್ಸ್ ಮಾಡಿಸಿದರೆ ಹೆಚ್ಚಿನ ಹಣವು ಪುರಸಭೆಗೆ ಬರುತ್ತದೆ ಈ ನಿಟ್ಟಿನಲ್ಲಿ ಪುರಸಭೆಯ ಅಧಿಕಾರಿಗಳು ಮುಂದಾಗುವಂತೆ ತಿಳಿಸಿದರು

-ಎಂ ವಿ ವೇಮನ, ಸದಸ್ಯ

ಮುಖ್ಯ ರಸ್ತೆಯಲ್ಲಿ ಅಂಗಡಿಗಳ ಮುಂದೆ ಅಂಗಡಿಗಳನ್ನು ಇಟ್ಟುಕೊಂಡಿದ್ದು ವಾಹನಗಳು ಹಾಗೂ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದರು. ಶಾಸಕರು ಮಾತನಾಡಿ ಪುರ ಸಭೆ ಅಧಿಕಾರಿಗಳು ತೆರುವುಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುಕೂಲ ಕಲ್ಪಿಸುವಂತೆ ಸೂಚಿಸಿದರು. ತಾಲ್ಲೂಕಿನ ದೊಡ್ಡ ಇಗ್ಗಲೂರು ಬಳಿ ನಿರ್ಮಿಸಿರುವ ಸಂಸ್ಕರಣ ಘಟಕದಲ್ಲಿ ಸಂಗ್ರಹವಾಗುವ ಗೊಬ್ಬರ ರೈತರಿಗೆ ಮಾರಾಟ ಮಾಡಲು ಒಂದು ಟನ್‌ಗೆ ಸಭೆಯಲ್ಲಿ ಉಪಾಧ್ಯಕ್ಷ ವಿಜಯಲಕ್ಷ್ಮಿ, ಸ್ಥಾಯಿ ಸಮಿತಿ ಅಧ್ಯಕ್ಷ ಎ ರಾಜಪ್ಪ, ಯೋಜನಾ ಪ್ರಾಧಿಕಾರ ಅಧ್ಯಕ್ಷ ಮಹಮದ್ ನಯಿಂ ಉಲ್ಲಾ, ಕಂದಾಯ ಅಧಿಕಾರಿ ರೇಣುಕಾ, ಹಿರಿಯ ಆರೋಗ್ಯ ನಿರೀಕ್ಷಕ ಶ್ರೀನಿವಾಸ್, ಹಾಜರಿದ್ದರು.

ಮಿನಿ ನ್ಯೂಸ್

ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳಿ: ಹೆಚ್.ಟಿ.ಮಂಜು

• ಉದಯವಾಹಿನಿ ಕೆ.ಆರ್.ಪೇಟೆ

ಸಂಜೀವಿನಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ ಯೋಜನೆ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಪಂಚಾಯಿತಿ ಮಟ್ಟದ ಒಕ್ಕೂಟ ಬಲ್ಲೇನಹಳ್ಳಿ ಇವರ ಸಂಯುಕ್ತ ಆಶ್ರಯದಲ್ಲಿ ಮಹಿಳಾ ಸಂಘಗಳಿಗೆ ಸಾಲದ ಚೆಕ್ ವಿತರಣೆ ಕಾರ್ಯಕ್ರಮವು ತಾಲ್ಲೂಕಿನ ಬೂಕನಕೆರೆ ಹೋಬಳಿಯ ಬಲ್ಲೇನಹಳ್ಳಿ ಗ್ರಾಮದಲ್ಲಿ ನಡೆಯಿತು. ಶಾಸಕ ಹೆಚ್.ಟಿ.ಮಂಜು ಅವರು ಮಹಿಳಾ ಸ್ವಸಹಾಯ ಸಂಘಗಳಿಗೆ ಸಾಲದ ಚೆಕ್ಕುಗಳನ್ನು ವಿತರಣೆ ಮಾಡಿ ಮಾತನಾಡಿದರು.

ಮಹಿಳೆಯರು ಸ್ವಯಂ ಉದ್ಯೋಗ ಕೈಗೊಳ್ಳುವ ಮೂಲಕ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬೇಕು. ಗ್ರಾಮ ಪಂಚಾಯಿತಿ ಹಾಗೂ ಸರ್ಕಾರದಿಂದ ನೀಡಲಾಗುವ ಸಾಲದ ಮೊತ್ತವನ್ನು ಸ್ವಯಂ ಉದ್ಯೋಗ ಕೈಗೊಳ್ಳಲು ಬಳಕೆ ಮಾಡಬೇಕು. ಪ್ರಮುಖವಾಗಿ ಗುಡಿ ಕೈಗಾರಿಕೆಗಳಾದ ಮೇಣದ ಬತ್ತಿ ತಯಾರಿಕೆ, ಗಂದದ ಕಡ್ಡಿ ತಯಾರಿಕೆ. ಊಟದ ಎಲೆ, ಊಟದ ಪ್ಲೇಟ್ ತಯಾರಿಕೆ, ಫೆನಾಯಿಲ್, ಬೀಚಿಂಗ್ ಪೌಡರ್ ತಯಾರಿಕೆಯಂತಹ ಸಣ್ಣ ಉದ್ಯಮವನ್ನು ಸ್ಥಾಪನೆ ಮಾಡಿ ಕಡಿಮೆ ಬಂಡವಾಳದಿಂದ ಹೆಚ್ಚು ಲಾಭಗಳಿಸಬಹುದು. ಇದರಿಂದ ಹೆಚ್ಚು ಹೆಚ್ಚು ಲಾಭಗಳಿಸಿ ಮಹಿಳೆಯರು ಆರ್ಥಿಕ ಸಬಲೀಕರಣ ಸಾಧಿಸಬೇಕು ಎಂದು ಸಲಹೆ ನೀಡಿದರು. ಇಂದು ಬರೋಡ ಬ್ಯಾಂಕ್ ಕಳೆದ 25 ವರ್ಷಗಳಿಂದ ನಿರುದ್ಯೋಗಿಗಳಿಗೆ ಸ್ವ-ಯಂ ಉದ್ಯೋಗಕ್ಕೆ ಅಗತ್ಯವಿರುವ ಕೌಶಲ್ಯ ತರಬೇತಿ ನೀಡುತ್ತಿದೆ. 18ರಿಂದ 45 ವರ್ಷ ಒಳಪಟ್ಟ ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು. ತರಬೇತಿಯ ನಂತರ ಬರೋಡ ಬ್ಯಾಂಕಿನಿಂದಲೇ ಸಬ್ಸಿಡಿ ರೂಪದಲ್ಲಿ ಸಾಲವನ್ನು ನೀಡಲಾಗುತ್ತದೆ ಹಾಗಾಗಿ ಆಸಕ್ತ ನಿರುದ್ಯೋಗಿಗಳು ಇದರ ಸದುಪಯೋಗ ಪಡೆದುಕೊಳ್ಳುವಂತೆ ಶಾಸಕರು ಸಲಹೆ ನೀಡಿದರು.

ಅದ್ದೂರಿ ಜೋಡಿ ಬ್ರಹ್ಮರಥೋತ್ಸವ

• ಉದಯವಾಹಿನಿ ಚಿಕ್ಕಬಳ್ಳಾಪುರ

ತಾಲೂಕಿನ ಸುಪ್ರಸಿದ್ಧ ನಂದಿ ಗ್ರಾಮದ ದಕ್ಷಿಣ ಕಾಶಿ ಶ್ರೀ ಭೋಗನಂದೇಶ್ವರ ಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಮರುದಿನ ಇಂದು ಅದ್ದೂರಿಯಾಗಿ ಜೋಡಿ ಬ್ರಹ್ಮ ರಥೋತ್ಸವಗಳು ನಡೆದಿದ್ದು ಸಾವಿರಾರು ಭಕ್ತಾದಿಗಳು ಈ ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡು ಭಕ್ತಿ ಭಾವ ಮೆರೆದವರು.

ಶ್ರೀ ಬೊಗ ನಂದೀಶ್ವರನಿಗೆ ಜಯಗೋಷ

ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಂ.ಸಿ.ಸುಧಾಕರ್ ಹಾಗೂ ಶಾಸಕ ಪ್ರದೀಪ್ ಈಶ್ವರ್ ರವರುಗಳು ಜೋಡಿ ಬ್ರಹ್ಮರಥೋತ್ಸವಕ್ಕೆ ಚಾಲನೆ ನೀಡುತ್ತಿದ್ದಂತೆಯೇ ಸಾವಿರಾರು ಭಕ್ತಾದಿಗಳು ಏಕಕಾಲದಲ್ಲಿ ಶ್ರೀ ಬೊಗ ನಂದೀಶ್ವರ ಸ್ವಾಮಿಗೆ ಜಯಗೋಶ ಮಾಡಿದ್ದು ವಿಶೇಷವೇನಿತು.

ಮಾಜಿ ಶಾಸಕ ಕೆ.ಪಿ. ಬಚ್ಚೇಗೌಡ ಮಾಜಿ ನಂದಿ ಜಿಲ್ಲಾ ಪಂಚಾಯತ್ ಸದಸ್ಯ ವಕೀಲ ಕೆಂ. ಎಂ. ಮುನೇಗೌಡ ಅವರೊಟ್ಟಿಗೆ ವಿವಿಧ ರಾಜಕೀಯ ಪಕ್ಷಗಳ ಗಣ್ಯರುಗಳು ಹಾಗೂ ಜಿಲ್ಲಾಡಳಿತದ ವಿವಿಧ ಇಲಾಖೆಗಳ ಉನ್ನತ ಮಟ್ಟದ ಅಧಿಕಾರಿಗಳು ನಂದಿ ಗ್ರಾಮ ಪಂಚಾಯತ್ ಅಧ್ಯಕ್ಷರು ಒಳಗೊಂಡಂತೆ ಅನೇಕ ಮಂದಿ ಮುಖಂಡರುಗಳು ಈ ಜೋಡಿ ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡಿದ್ದು ಹೆಚ್ಚಿನ ಮೆರುಗು ತಂದಿತು.

ಪ್ರತಿ ವರ್ಷ ತಾಲ್ಲೂಕಿನ ನಂದಿ ಗ್ರಾಮದ ದಕ್ಷಿಣ ಕಾಶಿ ಶ್ರೀ ಭೋಗ ನಂದೀಶ್ವರ ಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ವಿಶೇಷ ಚತುರುದ್ರ ಅಭಿಷೇಕ ಹಾಗೂ ಜಾಗರಣೆಯ ಪ್ರಯುಕ್ತ ನಾಲ್ಕು ಯಾ ಮಗಳ ವಿಶೇಷ ಪೂಜೆ ಮರುದಿನ ಅಮಾವಾಸ್ಯೆ ಎಂದು ಸುಮಾರು ಎರಡುವರೆ ಕೋಟಿ ರೂಗಳ ವೆಚ್ಚದಲ್ಲಿ ನೂತನವಾಗಿ ನಿರ್ಮಾಣ ಮಾಡಿರುವ ಬ್ರಹ್ಮ ರಥದಲ್ಲಿ ಶ್ರೀ ಭಗನಂದೀಶ್ವರ ಸ್ವಾಮಿ ಅತ್ಯಂತ ಆಕರ್ಷಣೆಗಾಗಿ ಕಟ್ಟಿರುವ ಮತ್ತೊಂದು ಬ್ರಹ್ಮರಥದಲ್ಲಿ ಗಿರಿಜಾ ಮತ್ತು ಗಣಪತಿ ದೇವರುಗಳ ಜೋಡಿ ರಥೋತ್ಸವ ನಡೆದಿದ್ದು ಸುಮಾರು 40 ಸಾವಿರಕ್ಕೂ ಅಧಿಕ ಮಂದಿ ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ಕರ್ನಾಟಕ ಆಂಧ್ರ ತೆಲಂಗಾಣ ತಮಿಳುನಾಡು ಒಳಗೊಂಡಂತೆ ರಾಜ್ಯದ ಮೂಲೆ ಮೂಲೆಗಳಿಂದ ಭಕ್ತರುಗಳು ಆಗಮಿಸಿದ್ದರು.

ಬಂದ ಭಕ್ತರಿಗೆ ಅಲ್ಲಲ್ಲಿ ಉಪಹಾರ ರೂಪದಲ್ಲಿ ಹೊಟ್ಟೆ ತುಂಬಿಸುವ ಕಾರ್ಯ ನಡೆದಿತ್ತು. ಇನ್ನು ಕೆಲವರು ಜಾತಿವಾರು ಸಂಘ ಸಂಸ್ಥೆಗಳು ಸಹ ಉಚಿತ ಅನ್ನ ಸಂತರ್ಪಣೆ ಏರ್ಪಡಿಸಿದ್ದರು.

ಉದಯವಾಹಿನಿ ಚಿತ್ರ

ವಸತಿ ಶಾಲೆಯ ಮಾರ್ಗ ರಸ್ತೆ ಅಭಿವೃದ್ಧಿಗೆ ಒಂದು ಕೋಟಿ ರೂ.

• ಉದಯವಾಹಿನಿ ಚಾಮರಾಜನಗರ

ಮಲ್ಲಯ್ಯನಪುರದಿಂದ ಆದರ್ಶ ಶಾಲೆ ಹಾಗೂ ಮೊರಾರ್ಜಿ ದೇಸಾಯಿ ಶಾಲೆಗೆ ಹೋಗುವ ಮಾರ್ಗಕ್ಕೆ ರಸ್ತೆಯಲ್ಲದೇ ವಿದ್ಯಾರ್ಥಿಗಳು ಹಾಗೂ ಪೋಷಕರು ಮತ್ತು ಶಿಕ್ಷಕರಿಗೆ ಬಹಳ ತೊಂದರೆಯಾಗಿತ್ತು. ಇದನ್ನು ಒಂದು ಕೋಟಿ ರೂ. ವೆಚ್ಚದಲ್ಲಿ ಡಾಂಬರೀಕರಣ ರಸ್ತೆಯನ್ನಾಗಿ ಮಾಡಲು ಕ್ರಮ ವಹಿಸಲಾಗಿದೆ ಎಂದು ಶಾಸಕ ಹಾಗೂ ಎಂಎಸ್ ಐಎಲ್ ಅಧ್ಯಕ್ಷ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು. ನಗರದ ಸಮೀಪದ ಮಲ್ಲಯ್ಯನಪುರದಿಂದ ಒಂದು ಕಿ.ಮೀ. ದೂರದಲ್ಲಿರುವ ಮೊರಾರ್ಜಿ ವಸತಿ ಶಾಲೆ ಹಾಗೂ ಆದರ್ಶ ಶಾಲೆಗೆ ಸಂಪರ್ಕ ಕಲ್ಪಿಸುವ ರಸ್ತೆ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಮಲ್ಲಯ್ಯನಪುರಕ್ಕೆ ಹೊಂದಿಕೊಂಡಂತೆ ಇರುವ ಮೋರಾಜಿ ವಸತಿ ಶಾಲೆ ಹಾಗು ಆದರ್ಶ ಶಾಲೆಯನ್ನು ಬಹಳ ಸುಸಜ್ಜಿತವಾಗಿ ನಿರ್ಮಾಣ ಮಾಡಲಾಗಿದೆ. 600ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಪೋಷಕರು, ಮತ್ತು ಶಿಕ್ಷಕ ವೃಂದ, ಸಿಬ್

ಅಂತರಾಳದಿಂದ... EDITORIAL

ಕ್ಷೇತ್ರ ಮರುವಿಂಗಡಣೆಯೆಂಬ ವಿಭಜನಕಾರಿ ಕಾರ್ಯಾಚರಣೆ

ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಿ, ಅಧಿಕಾರಗಳನ್ನು ಹಂತಹಂತವಾಗಿ ತನ್ನ ಕೈಗೆ ತೆಗೆದುಕೊಳ್ಳಲು ಕೇಂದ್ರ ಸರಕಾರ ಪ್ರಯತ್ನಗಳನ್ನು ನಡೆಸುತ್ತಲೇ ಬಂದಿದೆ. ಇದಕ್ಕಾಗಿ ರಾಜ್ಯಗಳ ತೆರಿಗೆಯ ಮೇಲೆ ಅಧಿಕಾರ ಸ್ಥಾಪನೆ ಕೇಂದ್ರ ಸರಕಾರ ಇಟ್ಟ ಅತ್ಯಂತ ಮಹತ್ವದ ಹೆಜ್ಜೆಯಾಗಿತ್ತು. ಇದೇ ಸಂದರ್ಭದಲ್ಲಿ ಒಂದು ದೇಶ-ಒಂದು ಚುನಾವಣೆ ಜಾರಿಗೆ ತರುವ ಯತ್ನವೂ ಪರೋಕ್ಷವಾಗಿ ಒಕ್ಕೂಟ ವ್ಯವಸ್ಥೆಯ ಮೇಲೆ ನಡೆಯುತ್ತಿರುವ ದಾಳಿಯೇ ಆಗಿದೆ. ಚುನಾವಣೆಗಳನ್ನು ಪ್ರಾದೇಶಿಕ ಸಮಸ್ಯೆಗಳಿಂದ ವಿಷಯಾಂತರಗೊಳಿಸುವ ಉದ್ದೇಶ ಇದರ ಹಿಂದಿದೆ. ಈ ದೇಶದ ರಾಜ್ಯಗಳು ತಮ್ಮದೇ ಆದ ಸಂಸ್ಕೃತಿ, ವೈವಿಧ್ಯಗಳನ್ನು ಹೊಂದಿವೆ. ಅವುಗಳನ್ನು ಕೇಂದ್ರವಾಗಿಟ್ಟುಕೊಂಡು ಚುನಾವಣೆಗಳು ನಡೆಯುತ್ತಾ ಬರುತ್ತಿವೆ. ಒಂದು ದೇಶ ಒಂದು ಚುನಾವಣೆಯ ಮೂಲಕ ರಾಜ್ಯಗಳ ಹಿತಾಸಕ್ತಿಗಳು ಮುನ್ನೆಲೆಗೆ ಬರದಂತೆ ನೋಡಿಕೊಳ್ಳುವುದು ತಂತ್ರವಾಗಿದೆ. ಒಕ್ಕೂಟ ವ್ಯವಸ್ಥೆ ಹೀಗೆ ಹಂತಹಂತವಾಗಿ ದುರ್ಬಲಗೊಳ್ಳುತ್ತಾ ಬಂದ ಹಾಗೆಯೇ, ಇದರಿಂದ ಹೆಚ್ಚು ತೊಂದರೆಗೊಳಗಾಗುವುದು ದಕ್ಷಿಣದ ರಾಜ್ಯಗಳು. ಕೇಂದ್ರದಲ್ಲಿ ರಾಜಕೀಯವಾಗಿ ದಕ್ಷಿಣದ ರಾಜ್ಯಗಳಿಗೆ ಹೆಚ್ಚಿನ ಪ್ರಾತಿನಿಧ್ಯ ದೊರೆಯುತ್ತಿಲ್ಲ ಎನ್ನುವ ಆಕ್ಷೇಪ ಇಂದು ನಿನ್ನೆಯದಲ್ಲ. ಕೇಂದ್ರ ಸರಕಾರದ ನೀತಿಗಳು ಉತ್ತರ ಭಾರತದ ಜನರನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾರಿಗೊಳ್ಳುತ್ತಿವೆ. ದಕ್ಷಿಣದ ರಾಜಕೀಯ ನಾಯಕರನ್ನು ತಮ್ಮ ಗುಲಾಮರಂತೆ ನಡೆಸಿಕೊಳ್ಳುವ ಮನಸ್ಥಿತಿ ಉತ್ತರ ಭಾರತದ ರಾಜಕೀಯ ನಾಯಕರಲ್ಲಿ ಹೆಚ್ಚುತ್ತಿದೆ ಎನ್ನುವ ಆಕ್ರೋಶವನ್ನು ಹಲವು ಪ್ರಾದೇಶಿಕ ಪಕ್ಷಗಳು ವ್ಯಕ್ತಪಡಿಸುತ್ತಾ ಬಂದಿವೆ. ಪ್ರಧಾನಿ ಹುದ್ದೆಯಿಂದ ಹಿಡಿದು, ಕೇಂದ್ರ ಸರಕಾರದ ಅತ್ಯುನ್ನತ ಸ್ಥಾನಗಳಲ್ಲಿ ದಕ್ಷಿಣ ಭಾರತದ ರಾಜಕೀಯ ನಾಯಕರು ಕುಳಿತಿದ್ದು ಕಡಿಮೆ. ರಾಜಕೀಯ ಅಧಿಕಾರದ ಕೊರತೆಯಿಂದಾಗಿಯೇ ದಕ್ಷಿಣ ಭಾರತದ ಒಳದನಿಗಳನ್ನು ಕೇಂದ್ರ ಸರಕಾರ ಸುಲಭದಲ್ಲಿ ದಮನಿಸುತ್ತಾ ಬಂದಿದೆ. ಇದೀಗ ಹಿಂದಿ ಹೇರಿಕೆಯ ಮೂಲಕ, ಪ್ರಾದೇಶಿಕ ಭಾಷೆಗಳ ಮೇಲೆ ಇನ್ನಷ್ಟು ದಾಳಿಗಳು ನಡೆಯುತ್ತಿವೆ. ಬ್ಯಾಂಕುಗಳಲ್ಲಿ, ರೈಲ್ವೆ ಇಲಾಖೆಗಳಲ್ಲಿ, ವಿವಿಧ ಸಾರ್ವಜನಿಕ ಸಂಸ್ಥೆಗಳಲ್ಲಿ ಹಂತ ಹಂತವಾಗಿ ಉತ್ತರ ಭಾರತೀಯರನ್ನು ತುರುಕುತ್ತಾ ಸ್ಥಳೀಯರೇ ಪರಕೀಯ ಭಾವನೆಯಿಂದ ನರಳುವಂತಾಗಿದೆ. ಇಂತಹ ಸಂದರ್ಭದಲ್ಲಿ ಕ್ಷೇತ್ರ ಮರುವಿಂಗಡಣೆ ಚರ್ಚೆಯಲ್ಲಿದೆ. ಜನಗಣತಿಯ ಆಧಾರದಲ್ಲಿ ಲೋಕಸಭೆ ಮತ್ತು ವಿಧಾನಸಭಾ ಕ್ಷೇತ್ರಗಳ ಗಡಿಗಳನ್ನು ಮರುಹೊಂದಿಸುವ ಕಾರ್ಯಾಚರಣೆಯೊಂದಕ್ಕೆ ಕೇಂದ್ರ ಸರಕಾರ ಮುಂದಾಗಿದೆ. 2026ರ ಜನಗಣತಿಯ ಆಧಾರದಲ್ಲಿ ಹೊಸದಾಗಿ ಪುನರ್ ವಿಂಗಡಣೆ ಮಾಡಿದರೆ ದಕ್ಷಿಣದ ರಾಜ್ಯಗಳಲ್ಲಿ ಗಣನೀಯ ಪ್ರಮಾಣದಲ್ಲಿ ಕ್ಷೇತ್ರಗಳು ಇಳಿಕೆಯಾಗಲಿವೆ ಎನ್ನುವುದು ದಕ್ಷಿಣ ಭಾರತದ ರಾಜ್ಯಗಳ ಆತಂಕವಾಗಿದೆ. ಈಗಾಗಲೇ ಇದರ ವಿರುದ್ಧ ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗಳನ್ನು ನೀಡಿದ್ದಾರೆ ಮಾತ್ರವಲ್ಲ ಇದರ ವಿರುದ್ಧ ದಕ್ಷಿಣ ಭಾರತದ ರಾಜ್ಯಗಳು ಪಕ್ಷಭೇದ ಮರೆತು ಒಂದಾಗಿ ಹೋರಾಟ ಮಾಡುವುದು ಅತ್ಯಗತ್ಯವಾಗಿದೆ ಎಂದು ಕರೆ ಕೊಟ್ಟಿದ್ದಾರೆ. ದಕ್ಷಿಣ ಭಾರತದ ಹಲವು ಬಿಜೆಪಿ ನಾಯಕರ ರಾಜಕೀಯ ಭವಿಷ್ಯಗಳಿಗೂ ಇದು ಧಕ್ಕೆ ತರುವ ಅಪಾಯವಿರುವುದರಿಂದ, ಅವರೂ ಒಳಗೊಳಗೆ ಇದರ ವಿರುದ್ಧ ತಮ್ಮ ಆಕ್ಷೇಪಗಳನ್ನು ಎತ್ತುತ್ತಿದ್ದಾರೆ. 'ಪ್ರಧಾನ ಮಂತ್ರಿ ಮೋದಿಯವರೇ ಈ ಬಗ್ಗೆ ಲೋಕಸಭೆಯಲ್ಲಿ ಭರವಸೆ ನೀಡಿದ್ದಾರೆ ಎನ್ನುವುದನ್ನು ತನ್ನ ಹೇಳಿಕೆಗೆ ಸಮರ್ಥನೆಯಾಗಿ ಬಳಸಿಕೊಂಡಿದ್ದಾರೆ. ಅಮಿತ್ ಶಾ ಅವರ ಈ ಹಿಂದಿನ ಸಿಎಎ ಕುರಿತ 'ಕ್ರೋನೋಲೊಜಿ'ಯ ನೆನಪಿರುವವರಾರು ಕ್ಷೇತ್ರ ಪುನರ್ ವಿಂಗಡಣೆಯ ಕುರಿತ ಅವರ ಮಾತುಗಳನ್ನು ನಂಬಲಾರರು. ಕರ್ನಾಟಕದ ವಿಷಯದಲ್ಲಿ ಈಗ ಇರುವ ರಾಜ್ಯದ ಲೋಕಸಭಾ ಸದಸ್ಯರೇ ಕೇಂದ್ರ ಸರಕಾರದ ಮುಖ್ಯವಾಗಿ ಮೋದಿ ಮತ್ತು ಅಮಿತ್ ಶಾ ಅವರ ಜೀತದಾಳುಗಳಾಗಿ ಕೆಲಸ ಮಾಡುತ್ತಾ ಕರ್ನಾಟಕದ ಹಿತಾಸಕ್ತಿಯನ್ನು ಮರೆತಿರುವುದರ ಬಗ್ಗೆ ಜನರಲ್ಲಿ ತೀವ್ರ ಆಕ್ರೋಶವಿದೆ. ಈ ಹಿಂದೆ ರಾಜ್ಯದಲ್ಲಿ 'ಡಬಲ್ ಇಂಜಿನ್ ಸರಕಾರವಿದ್ದಾಗಲೂ, ತುರ್ತಾಗಿ ಬರಬೇಕಾಗಿದ್ದ ನೆರೆ ಪರಿಹಾರವನ್ನು ಕೇಳುವುದಕ್ಕೆ ರಾಜ್ಯದ ಬಿಜೆಪಿ ಸಂಸದರು ಹಿಂಜರಿದಿದ್ದರು. ದಕ್ಷಿಣದ ರಾಜ್ಯಗಳು ಉತ್ತರ ಭಾರತದ ರಾಜ್ಯಗಳಿಂದ ಎಲ್ಲಾ ಕ್ಷೇತ್ರಗಳಲ್ಲೂ ಮಾದರಿ ಅಭಿವೃದ್ಧಿಯನ್ನು ಸಾಧಿಸುತ್ತಾ ಬಂದಿದ್ದರೂ, ಗುಜರಾತ್ ಮಾದರಿ' ಕರ್ನಾಟಕವನ್ನು ಕಟ್ಟಲು ಹೊರಟು ರಾಜ್ಯ ಬಿಜೆಪಿ ನಾಯಕರು ಮಾನಸಿಕವಾಗಿ ಉತ್ತರಭಾರತದ ಗುಲಾಮರೆನ್ನುವುದನ್ನು ಸಾಬೀತುಪಡಿಸಿದ್ದರು. ಆದರೆ ಕರ್ನಾಟಕದ ಬಿಜೆಪಿ ಸಂಸದರಂತೆಯೇ ತಮಿಳುನಾಡು, ಕೇರಳ, ಆಂಧ್ರದ ಸಂಸದರು ಜೀತಕ್ಕೆ ಸಿದ್ಧರಿಲ್ಲ. ತಮ್ಮ ರಾಜ್ಯಗಳ ಹಿತಾಸಕ್ತಿಗೆ ಧಕ್ಕೆ ಬಂದಾಗಲೆಲ್ಲ ಕೇಂದ್ರದ ನಾಯಕರ ವಿರುದ್ಧ ಪಕ್ಷ ಭೇದ ಮರೆತು ಅವರು ಒಂದಾಗಿದ್ದಾರೆ. ಕರ್ನಾಟಕದಲ್ಲೂ ಈ ಜೀತ ಮನಸ್ಥಿತಿ ಯಾವತ್ತೂ ಇರಬೇಕು ಎಂದಿಲ್ಲ. ಅದುದರಿಂದ, ದಕ್ಷಿಣ ಭಾರತದ ಕ್ಷೇತ್ರಗಳ ಸಂಖ್ಯೆಯನ್ನೇ ಇಳಿಸುವ ಸಂಚು ನಡೆಯುತ್ತಿದೆ ಎನ್ನುವ ಆರೋಪ ವಿರೋಧ ಪಕ್ಷಗಳನ್ನು ಕೇಂದ್ರದಲ್ಲಿ ರಾಜಕೀಯ ಪ್ರಾತಿನಿಧ್ಯ ದುರ್ಬಲಗೊಂಡರೆ, ದಕ್ಷಿಣ ಭಾರತದ ಧ್ವನಿಯೂ ದುರ್ಬಲಗೊಳ್ಳುತ್ತದೆ. ಉತ್ತರಭಾರತದ ಮೂಗಿನ ನೇರಕ್ಕೆ ಜಾರಿಕೊಳ್ಳುವ ನೀತಿಗೆ ತಲೆಬಾಗುವುದು ದಕ್ಷಿಣ ರಾಜ್ಯಗಳಿಗೆ ಅನಿವಾರ್ಯವಾಗುತ್ತದೆ. ಕೇಂದ್ರ ಸರಕಾರದ ಎಲ್ಲಾ ಮಲತಾಯಿ ಧೋರಣೆಗಳ ನಡುವೆಯೂ ದಕ್ಷಿಣದ ರಾಜ್ಯಗಳು ಶಿಕ್ಷಣ, ಆರೋಗ್ಯ ಪೌಷ್ಟಿಕತೆಯಲ್ಲಿ ಉತ್ತರ ಭಾರತಕ್ಕಿಂತ ಮುಂದಿರುವುದು ಕೇಂದ್ರದ ಕಣ್ಣು ಕಿಸಿರಾಗುವಂತೆ ಮಾಡಿದೆ. ದಕ್ಷಿಣ ಭಾರತ ಹಿಂದಿಯನ್ನು ಯಾವತ್ತೂ ನೆಚ್ಚಿಕೊಂಡಿಲ್ಲ. ವಿಪರ್ಯಾಸವೆಂದರೆ ಹಿಂದಿಯನ್ನೇ ನೆಚ್ಚಿಕೊಂಡ ಉತ್ತರಭಾರತದ ಹೆಚ್ಚಿನ ರಾಜ್ಯಗಳು ಬಡತನ, ಅಪೌಷ್ಟಿಕತೆ, ಅನಾರೋಗ್ಯ ಅನಕ್ಷರತೆಗಳಿಗಾಗಿ ಮುಂಚೂಣಿಯಲ್ಲಿವೆ.

ಈ ಪುನರ್ ವಿಂಗಡಣೆಯನ್ನು ಸರಕಾರವೇನಾದರೂ, ರಾಜ್ಯಗಳ ಅಭಿಪ್ರಾಯಗಳನ್ನು ತಳ್ಳಿ ಹಾಕಿ ಜಾರಿಗೊಳಿಸಲು ಮುಂದಾದರೆ, ಉತ್ತರ ಮತ್ತು ದಕ್ಷಿಣದ ನಡುವಿನ ಅಂತರ ಇನ್ನಷ್ಟು ಹೆಚ್ಚುವ ಅಪಾಯವಿದೆ. ದಕ್ಷಿಣ ಭಾರತ ಈ ಪುನರ್ ವಿಂಗಡಣೆಯ ವಿರುದ್ಧ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿರುವುದು ಗೃಹ ಸಚಿವ ಅಮಿತ್ ಶಾರನ್ನು ಆತಂಕಕ್ಕೆ ತಳ್ಳಿದಂತಿದೆ. ಇದೀಗ ತಮಿಳುನಾಡಿನ ಸಮಾರಂಭವೊಂದರಲ್ಲಿ ಮಾತನಾಡುತ್ತಾ, 'ಕ್ಷೇತ್ರ ಮರು ವಿಂಗಡಣೆಯಿಂದ ದಕ್ಷಿಣ ಭಾರತಕ್ಕೆ ಯಾವುದೇ ಅನ್ಯಾಯ ಆಗುವುದಿಲ್ಲ'' ಎಂದು ಸ್ಪಷ್ಟನೆ ನೀಡಿದ್ದಾರೆ.



• ಹಿಂದಿನ ಸಂಚಿಕೆಯಿಂದ 78 ನೆಯ ಅಧ್ಯಾಯ

ವಸ್ತುಗಳನ್ನು ಕಾಣಿಕೆಯಾಗಿ ತಂದು ಕೈ ಮುಗಿದುಕೊಂಡು ನಿಂತಿದ್ದ ನಾನಾ ದೇಶದ ರಾಯರಿಂದ ಇಟ್ಟಣಿಸಿದ್ದಿತು. ಸುಮಂತ್ರನು ರಥಾರೂಢನಾಗಿ ಪುರಜನರಿಗೆ ಹರ್ಷವನ್ನುಂಟುಮಾಡುತ್ತ ಅತ್ಯಂತ ಸಂತುಷ್ಟನಾಗಿ ಶ್ರೀರಾಮನ ಅರಮನೆಯನ್ನು ಪ್ರವೇಶಿಸಿದನು. ಬಾಗಿಲಲ್ಲಿ ಇಟ್ಟಣಿಸಿದ್ದ ರಾಜಸಮೂಹಗಳ ಕುಶಲಗಳನ್ನು ಕೇಳಿ ಮುತ್ತಿನ ಝಲ್ಲಿಪಟ್ಟಗಳಿಂದ ಅಲಂಕರಿಸಲ್ಪಟ್ಟ ನಡುವೆ ಇದ್ದ ಬಾಗಿಲುಗಳನ್ನು ಕಳೆದು ಅಲ್ಲಲ್ಲಿ ಶ್ರೀರಾಮನ ಪಟ್ಟಾಭಿಷೇಕ ನಿಮಿತ್ತವಾದ ಮಂಗಳವಾರ್ತೆಗಳನ್ನು ಕೇಳುತ್ತಾ ಹೋದನು. ಅತ್ಯಂತ ಐಶ್ವರ್ಯದಿಂದ ಪರಿಪೂರ್ಣವಾಗಿ ಚಲನವಿಲ್ಲದಿದ್ದ ಮೇಘದ ಹಾಗೆ ಮನೋಹರವಾದ ಉಪ್ಪರಿಗೆಗಳುಳ್ಳ ಆ ಅರಮನೆಯ ಅಂತಃಪುರವನ್ನು ಯಾವ ತಡೆಯೂ ಇಲ್ಲದೆ ಸುಮಂತ್ರನು ಉತ್ಸಾಹದಿಂದ ಪ್ರವೇಶಿಸಿದನು.

ದಶರಥ ರಾಜನ ಬಳಿಗೆ ಶ್ರೀ ರಾಮನ ಆಗಮನ

ಈ ಪ್ರಕಾರದಲ್ಲಿ ದಶರಥರಾಜನ ಪ್ರಧಾನನಾಗಿ ಇಕ್ಷ್ವಾಕುವಂಶದ ರಾಯರ ಪೂರ್ವ ವೃತ್ತಾಂತವನ್ನು ಬಲ್ಲ ಸುಮಂತ್ರನು ಸಮಸ್ತ ಪುರಜನಗಳಿಂದ ಇಟ್ಟಣಿಸಿದ್ದ ಶ್ರೀರಾಮನ ಅರಮನೆಯ ಹೊರಬಾಗಿಲನ್ನು ದಾಟಿ ಬಿಲ್ಲಂಬುಗಳನ್ನು ಧರಿಸಿಕೊಂಡು ಆಭರಣಗಳಿಂದಲಂಕೃತರಾದ ಅರಮನೆಯ ಬಾಗಿಲು ಕಾಯುವವರಿಂದಲೂ ಕೈಗಳಲ್ಲಿ ಬೆತ್ತಗಳನ್ನು ಹಿಡಿದುಕೊಂಡು ಕೆಂಪಾದ ವಸ್ತ್ರಗಳನ್ನು ಧರಿಸಿಕೊಂಡಿದ್ದ ವೃದ್ಧರಾದ ದ್ವಾರಪಾಲಕರಿಂದಲೂ ಕಾಯಲ್ಪಡುತ್ತಿದ್ದ ಅಂತಃಪುರದ ಬಾಗಿಲ ಬಳಿಗೆ ಹೋದನು. ಆ ದ್ವಾರಪಾಲಕರು ಕೈಮುಗಿದುಕೊಂಡು ಇದಿರುಗೊಂಡು ಬರಲು ಸುಮಂತ್ರನು ಅವರ ಸತ್ಕಾರವನ್ನಂಗೀಕರಿಸಿ ವಿನಯಗುಣಸಂಪತ್ತಿಯಿಂದ ಅವರನ್ನು ಕುರಿತು ಎಲೈ ದ್ವಾರಪಾಲಕರೆ, ನೀವು ಶೀಘ್ರದಲ್ಲಿ ಅಂತಃಪುರಕ್ಕೆ ಹೋಗಿ ಶ್ರೀರಾಮನನ್ನು ಕಂಡು ಸುಮಂತ್ರನು ಬಂದಿದ್ದಾನೆ' ಎಂದು ಬಿನ್ನವಿಸಿರಿ '' ಎಂದು ನುಡಿದನು. ಆ ಸೇವಕರು ಮಹಾಪ್ರಸಾದವೆಂದು ಶೀಘ್ರವಾಗಿ ಅಂತಃಪುರಕ್ಕೆ ಹೋಗಿ ಸೀತಾ ಸಮೇತನಾಗಿದ್ದ ಶ್ರೀರಾಮನಿಗೆ ಈ ವಿಷಯವನ್ನು ಬಿನ್ನವಿಸಿದರು. ಶ್ರೀರಾಮನು ತನ್ನ ತಂದೆಯ ಪ್ರಧಾನವಾದ ಸುಮಂತ್ರನನ್ನು ಕರೆಕಳುಹಿದನು. ಸುಮಂತ್ರನು ಸಾಕ್ಷಾತ್ಕುಬೇರನಂತೆ ಸರ್ವಾಲಂಕಾರ ಭೂಷಿತನೂ ಕುಂಕುಮಚಂದನ ಗಂಧಾನುಲೇಪವುಳ್ಳವನೂ ವಾಮಭಾಗದಲ್ಲಿ ಬೀಸಣಿಗೆಯನ್ನು ಬೀಸುತ್ತಿದ್ದ ಸೀತಾದೇವಿಯಿಂದ ಚಿತ್ರಾನಕ್ಷತ್ರದೊಡನೆ ಕೂಡಿದ ಚಂದ್ರನಂತೆ ಅತಿಮನೋಹರನಾಗಿ ಒಪ್ಪುವವನೂ ಆಗಿ ಪ್ರಾತಃಕಾಲದಲ್ಲಿ ಉದಯವಾಗುವ ಸೂರ್ಯನಂತೆ ಕಾಂತಿಯಿಂದ ಬೆಳಗುತ್ತಿದ್ದ ಶ್ರೀರಾಮನನ್ನು ಕಂಡನು. ಅನಂತರ ಅತ್ಯಂತ ವಿನಯದಿಂದ ಕೈ ಮುಗಿದುಕೊಂಡು ಶ್ರೀರಾಮನನ್ನು ಕುರಿತು ಶ್ರೀರಾಮ, ನಿನ್ನ ತಾಯಿಯಾದ ಕೌಸಲ್ಯಾದೇವಿಯು ಭಾಗ್ಯವತಿಯಾಗಿ ಅನೇಕ ಪುಣ್ಯಾತಿಶಯವುಳ್ಳವಳು.

ಮುಂದುವರಿಯುವುದು...

ಗಾಂಧಿ ವ್ಯಕ್ತಿತ್ವ ದರ್ಶನದ ಕೃತಿ

ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಸತ್ಯ ಪಥದ ನಿತ್ಯ ಸಂತ ಗಾಂಧಿ ವ್ಯಕ್ತಿತ್ವದ ದರ್ಶನ ಇದು ಸುಮ ಚಂದ್ರಶೇಖರ್ ಅವರ ಕೃತಿ.

ಈ ಕೃತಿಗೆ ನಲ್ನುಡಿಯನ್ನು ಕರ್ನಾಟಕ ಸರ್ವೋದಯ ಮಂಡಳಿಯ ಕಾರ್ಯದರ್ಶಿ ಡಾ.ಎಚ್.ಎಸ್ ಸುರೇಶ್ ಅವರು ಬರೆದಿದ್ದಾರೆ. ಸದಾಶಯವನ್ನು ಅಮರಬಾಪು ಚಿಂತಕರು ಪತ್ರಿಕೆಯ ಸಂಪಾದಕರಾದ ಜೀರಿಗೆ ಲೋಕೇಶ್ ಅವರು ಬರೆದಿದ್ದಾರೆ. ಈ ಕೃತಿಯು ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಯುವ ಬರಹಗಾರರಿಗೆ ಧನಸಹಾಯ ಪಡೆದ ಕೃತಿಯಾಗಿದೆ.

ಈ ಕೃತಿಯಲ್ಲಿ ಲೇಖಕಿಯೂ ಗಾಂಧಿ ವ್ಯಕ್ತಿತ್ವ ದರ್ಶನವನ್ನು ಚಿತ್ರಿಸಿದ್ದಾರೆ. 'ಸತ್ಯ' ಗಾಂಧೀಜಿಯವರಿಗೆ ಅದೊಂದು ಕೇವಲ ಆಧ್ಯಾತ್ಮಿಕ ಮೌಲ್ಯವಾಗಿರಲಿಲ್ಲ. ಆದು ಅವರು ಬದುಕಿನಲ್ಲಿ ಕಂಡುಕೊಂಡ, ಬದುಕಿಗೆ ಸಂಬಂಧಿಸಿದ, ಬದುಕಿನ ಅನುಭವಗಳಿಂದ ಪರೀಕ್ಷಿಸಿಬಹುದಾದ, ಬದುಕನ್ನು ಹಸನುಗೊಳಿಸಬಲ್ಲ ಸತ್ಯವಾಗಿದೆ ಎಂದೇ ಅವರು ನಂಬಿದ್ದರು. ಅದರ ಹೊಳಹುಗಳು ಇಲ್ಲಿನ ಬಹಳಷ್ಟು ಬರಹಗಳಲ್ಲಿ ಕಂಡು ಬರುತ್ತದೆ. ಲೇಖಕಿಯೂ ಈ ಕೃತಿಯಲ್ಲಿ ಗಾಂಧಿ ಚಿಂತನೆಗಳ ಬಗ್ಗೆ ಬರೆದಿದ್ದಾರೆ. ಈ ಕೃತಿಯು ಗಾಂಧೀಜಿ ಅವರ 150ನೇ ವರ್ಷದ ಜನ್ಮ ದಿನದಂದು ಬಿಡುಗಡೆಯಾದ ಕೃತಿಯಾಗಿದೆ.

ಈ ದೇಶ ಕಂಡ, ಈ ನೆಲದಲ್ಲಿ ಓಡಾಡಿದ ಬಹುದೊಡ್ಡ ಸಾಧ್ಯತೆಗಳ ಜೀವಂತ ಸಾಕ್ಷಿ ಗಾಂಧಿ. ಇವರನ್ನು ಸಾಮಾನ್ಯ ಮನುಷ್ಯನೆಂದೇ ನೋಡಿ, ಆ ವ್ಯಕ್ತಿಯ ಪರಿಚಯಕ್ಕೆ ಇಳಿದರೆ ಮಾತ್ರ ಅಸಾಮಾನ್ಯ ಗಟ್ಟಿ ಹೆಜ್ಜೆಗಳು ನಮ್ಮನ್ನು ಎಚ್ಚರಿಸುತ್ತವೆ. ಗೋಡೆಯ ಮೇಲೆ ಚಿತ್ರವಾಗಿ ಉಳಿದಿರುವ ಗಾಂಧಿಯನ್ನು ಮನೆ-ಮನಗಳಿಗೆ ಕರೆತರುವ ಕೆಲಸ ತುರ್ತಾಗಿ ಆಗಬೇಕಿದೆ. ಬಾಪೂ ಚಿಂತನೆಗಳಿಗೆ ನಿಜವಾದ ಹೊಳಪು ಸಿಗುತ್ತದೆ. ಈ ಕಾರಣಕ್ಕೆ ಗಾಂಧಿ ಕುರಿತ ಮರು ಓದಿನ ಮರು ಅಧ್ಯಯನದ ಅಗತ್ಯವಿದೆ ಎಂದೆನಿಸುತ್ತದೆ. ಎಂದು ಬೆನ್ನುಡಿಯಲ್ಲಿ ಸಂಸ್ಕೃತಿ ಚಿಂತಕರಾದ ಗುರುರಾಜ ಪೋಶೆಟ್ಟಿಹಳ್ಳಿ ಅವರು ತಿಳಿಸಿದ್ದಾರೆ.

2019ನೇ ಸಾಲಿನ ರಾಜ್ಯಮಟ್ಟದ ವಿವಿಧ ದತ್ತಿ ಪ್ರಶಸ್ತಿ

ಈ ಕೃತಿಗೆ ಕನ್ನಡ ಸಾಹಿತ್ಯ ಪರಿಷತ್ತು ನೀಡುವ 2019ನೇ ಸಾಲಿನ ರಾಜ್ಯಮಟ್ಟದ ವಿವಿಧ ದತ್ತಿ ಪ್ರಶಸ್ತಿಗಳಲ್ಲಿ ಒಂದಾದ ಲಿಂ.ಲಲಿತಾದೇವಿ ಗುರುಸಿದ್ದಪ್ಪ ಪ್ರಶಸ್ತಿ ದೊರಕಿದೆ. ಹಾಗೆ ಅನಿಕೇತನ ಕನ್ನಡ ದಳದ ಸಹಯೋಗದಿಂದ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ನೀಡುವ 2020 ನೇ ಸಾಲಿನ ಉತ್ತಮ ವೈಚಾರಿಕ ಕೃತಿಗೆ ನೀಡುವ ಪ್ರೊ. ಬಿ ಕೃಷ್ಣಪ್ಪ ಸ್ಮಾರಕ ದತ್ತಿ ಪ್ರಶಸ್ತಿ ಕೂಡ ದೊರಕಿದೆ. ಹಾಗೂ ಕುಣಿಗಲ್ ನ ಕನ್ನಡ ಕಲರವ ಸಾಹಿತ್ಯಾಸಕ್ತರ ತಂಡ ಮತ್ತು ಅವ್ವ ಪುಸ್ತಕಾಲಯ ವತಿಯಿಂದ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ 2020 ನೇ ಸಾಲಿನ ಸೃಜನಶೀಲ ಸಾಹಿತಿ ಪ್ರಶಸ್ತಿ ದೊರಕಿದೆ.

ಈ ಕೃತಿಯು ಗಾಂಧಿ ವ್ಯಕ್ತಿತ್ವದ ದರ್ಶನ ಕೃತಿಯಾಗಿದೆ ಇದು ಯುವಕರಿಗೆ ಮತ್ತು ಗಾಂಧಿ ತತ್ವಗಳನ್ನು ಅನುಸರಿಸುವ ವ್ಯಕ್ತಿಗಳಿಗೆ ಮಾರ್ಗದರ್ಶನ ಹಾಗೂ ಹೊಸ ಪ್ರತಿಭೆಗಳಿಗೆ ಉತ್ತಮವಾದ ಮಾರ್ಗದರ್ಶ ಕೃತಿಯಾಗಿದೆ. ಈ ಕೃತಿಯು ಎಲ್ಲಾ ತರಹದಲ್ಲಿ ಮಾರ್ಗದರ್ಶನ ನೀಡುವ ಕೃತಿಯಾಗಿದೆ. ಲೇಖಕಿಯೂ ಇನ್ನಷ್ಟು ಕೃತಿಗಳನ್ನು ಹೀಗೆ ಬರೆಯಲು ಗಾಂಧಿ ಚಿಂತನೆಗಳ ಬಗ್ಗೆ ಇನ್ನಷ್ಟು ಅಧ್ಯಯನ ಮಾಡಲಿ ಎಂದು ಹಾರೈಸುವೆ.

ರಾಯರ ಮಠದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ, ವರ್ಧಂತಿ ಮಹೋತ್ಸವ

• ಉದಯವಾಹಿನಿ, ಬೆಂಗಳೂರು

ಮಂತ್ರಾಲಯ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ 404ನೇ ವೇದಾಂತ ಸಾಮ್ರಾಜ್ಯ ಪಟ್ಟಾಭಿಷೇಕ ಮತ್ತು 430ನೇ ವರ್ಧಂತಿ ಮಹೋತ್ಸವವನ್ನು ಬೆಂಗಳೂರು ಕೋಣನಕುಂಟೆಯ ಚುಂಚಘಟ್ಟ ಕೊತ್ತನೂರು ಮುಖ್ಯ ರಸ್ತೆಯಲ್ಲಿರುವ ಗುರುರಾಜ ಬಡಾವಣೆಯ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲಮೃತಿಕಾ ಬೃಂದಾವನ ಸನ್ನಿಧಾನದಲ್ಲಿ ಆಯೋಜಿಸಲಾಗಿದೆ.

ಮಾರ್ಚ್ 1ರ ಬೆಳಗ್ಗೆ 108 ಜನರಿಂದ ಶ್ರೀ ಅಪ್ಪಣ್ಣಾಚಾರ್ಯ ಕೃತ ರಾಘವೇಂದ್ರ ಸ್ವಾಮಿಗಳ ಅಷ್ಟೋತ್ತರ ಪಾರಾಯಣ ಲಕ್ಷ ಪುಷ್ಪಾರ್ಚನೆ 11:00ಗೆ ಪಾದುಕಾ ಪಟ್ಟಾಭಿಷೇಕ, ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶ ನ್ಯಾ // ಶ್ರೀ ಶ್ರೀಶಾನಂದ ವೇದವ್ಯಾಸಾಚಾರ್ ರವರಿಂದ ಮಹೋತ್ಸವದ

ತಾಯಿ ಮಮತೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ: ಡಾ.ದಿವಾಕರ ಹೆಗಡೆ ಅಭಿಪ್ರಾಯ

• ಉದಯವಾಹಿನಿ, ಧಾರವಾಡ

ತಾಯಿ ಬದುಕಿನಜೀವನಾಡಿ, ಅವಳದು ಯಾವುದೇದುರಾಸೆಯಿಲ್ಲದ ಪ್ರೀತಿ. ತಾಯಿಯ ಪ್ರೀತಿ- ಮಮತೆಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದು ಕವಿ. ಕಲಾವಿದ ಡಾ.ದಿವಾಕರ ಹೆಗಡೆ ಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಶ್ರೀಮತಿ ಕುಸುಮ ವಿಠ್ಠಲರಾವ್‌ದೇಶಪಾಂಡೆ ಸ್ಮರಣಾರ್ಥದತ್ತಿ ಅಂಗವಾಗಿ ಆಯೋಜಿಸಿದ್ದ ಉಪನ್ಯಾಸ ಹಾಗೂ ಶ್ರೇಷ್ಠ ತಾಯಿ' ಸನ್ಮಾನಕಾರ್ಯಕ್ರಮದಲ್ಲಿಅಮ್ಮನೆಂಬ ಅಂತರಂಗ' ವಿಷಯಕುರಿತು ಮಾತನಾಡುತ್ತಿದ್ದರು.

ಮಾತನಾಡಿದ ಅವರು, ಭೂಮಿಯ ಮೇಲೆ ತಾಯಿ ಮಕ್ಕಳ ಸಂಬಂಧ ಸೃಷ್ಟಿ ಪರಂಪರೆಯ ಸಂಕೇತ.ಭೂಮಿ, ಭಾಷೆ ಹಾಗೂ ನೀರನ್ನು ಸಹ ತಾಯಿಎಂದು ಪೂಜ್ಯ ಭಾವನೆಯಿಂದಕಾಣುತ್ತೇವೆ. ದೇವರಿಗೆ ಎಲ್ಲಾ ಕಡೆ ಇರಲು ಸಾಧ್ಯ ಆಗದ್ದಕ್ಕೆತಾಯಿಯನ್ನು ಸೃಷ್ಟಿಸಿದ.ದೇವರ ಮತ್ತೊಂದುರೂಪವೇಅಮ್ಮ.ತನಗಾಗಿಏನನ್ನು ಬಯಸದತಾಯಿ ನಿಜವಾಗಿತ್ಯಾಗಮಯಿ. ಇಂದಿನ ಆಧುನಿಕತೆಯ ಭರಾಟೆಯಲ್ಲಿ ತಾಯ್ತನವನ್ನೇ ತಿರಸ್ಕರಿಸುತ್ತಿರುವುದು ವಿಪರ್ಯಾಸ. ಇದೊಂದುದುರಂತವೇ ಸರಿ. ಅಂಥತಾಯಿಯ ಬೆಲೆ ಅರ್ಥ ಮಾಡಿಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕ.ವಿ.ವ. ಸಂಘದ ಅಧ್ಯಕ್ಷ ಚಂದ್ರಕಾಂತ ಬೆಲ್ಲದ ಮಾತನಾಡಿ, ರಾಜನ್‌ದೇಶಪಾಂಡೆದತ್ತಿ ಮೂಲಕ ತಾಯಿಯನ್ನು ಸ್ಮರಿಸುವುದು ಪುಣ್ಯದಕಾರ್ಯ. ನಿಜವಾಗಿತಾಯಿ ಆ

ದೇವರು ನಮಗೆ ನೀಡಿದ ದೊಡ್ಡ ಆಸ್ತಿ.ತಾಯಿ ಇಲ್ಲದ ಜೀವನ ಜೀವನವೇ ಅಲ್ಲಎಂದು ಹೇಳಿದರು. ದತ್ತಿದಾನಿ, ಮಕ್ಕಳ ತಜ್ಞ, ವೈದ್ಯಡಾ. ರಾಜಣ್ಣದೇಶಪಾಂಡೆದತ್ತಿಆಶಯಕುರಿತು ಮಾತನಾಡಿ ತಮ್ಮ ತಾಯಿಯನ್ನು ಸ್ಮರಿಸಿಕೊಂಡರು. ಶ್ರೀಮತಿ ಅನುರಾಧ ವೆಂಕಟೇಶ್ ಪ್ರಭುಅವರಿಗೆ ಶ್ರೇಷ್ಠ ತಾಯಿ ಪ್ರಶಸ್ತಿ ಪುರಸ್ಕಾರ ನೀಡಿಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಡಾ. ಸಂಜೀವಕುಲಕರ್ಣಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ ಕುಂಬಿ ನಿರೂಪಿಸಿದರು. ವೀರಣ್ಣ ಒಡ್ಡೀನ ವಂದಿಸಿದರು. ಗುರು ಹಿರೇಮಠ, ಡಾ.ಮಹೇಶ ಧ. ಹೊರಕೇರಿ, ಡಾ. ಜಿನದತ್ತ ಹಡಗಲಿ, ಎಂ.ಎಂ. ಚಿಕ್ಕಮಠ, ಶಾಂತವೀರ ಬೆಟಗೇರಿ ಸೇರಿದಂತೆ ಮುಂತಾದವರಿದ್ದರು.

ಆಪತ್‌ನಲ್ಲಿದ್ದವರ ರಕ್ಷಣೆ ಮಾಡಿದರೆ ಆಪತ್ಬಾಂಧವ ನಮ್ಮ ಕೈ ಹಿಡಿತಾನೆ

ನಿಸ್ವಾರ್ಥತೆ ಹಾಗೂ ನಿರ್ವೆಸನಿಯಾಗಿ ಸುಸಂಸ್ಕೃತ ಬದುಕು ಸಾಗಿಸಿ ಇಂಥ ಶ್ರೇಷ್ಠ ಕಾರ್ಯದಲ್ಲಿ ತಲ್ಲಿನರಾಗುವಂತೆ ಕರೆ

• ಉದಯವಾಹಿನಿ, ಬೀದರ್

ನಾವು ಆಪತ್‌ದಲ್ಲಿದ್ದವರ ರಕ್ಷಣೆ ಮಾಡಿದರೆ ಆಪತ್ಬಾಂದವನಾದ ಆ ಪರಮಾತ್ಮ ನಮ್ಮ ಕೈ ಹಿಡಿಯುತ್ತಾನೆ ಎಂದು ಕರ್ನಾಟಕ ಕ್ರಿಯಾ ಯೋಜನೆ ಅಭಿವೃದ್ಧಿ ಸಮಿತಿಯ ಮಾಜಿ ಅಧ್ಯಕ್ಷೆ ಡಾ.ಗುರಮ್ಮ ಸಿದ್ದಾರಡ್ಡಿ ತಿಳಿಸಿದರು.

ನಗರದ ಹೃದಯಭಾಗದಲ್ಲಿರುವ ಕರ್ನಾಟಕ ಸಾಹಿತ್ಯ ಸಂಘದ ಸಾಂಸ್ಕೃತಿಕ ಸಭಾಂಗಣದಲ್ಲಿ ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಜಿಲ್ಲಾ ಘಟಕ ಹಾಗೂ ಸುಭಾಷಚಂದ್ರ ಭೋಸ್ ಯುವಕ ಸಂಘಗಳ ಸಂಯುಕ್ತಾಶ್ರಯದಲ್ಲಿ ಆಪತ್ ರಕ್ಷಕರು ಹಾಗೂ ರಾಜ್ಯದ ಕಾರ್ಮಿಕ ಸಚಿವರಾದ ಸಂತೋಷ ಲಾಡ್ ಅವರ ಹುಟ್ಟು ಹಬ್ಬದ ಪ್ರಯುಕ್ತ ಆಪತ್ ರಕ್ಷಕ ದಿನಾಚರಣೆ ಹಾಗೂ ಸಂಜೀವಿನಿ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ನಾವು ಸದಾ ಪರೋಪಕಾರಿಯಾಗಿರಬೇಕು. ನಮ್ಮ ಕಾರ್ಯಕ್ಕೆ ಪರಮಾತ್ಮ ಪ್ರತಿಫಲ ಕೊಟ್ಟೆ ಕೊಡುತ್ತಾನೆ. ಸತ್ಕಾರ್ಯದಲ್ಲಿ ಸದಾ ಮಿಂದೆದ್ದರೆ ಸದ್ಬುದ್ಧಿ ಪ್ರಾಪ್ತವಾಗುತ್ತದೆ. ನಿಸ್ವಾರ್ಥತೆ ಹಾಗೂ ನಿರ್ವೆಸನಿಯಾಗಿ ಸುಸಂಸ್ಕೃತ ಬದುಕು ಸಾಗಿಸಿ ಇಂಥ ಶ್ರೇಷ್ಠ ಕಾರ್ಯದಲ್ಲಿ ತಲ್ಲಿನರಾಗುವಂತೆ ಕರೆ

ಉದಯವಾಹಿನಿ ಚಿತ್ರ

ಕೊಟ್ಟರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ನ್ಯಾಯವಾದಿ ನಾರಾಯಣ ಗಣೇಶ ಅವರು, ಕಾರ್ಮಿಕ ಸಚಿವ ಸಂತೋಷ ಲಾಡ್ ಅವರ ಜನ್ಮದಿನವಾದ ಇಂದು ಅವರ ಹುಟ್ಟು ಹಬ್ಬ ರಾಜ್ಯದ ಹಲವು ಜಿಲ್ಲೆಗಳ ಎಲ್ಲಾ ಹಳ್ಳಿ ಹಳ್ಳಿಗಳಲ್ಲಿ ಆಚರಿಸಲಾಗುತ್ತಿದೆ.

ಕೋವಿಡ್ ಕಾಲದಲ್ಲಿ ಅವರು ಮಾಡಿದ ಕಾರ್ಯ ಇಂದು ಇಂಥ ಸಂಘಟನೆಗಳು ಗುರುತಿಸಿ ಅವರಿಗೆ ಸಂಜೀವಿನಿ ಜೀವರಕ್ಷಕ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಹೆಮ್ಮೆ ಹಾಗೂ ಅಭಿಮಾನದ ಸಂಕೇತ ಎಂದು ಬಣ್ಣಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಜಿಲ್ಲಾ ಅಧ್ಯಕ್ಷ ರತ್ನದೀಪ ಕಸ್ತುರೆ ಅಧ್ಯಕ್ಷತೆ

ಸುಸಂಸ್ಕೃತ ಬದುಕು ಸಾಗಿಸಿ

ವಹಿಸಿ ಮಾತನಾಡಿ, ಆಪತ್‌ಕಾಲದಲ್ಲಿ ಇದ್ದಾಗ ಯಾರು ಬಳಿಯಲ್ಲಿ ಸುಳಿಯುವುದಿಲ್ಲ. ಚೆನ್ನಾಗಿದ್ದಾಗ ಎಲ್ಲರು ಮಾತನಾಡಿಸುತ್ತಾರೆ. ನಿಜವಾದ ಆಪತ್‌ಸಮಯವೆಂದರೆ ಸಂಕಟದಲ್ಲಿದ್ದವರನ್ನು ಮೇಲಿತ್ತಿ ಅವರನ್ನು ಪ್ರೋತ್ಸಾಹಿಸುವ ಹಾಗೂ ಸತ್ಕರಿಸುವ ಕಾರ್ಯ ನಡೆಯಬೇಕೆಂಬ ಉದ್ದೇಶದಿಂದ ಜಿಲ್ಲೆಯ 15 ಜನ ಮಹನಿಯರನ್ನು ಗುರುತಿಸಿ ಅವರಿಗೆ ಸನ್ಮಾನಿಸುವ ಸೌಭಾಗ್ಯ ನಮಗೆ ಒದಗಿ ಬಂದಿದ್ದಕ್ಕೆ ಹೆಮ್ಮೆ ಪಡುತ್ತೇನೆ ಎಂದರು.

ಸಂಜೀವಿನಿ ಜೀವರಕ್ಷಕ ಟ್ರಸ್ಟ್ ಇನ್ನೋರ್ವ ಸಂಜೀವಿನಿ ರತ್ನ ಪ್ರಶಸ್ತಿ ಪುರಸ್ಕೃತ ಕಾಶಿನಾಥ

> ಆಪತ್‌ರಕ್ಷಕನಿಗೆ ಸಮಾಜದಲ್ಲಿ ದೊಡ್ಡ ಗೌರವ ಇರುತ್ತದೆ. ಆತನ ಆಪತ್‌ಕಾಲದಲ್ಲಿ ಬೇರೆಯವರು ಸಹಾಯ ಮಾಡುವುದಂತೂ ಪಕ್ಕಾ. ತನ್ನ ಸೇವೆಯಲ್ಲಿದ್ದಾಗ ಕೊನೆ ಘಳಿಗೆಯಲ್ಲಿದ್ದ ಎರಡು ಜೀವಗಳನ್ನು ಉಳಿಸುವ ಸೌಭಾಗ್ಯ ದೊರಕಿತು. ರಸ್ತೆಯಲ್ಲಿ ವೇಗವಾಗಿ ಬೈಕ್ ಓಡಿಸಿ ಅಪಘಾತಕ್ಕೀಡಾಗಿದ್ದ ಯುವಕ ಹಾಗೂ ಆಸ್ಪತ್ರೆಯಲ್ಲಿ ಹೆರಿಗೆ ಆದ ಸಂದರ್ಭದಲ್ಲಿ ಹೃದಯಘಾತಕ್ಕೆ ಒಳಗಾದವರಿಗೆ ಹೃದಯಸ್ತಂಭನ ಮಾಡಿ ಜೀವ ಉಳಿಸುವ ಅವಕಾಶ ಕೊಟ್ಟ ಆ ಕರುಣಾಕರನಿಗೆ ಧನ್ಯವಾದ ಸಮರ್ಪಿಸುವುದಾಗಿ ತಿಳಿಸಿದರು
>
> -ಡಾ.ಚಂದ್ರಕಾಂತ ಗುದಗೆ, ನಿವೃತ್ತ ಜಿಲ್ಲಾ ಶಸ್ತ್ರ ಚಿಕಿತ್ಸಕ

> ಸಂಜೀವಿನಿ ಆಪ್ತರಕ್ಷಕ ಟ್ರಸ್ಟ್ ನವರು ಗೋಡೆಗಳ ಮೇಲೆ ಅಪಘಾತವಾಗದಂತೆ ಎಚ್ಚರಿಕೆ ಬರಹಗಳನ್ನು ಬರೆಯುವುದು, ರಸ್ತೆಗಳ ಮಧ್ಯ ಬಿಳಿ ಲೈನ್‌ಗಳನ್ನು ಬರೆದು ಅಪಘಾತ ನಿಯಂತ್ರಿಸಲು ಉತ್ತಮ ಕಾರ್ಯ ಆಪತ್‌ದಲ್ಲಿದ್ದವರ ಪ್ರಾಣ ರಕ್ಷಣೆಗೆ ಮುಂದಾಗಿ ಸೈನಿಕರಂತೆ ಕಾರ್ಯ ಮಾಡುತ್ತಿರುವ ಸಂಘಟನೆಯ ಜಿಲ್ಲಾಧ್ಯಕ್ಷ ರತ್ನದೀಪ ಹಾಗೂ ಅವರ ಸದಸ್ಯರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು
>
> -ಪ್ರಶಾಂತ ದೊಡ್ಡಿ , ನಗರ ಸಭೆಯ ಸ್ತಾಯಿ ಸಮಿತಿ ಅಧ್ಯಕ್ಷ

ಬಗದಲ್ ಮಾತನಾಡಿದರು. ಕೆ.ಪಿ.ಸಿ.ಸಿ ಕಾರ್ಮಿಕ ವಿಭಾಗದ ಕಾರ್ಯದರ್ಶಿ ಜಾನಸನ್ ಘೋಡೆ ವೇದಿಕೆಯಲ್ಲಿದ್ದರು.

ಈ ಸಂದರ್ಭದಲ್ಲಿ ಸಂಗೀತ ಕ್ಷೇತ್ರದಲ್ಲಿ ನರಸಿಂಹಲು ಡಪ್ಪೂರ. ಆರೋಗ್ಯ ಕ್ಷೇತ್ರದಲ್ಲಿ ಡಾ.ಚಂದ್ರಕಾಂತ ಗುದಗೆ, ಪತ್ರಿಕಾ ರಂಗದಲ್ಲಿ ಶಿವಕುಮಾರ ಸ್ವಾಮಿ, ವೈದ್ಯಕೀಯ ಶಿಕ್ಷಣದಲ್ಲಿ ಪ್ರಕಾಶ ಮಹಿಮಾಕರ್, ಕೃಷಿ ಕ್ಷೇತ್ರದಲ್ಲಿ ವೈಜಿನಥ ನಿಡೋದಾಕರ್, ಹೋರಾಟಗಾರ ಗುರುದಾಸ ಅಮದಲಪಡ, ಕ್ರೀಡೆಯಲ್ಲಿ ಮುಬಾರಕ, ಬಗದಲ ಗ್ರಾ.ಪಂ ಸದಸ್ಯ ಕಾಶಿನಾಥ ಬಗದಲ, ನೃತ್ಯ ಶಿಕ್ಷಕ ಶಿವಕುಮಾರ ಆಣದುರೆ, ಶುಶ್ರೂಷಾಧಿಕಾರಿ ಅಮರ ಭಾಂಗೆ ಅವರಿಗೆ ಸಂಜೀವಿನಿ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನೀರು ನಿರ್ವಹಣೆ ಕುರಿತು ಒಂದು ದಿನದ ತರಬೇತಿ

• ಉದಯವಾಹಿನಿ, ಕೆಂಭಾವಿ

ಜಲ ಸಂರಕ್ಷಣೆ, ನೀರಿನ ಸದ್ಬಳಕೆಯ ಸಹಭಾಗಿತ್ವ ಮಹದಾಸೆಯೊಂದಿಗೆ ನೀರು ಬಳಕೆದಾರರ ಸಹಕಾರಿ ಸಂಘಗಳನ್ನು ಆರಂಭಿಸಲಾಗಿತ್ತು ಎಂದು ಹಿರಿಯ ನಿರೀಕ್ಷಕರಾದ ಸಿದ್ದನಗೌಡ. ಎಸ್. ಪಾಟೀಲ್ ಹೇಳಿದರು.

ಪಟ್ಟಣದ ಪ್ರವಾಸ ಮಂದಿರದಲ್ಲಿ ಶುಕ್ರವಾರ ನಡೆದ ಕೃಷ್ಣಕಾಡಾ ಭೀಮರಾಯನಗುಡಿ ವತಿಯಿಂದ ನೀರು ಬಳಕೆದಾರರ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಸದ್ಯಸರಿಗೆ ನೀರು ನಿರ್ವಹಣೆ ಕುರಿತು ಒಂದು ದಿನದ ತರಬೇತಿ ಕಾರ್ಯಗಾರದಲ್ಲಿ ಮಾತನಾಡಿದ ಅವರು ನಾವು ಗಂಗಾ ಮಾತೆಯೆಂದು ಕರೆಯುವ ಹಲವಾರು ನದಿಗಳು ಕಲುಷಿತಗೊಂಡಿದೆ. ಜನಸಂಖ್ಯೆ ಹೆಚ್ಚಿದಂತೆ ಭೂಮಿಯ ಮೇಲೆ ನೀರಿನ ಪ್ರಮಾಣ

ಉದಯವಾಹಿನಿ ಚಿತ್ರ

ಹೆಚ್ಚುವುದಿಲ್ಲ, ಬದಲಾಗಿ ಕಡಿಮೆಯಾಗುತ್ತಿದೆ. ಈಗಿನಿಂದಲೇ ಎಚ್ಚೆತ್ತುಕೊಳ್ಳದಿದ್ದರೆ ಜಲ ಸಂಕಟ ಎದುರಿಸಬೇಕಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಅಣ್ಣಪ್ಪ. ಬಿ, ಆಂಜನೇಯ. ಬಿ, ಅಬ್ದುಲ್ ಸಾಬ್, ಗೌಸ್ ಪಟೇಲ್, ಗಂಗಾಧರ್ ಕುಂಬಾರ್, ಶರಣಪ್ಪ ಮನಗೂಳಿ, ಬಂದೇನವಾಜ್ ಮಕಂದಾರ್, ಬೈಲಪ್ಪ ಪಾಟೀಲ್, ಮಲ್ಲಣ್ಣ ರಾಂಪುರ, ಸತ್ಯನಾರಾಯಣ ಕುಲಕರ್ಣಿ, ಹಳೆಪ್ಪ ನಿರೂಪಿಸಿದರು, ಸೈಯದ್ ತಾಳಿಕೋಟಿ ವಂದಿಸಿದರು.

• ಉದಯವಾಹಿನಿ, ಪುತ್ತೂರು

ಪುತ್ತೂರಿನ ಇತಿಹಾಸ ಪ್ರಸಿದ್ಧ ಮಹತೋಭಾರ ಮಹಾಲಿಂಗೇಶ್ವರ ದೇವಳದ ಎದುರಿನ ದೇವರಮಾರು ಗದ್ದೆಯಲ್ಲಿ 32ನೇ ವರ್ಷದ ಹೊನಲು ಬೆಳಕಿನ ಕೋಟಿ-ಚೆನ್ನಯ ಜೋಡುಕರೆ ಕಂಬಳ ಹಾಗೂ ರಾಜ್ಯಮಟ್ಟದ ಕೆಸರುಗದ್ದೆ ಓಟದ ಸ್ಪರ್ಧೆ ಮಾ.1ರಂದು ನಡೆಯುವುದು ಎಂದು ಕೋಟಿ-ಚೆನ್ನಯ ಜೋಡುಕರೆ ಕಂಬಳ ಸಮಿತಿಯ ಅಧ್ಯಕ್ಷ ಎನ್.ಚಂದ್ರಹಾಸ ಶೆಟ್ಟಿ ಅವರು ತಿಳಿಸಿದರು.

ಮಾ.1ರಂದು ಕಂಬಳವನ್ನು ಮಹಾಲಿಂಗೇಶ್ವರ ದೇವಳದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಅವರು ಉದ್ಘಾಟಿಸುವರು, ಸವಣೂರು ವಿದ್ಯಾರಶ್ಮಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಚಾಲಕರಾದ ಸಹಕಾರ ರತ್ನ ಕೆ.ಸೀತಾರಾಮ ರೈ ಅವರು ಅಧ್ಯಕ್ಷತೆ ವಹಿಸುವರು ಎಂದರು.

ಸಂಜೆ 6ಗಂಟೆಗೆ ಶಾಸಕ ಅಶೋಕ್‌ಕುಮಾರ್ ರೈ ಅವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ

ಕಂಬಳ ಕರೆಯಲ್ಲಿ ರಾಜ್ಯಮಟ್ಟದ ಕೆಸರು ಗದ್ದೆ ಓಟ

ಉದಯವಾಹಿನಿ ಚಿತ್ರ

ನಡೆಯುವುದು. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ರಾಜ್ಯ ಗೃಹ ಸಚಿವ ಡಾ.ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್, ರಾಜ್ಯ ಕಾರ್ಮಿಕ ಸಚಿವ ಸಂತೋಷ್ ಲಾಡ್, ಸಂಸದ ಬ್ರಿಜೇಶ್ ಚೌಟ, ಉದ್ಯಮಿ ಪ್ರಕಾಶ್ ಶೆಟ್ಟಿ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾದ ಸಹಕಾರ ರತ್ನ ಡಾ.ಎಂ.ಎನ್. ರಾಜೇಂದ್ರಕುಮಾರ್, ಶಾಸಕರಾದ ಮಂಡ್ಯದ ರವಿಕುಮಾರ್ ಗಣಿಗ, ಬಂಟ್ವಾಳದ ರಾಜೇಶ್ ನಾಕ್ ಉಳಿಪ್ಪಾಡಿಗುತ್ತು,ಭಾಗೀರಥಿ ಮುರುಳ್ಯ, ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ, ಐವನ್.ಡಿಸೋಜ, ಕಿಶೋರ್‌ಕುಮಾರ್ ಬೊಡ್ಯಾಡಿ, ಮಾಜಿ ಸಚಿವ ರಮಾನಾಥ ರೈ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಮಾಜಿ ಸಚಿವ ಅಭಯಚಂದ್ರ ಜೈನ್ ಮತ್ತಿತರರು ಅತಿಥಿಗಳಾಗಿ ಭಾಗವಹಿಸುವರು.

ನಟ-ನಟಿಯರ ಮೆರುಗು

ಚಿತ್ರನಟಿ ರಚಿತಾ ರಾಮ್, ನಿರೂಪಕಿ ಅನುಶ್ರೀ, ನಟರಾದ ಲೂಸ್ ಮಾದ ಯೋಗಿ, ಉಗ್ರಂ ಮಂಜು, ಗಗನ್ ಚಿನ್ನಪ್ಪ, ನಟಿ ರಚನಾ ರೈ, ನಿರ್ದೇಶಕ ಸುಕೇಶ್ ಶೆಟ್ಟಿ, ಬಿಗ್‌ಬಾಸ್ ಖ್ಯಾತಿಯ ಹನುಮಂತ, ಧನರಾಜ್ ಆಚಾರ್ ಮತ್ತಿತರರು ವಿಶೇಷ ಆಕರ್ಷಣೆಯ ಅತಿಥಿಗಳಾಗಿ ಭಾಗವಹಿಸುವರು ಎಂದು ಅವರು ತಿಳಿಸಿದರು.

ಶಿವಯೋಗ ಮತ್ತು ಶಿವಯೋಗಿ ಸಂಗಮವೇ ಅಥಣಿ : ಡಾ.ವಿ.ಎಸ್.ಮಾಳಿ

• ಉದಯವಾಹಿನಿ, ಅಥಣಿ

ಶಿವಯೋಗದ ಸಾಧನೆ ಮಾಡಿ ಜಂಗಮ ಜ್ಯೋತಿ ಎನಿಸಿಕೊಂಡಿರುವ ಅಥಣಿಯ ಮುರುಘೇಂದ್ರ ಶಿವಯೋಗಿಗಳು ಮಠ ಬಿಡಲಿಲ್ಲ, ಪೀಠ ಏರಲಿಲ್ಲ, ದಾಸೋಹ ಬಿಡಲಿಲ್ಲ, ಕಾಸು ಮುಟ್ಟಲಿಲ್ಲ, ಸದಾ ಭಕ್ತರೊಂದಿಗೆ ಇದ್ದು ಬಸವ ತತ್ವ ಪ್ರಸಾರ ಮಾಡಿ ನಾಡಿಗೆ ಬೆಳಕಾದವರು. ಶಿವಯೋಗ, ಶಿವರಾತ್ರಿ, ಶಿವಯೋಗಿಯ ಸಂಗಮವೇ ಅಥಣಿಯ ಗಚ್ಚಿನ ಮಠವಾಗಿದೆ ಎಂದು ಖ್ಯಾತ ಸಾಹಿತಿ ಡಾ.ವಿ.ಎಸ್. ಮಾಳಿ ಹೇಳಿದರು.

ಮಹಾಶಿವರಾತ್ರಿ ಪ್ರಯುಕ್ತ ಶರಣ ಸಂಸ್ಕೃತಿ ಉತ್ಸವದ ಉದ್ಘಾಟನೆ ಸಮಾರಂಭದಲ್ಲಿ ಅಭಿನವ ಅಲ್ಲಮ ಅಥಣಿ ಶಿವಯೋಗಿಗಳು ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ, ಅಭಿನವ ಅಲ್ಲಮರಂತೆ ಅಥಣಿ ಶಿವಯೋಗಿಗಳು ನಡೆದು ತೋರಿದ್ದಾರೆ.

ಉದಯವಾಹಿನಿ ಚಿತ್ರ

12ನೇ ಶತಮಾನದಲ್ಲಿ ಬಸವಣ್ಣನವರು ಸಮಾಜದಲ್ಲಿ ಸಮಾನತೆಗಾಗಿ ಹೋರಾಡುವ ಮೂಲಕ ಇಂದಿಗೂ ನಮ್ಮೆಲ್ಲರ ಬದುಕಿಗೆ ದಾರಿದೀಪವಾಗಿದ್ದಾರೆ. ಅಥಣಿ ಶಿವಯೋಗಿಗಳು ಬಸವಣ್ಣನವರ ವಚನಗಳನ್ನು ಅಪ್ಪನವರ ವಚನಗಳು ಎಂದು ಗೌರವಿಸುವ ಮೂಲಕ ವಚನದ ಪುಸ್ತಕಗಳನ್ನ ಅವರಿಗೆ ಭಕ್ತರೊಬ್ಬರು ಕೊಟ್ಟ ಮಂಚದ ಮೇಲೆ ಇಟ್ಟು ತಾವು ನೆಲದ ಮೇಲೆ ಮಲಗುತ್ತಿದ್ದರು. ಬಸವಣ್ಣನವರ ವಚನಗಳನ್ನ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಶಿವಯೋಗಿಗಳು ಶಿವ ಯೋಗದ ಸಾಧನೆಯನ್ನು

ನಮ್ಮೆಲ್ಲರ ಬದುಕಿಗೆ ದಾರಿದೀಪ

ಮಾಡಿ ಇತಿಹಾಸದ ಪುಟವನ್ನು ದಾಖಲಿಸಿದ್ದಾರೆ. ಅವರ ಆದರ್ಶಗಳು ನಮ್ಮೆಲ್ಲರಿಗೆ ಪ್ರೇರಣೆಯಾಗಬೇಕು ಎಂದರು. ಸಮಾರಂಭದ ದಿವ್ಯ ಸಾನಿಧ್ಯ ವಹಿಸಿದ್ದ ಶಿರ್ಶಡ ಹಿರೇಮಠ ಸಂಸ್ಥಾನದ ಅಭಿನವ ಮುರುಗೇಂದ್ರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಜ್ಞಾನದ ಭಕ್ತಿಯ ಬುತ್ತಿಯನ್ನು ಅಥಣಿ ಶಿವಯೋಗಿಗಳು ನೀಡಿದ್ದಾರೆ. ಹೀಗಾಗಿ ಗಚ್ಚಿನಮಠವು ಆಧ್ಯಾತ್ಮದ ಸ್ವರ್ಗವಾಗಿದೆ ಎಂದರು.

ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿ, ಬಸವಣ್ಣನವರ ನಡೆ ಮತ್ತು ಅಲ್ಲಮಪ್ರಭುಗಳ ಜ್ಞಾನವನ್ನು ಕಾರ್ಯರೂಪಕ್ಕೆ ತಂದವರು ಅಥಣಿಯ ಶಿವಯೋಗಿಗಳು. ಶಿವಯೋಗ, ಕಾಯಕ ಮತ್ತು ದಾಸೋಹ ಪರಂಪರೆಯನ್ನು ಮುನ್ನಡೆಸಿಕೊಂಡು ಬಸವ ತತ್ವವನ್ನು ಪ್ರಸಾರ ಮಾಡಿದ್ದಾರೆ ಎಂದು ಹೇಳಿದರು.

ವಿಜ್ಞಾನ ಮನುಷ್ಯ ಜೀವನದ ಅವಿಭಾಜ್ಯ ಅಂಗ: ಸಂತೋಷ

• ಉದಯವಾಹಿನಿ, ವಿಜಯಪುರ

ದಿನನಿತ್ಯದ ಜೀವನದಲ್ಲಿ ವಿಜ್ಞಾನ ಹಾಸುಹೊಕ್ಕಾಗಿದೆ. ನಮ್ಮ ಸಮಾಜ ಮತ್ತು ಆರ್ಥಿಕತೆಯ ಅಭಿವೃದ್ಧಿಗೆ ವಿಜ್ಞಾನ ಅತ್ಯಗತ್ಯ. ಸಮಾಜದಲ್ಲಿ ಎದುರಾಗುವ ಸಮಸ್ಯೆಗೆ ವಿಜ್ಞಾನದಿಂದ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಶುಕ್ರವಾರ ತಾಲ್ಲೂಕಿನ ಹಿರೇರೂಗಿ ಗ್ರಾಮದ ಯುಬಿಎಸ್ ಶಾಲೆಯಲ್ಲಿ ಹಮ್ಮಿಕೊಂಡ 'ರಾಷ್ಟ್ರೀಯ ವಿಜ್ಞಾನ ದಿನ'ವನ್ನು ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ವಿಜ್ಞಾನ ದಿನವು ನಮ್ಮ ಜಗತ್ತನ್ನು ರೂಪಿಸುವಲ್ಲಿ ವಿಜ್ಞಾನದ ಪಾತ್ರವನ್ನು ನೆನಪಿಸುತ್ತದೆ. ಇದು ನಮ್ಮ ಹಿಂದಿನ, ವರ್ತಮಾನ ಮತ್ತು ಭವಿಷ್ಯದ ವೈಜ್ಞಾನಿಕ ಸಾಧನೆಗಳ ಆಚರಣೆಯಾಗಿದೆ. ವಿಜ್ಞಾನಕ್ಕೆ ಗಮನಾರ್ಹ ಕೊಡುಗೆಗಳನ್ನು ನೀಡಿದ ವಿಜ್ಞಾನಿಗಳು ಮತ್ತು ನಾವ

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	09:00 ರಿಂದ 10:30
ಗುಳಿಕ ಕಾಲ	ಬೆಳಿಗ್ಗೆ	06:00 ರಿಂದ 07:30
ಯಮಗಂಡ ಕಾಲ	ಮಧ್ಯಾಹ್ನ	01:30 ರಿಂದ 03:00

ಮೇಷ – ನಿಮ್ಮನ್ನು ನೀವೇ ನೋಡಿಕೊಳ್ಳುವ ಬಯಕೆಗೆ ಇತರರ ಅಗತ್ಯಗಳು ಕಡಿವಾಣ ಹಾಕುತ್ತವೆ. ಭಾವನೆಗಳನ್ನು ತಡೆಹಿಡಿಯಬೇಡಿ , ವಿಶ್ರಾಂತಿ ಪಡೆಯುವ ಸಲುವಾಗಿ ನೀವು ಇಷ್ಟಪಡುವುದನ್ನೇನಾದರೂ ಮಾಡಿ.

ವೃಷಭ – ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ?ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು.

ಮಿಥುನ – ನಿಮ್ಮ ಭಯವನ್ನು ಗುಣಪಡಿಸಲು ಇದು ಒಳ್ಳೆಯ ಸಮಯ. ಇದು ಭೌತಿಕ ಚೈತನ್ಯವನ್ನು ಕಡಿಮೆ ಮಾಡುವುದಲ್ಲದೇ ಜೀವಿತಾವಧಿಯನ್ನೂ ಕಡಿಮೆ ಮಾಡುತ್ತದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕು.

ಕರ್ಕಾಟಕ – ಇದು ಹೃದಯ ರೋಗಿಗಳಿಗೆ ಕಾಫಿ ಬಿಡಲು ಸರಿಯಾದ ಸಮಯ. ಯಾವುದೇ ಮುಂದುವರಿದ ಬಳಕೆ ನಿಮ್ಮ ಹೃದಯದ ಮೇಲೆ ಅನವಶ್ಯಕ ಒತ್ತಡ ತರುತ್ತದೆ.

ಸಿಂಹ – ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ಸಣ್ಣ ಉದ್ಯೋಗವನ್ನು ಮಾಡುವ ಜನರು, ಇಂದು ತಮ್ಮ ಆಪ್ತರಿಂದ ಯಾವುದೇ ಸಲಹೆಯನ್ನು ಪಡೆಯಬಹುದು.

ಕನ್ಯಾ – ನೀವು ಇಂದು ಆರಾಮವಾಗಿ ವಿಶ್ರಾಂತಿ ಪಡೆಯಬೇಕು. ನೀವು ಆನಂದಿಸುವ ಮತ್ತು ಆಸಕ್ತಿಗಳು ಮತ್ತು ವಿಷಯಗಳಲ್ಲಿ ತೊಡಗಿಕೊಳ್ಳಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ.

ತುಲಾ – ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ಹಣಕಾಸು ಸ್ಥಿತಿ ಊಹಾಪೋಹ ಅಥವಾ ಅನಿರೀಕ್ಷಿತ ಲಾಭದ ಮೂಲಕ ಸುಧಾರಿಸುತ್ತವೆ.

ವೃಶ್ಚಿಕ – ಅನಾವಶ್ಯಕ ಉದ್ವೇಗ ಮತ್ತು ಚಿಂತೆ ನಿಮ್ಮ ಜೀವನದ ರಸ ಹೀರಬಹುದು ಮತ್ತು ನಿಮ್ಮನ್ನು ಖಾಲಿಯಾಗಿಸಬಹುದು. ಇವುಗಳನ್ನು ತೊಡೆದು ಹಾಕದಿದ್ದಲ್ಲಿ ಅವು ಕೇವಲ ನಿಮ್ಮ ಸಮಸ್ಯೆಯನ್ನು ಉಲ್ಬಣಗೊಳಿಸುತ್ತವೆ.

ಧನಸ್ಸು – ಇತರರನ್ನು ಟೀಕಿಸುವ ನಿಮ್ಮ ಅಭ್ಯಾಸದಂದಾಗಿ ಇಂದು ನೀವೇ ಕೆಲವು ಟೀಕೆಗಳನ್ನು ಎದುರಿಸುವ ಸಾಧ್ಯತೆಗಳಿವೆ. ನಿಮ್ಮ ಹಾಸ್ಯಪ್ರಜ್ಞೆ ಜಾಗೃತವಾಗಿರಲಿ ಮತ್ತು ನಿಮ್ಮ ಸ್ವರಕ್ಷಣೆ ಕಡಿಮೆಯಿರಲಿ.

ಮಕರ – ನಿಮ್ಮ ಒತ್ತಡ ನಿವಾರಿಸಲು ಕುಟುಂಬದ ಸದಸ್ಯರ ಬೆಂಬಲ ಪಡೆಯಿರಿ. ಅವರ ಸಹಾಯವನ್ನು ಗೌರವದಿಂದ ಸ್ವೀಕರಿಸಿ. ನೀವು ಭಾವನೆಗಳು ಮತ್ತು ಒತ್ತಡಗಳನ್ನು ಒಳಗೆ ಅದುಮಿಡಬಾರದು.

ಕುಂಭ – ನಿಮ್ಮ ಒರಟು ವರ್ತನೆ ನಿಮ್ಮ ಸ್ನೇಹಿತರಿಗೆ ಸ್ವಲ್ಪ ಸಮಸ್ಯೆ ಉಂಟುಮಾಡಬಹುದು. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

ಮೀನ – ನೀವು ಧೀರ್ಘಕಾಲೀನ ಅನಾರೋಗ್ಯದಿಂದ ಬಳಲಬಹುದು. ದೀರ್ಘ ಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ. ಶಿಶುವಿನ ಆರೋಗ್ಯ ಸ್ವಲ್ಪ ಚಿಂತೆಗೆ ಕಾರಣವಾಗಬಹುದು.

ಬಂಜಾರ ಸಮಾಜ ಕಾಯಕದಲ್ಲಿ ವಿಶ್ವಾಸವಿಡುವ ಸಮಾಜ: ಡಾ.ಶರಣಪ್ರಕಾಶ ಪಾಟೀಲ

● ಪೂಜ್ಯರು ಪ್ರತಿವರ್ಷ ಜಾತ್ರಾ ಮಹೋತ್ಸವ ಮಾಡಿ ಭಕ್ತರಿಗೆ ಆಧ್ಯಾತ್ಮಿಕ ಕಡೆ ಎಳೆಯುವ ಪ್ರಯತ್ನ ಶ್ಲಾಘನೀಯ

• ಉದಯವಾಹಿನಿ, ಚಿಂಚೋಳಿ

ಉದಯವಾಹಿನಿ ಚಿತ್ರ

32ನೇ ಮಹಾಶಿವರಾತ್ರಿ ಜಾತ್ರಾ ಮಹೋತ್ಸವ

ಪ್ರತಿವರ್ಷವೂ ಮಹಾಶಿವರಾತ್ರಿದಂದು ಜಾತ್ರಾ ಮಹೋತ್ಸವ ಮಾಡಿ ಸಾವಿರಾರು ಭಕ್ತರಿಗೆ ಆಧ್ಯಾತ್ಮಿಕ ಕಡೆ ಎಳೆದು ದೇಶದ ಸಂಸ್ಕೃತಿ ವೈಶಿಷ್ಟ್ಯತೆಯನ್ನು ಜನರಿಗೆ ತೋರಿಸುವ ಕೆಲಸ ಪರಮಪೂಜ್ಯ ಪಂಚಾಕ್ಷರಿ ಪರ್ವತಲಿಂಗ ಪರಮೇಶ್ವರ ಮಹಾರಾಜರು ಮಾಡುತ್ತಿದ್ದಾರೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಹೇಳಿದರು.

ತಾಲ್ಲೂಕಿನ ಪಂಗರಗಾದ ಪರ್ವತಲಿಂಗ ಪರಮೇಶ್ವರ ಮಹಾರಾಜರ ತೇಪೋಭೂಮಿ ಪಾಪಾನಾಶ ಪವಿತ್ರ ಪವಾಡ ಸುಕ್ಷೇತ್ರ ಸೋನ್ಯಾಲಗಿರಿಯಲ್ಲಿ ಹಮ್ಮಿಕೊಂಡ 32ನೇ ಮಹಾಶಿವರಾತ್ರಿ ಜಾತ್ರಾ ಮಹೋತ್ಸವದ ಧರ್ಮಸಭೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು,ಮಠ ಮಾನ್ಯಗಳು ಜಾತ್ರಾ ಮಹೋತ್ಸವಗಳು ಎಲ್ಲಾ ಸಮಾಜಗಳಲ್ಲಿದ್ದು ಇದರಲ್ಲಿ ಪಾಲ್ಗೊಳ್ಳುವುದರಿಂದ ಭಕ್ತರಿಗೆ ಸಾರ್ವಜನಿಕರಿಗೆ ಆಧ್ಯಾತ್ಮ ಕಡೆ ಒಲವು ಮನಸ್ಸಿಗೆ ಶಾಂತಿ ಸಮೃದ್ಧಿ ಸಿಗುತ್ತದೆ.

ಬಂಜಾರ ಸಮಾಜ ಕಾಯಕದಲ್ಲಿ ವಿಶ್ವಾಸವಿಡುವ ಸಮಾಜವಾಗಿದ್ದು ಎಲ್ಲಾ ಸಮಾಜದ ಭಾಂದವರ ಜೋತೆ ಹೊಂದಾಣಿಕೆ ಮಾಡಿಕೊಂಡು ಪ್ರೀತಿ ವಿಶ್ವಾಸದಿಂದ ಹೋಗುತ್ತಾರೆ ಎಂದರು.

ಬೀದರ ಮಾಜಿ ಸಂಸದ ಭಗವಂತ ಖೂಬಾ ಮಾತನಾಡಿ ಬಂಜಾರ ಸಮಾಜ ಸರಳತೆದಿಂದ ನಡೆದುಕೊಂಡು ಹೋಗುವ ಸಮಾಜ,ಜಾತಿಬೇಧ ಭಾವ ಮಾಡದೆ ಸರ್ವಜನಾಂಗದವರು ನಾವೆಲ್ಲರೂ ಒಂದೆ ಎಂಬ ಭಾವನೆವುಳ್ಳವ ಸಮಾಜವಾಗಿದೆ. ದೇಶಕ್ಕೆ ಆತ್ಮವಿರುತ್ತೆ ಅರಿವು ಮೂಡಿಸಬೇಕು.

ಅರಿವು ಮೂಡಿ ಸಿದರೆ ದೇಶದ ಅಭಿವೃದ್ಧಿ ಗೊಳ್ಳುತ್ತದೆ, ಸನಾತನ ಧರ್ಮ ಸುರಕ್ಷಿತವಾಗಿ ಇರುತ್ತದೆ ಎಂದರು.

ಶ್ರೀನಿವಾಸ ಸರಡಗಿಯ ರೇವಣಸಿದ್ದೇಶ್ವರ ಶಿವಾ ಚಾರ್ಯರು ಮಾತನಾಡಿ ಬಂಜಾರ ಸಮಾಜ ಒಂದು ಕಾಲದಲ್ಲಿ ರಾಜವಂಶಸ್ಥರಾಗಿದ್ದ ಸಮಾಜವಾಗಿದ್ದು ಯಾರಿಗೂ ಹೆದರದೆ ಗರ್ವದಿಂದ ಬಂಜಾರ ಸಮಾಜದ ವೈಶಿಷ್ಟ್ಯತೆಗಳು ಎತ್ತಿಹಿಡಿಯಬೇಕು,ಒಂದು ಕಾಲದಲ್ಲಿ ದೇಶ ಆಡಳಿತ ನಡೆಸಿದ ಸಮಾಜವಾಗಿದೆ.

ಆದರೆ ಇಂದಿನ ಕಾಲದಿನಮಾನಗಳಲ್ಲಿ ಬಂಜಾರ ಸಮಾಜಕ್ಕೆ ರಾಜಕೀಯವಾಗಿ ತುಳಿಯುವ ಕೆಲಸ ನಡೆಯುತ್ತಿದೆ ನಾವೆಲ್ಲರೂ ಏಚ್ಚೇತು ಕೊಳ್ಳಬೇಕಾಗಿದೆ ಎಂದರು. ರಾಮು ರಾಠೋಡ್ ಸ್ವಾಗತಿಸಿದರು, ಗೋರಕನಾಥ ನಿರೂಪಿಸಿದರು,ಬಂಜಾರ ಸಮಾಜ ಅಧ್ಯಕ್ಷ ಪ್ರೇಮಸಿಂಗ್ ಜಾಧವ ವಂದಿಸಿದರು. ಬಿಗ್ ಬಾಸ್ ಹಣಮಂತ ಲಂಬಾಣಿ,ಸರಡಗಿ ಶಕ್ತಿ ಪೀಠದ ಪೂಜ್ಯ ಅಪ್ಪರಾವ ಮುತ್ಯಾ,ಎಂಎಲ್ಸಿ ಬಿ.ಜಿ.ಪಾಟೀಲ,ಮಾತನಾಡಿದರು.

ಪ್ರಮುಖರು:- ಎಂಎಲ್ಸಿ ಜಗದೇವ ಗುತ್ತೇದಾರ,ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್,ವಿಠ್ಠಲ ಜಾಧವ,ಬಾಬು ಹೊನ್ನಾನಾಯಕ, ವಿಜಯ ಕುಮಾರ ರಾಠೋಡ್,ಅಶೋಕ ಚವ್ಹಾಣ, ರಾಜು ಪವ್ಹಾರ, ಬನ್ಸಿಲಾಲ್ ರಾಠೋಡ್, ಮೇಘರಾಜ ರಾಠೋಡ್,ಲೋಹಿತಾ ಚವ್ಹಾಣ,ದೇವಜೀ ರಾಠೋಡ್, ಶಂಕರ ರಾಠೋಡ್,ಸೇರಿದಂತೆ ಚಂದನಕೇರಾದ ಅಭಿನವ ರಾಚೋಟೇಶ್ವರ ಶಿವಾಚಾರ್ಯರು, ಐನಾಪೂರದ ಪಂಚಾಕ್ಷರಿ ದೇವರು, ಜೇಮಸಿಂಗ್ ಮಹಾರಾಜರು,ಸಿದ್ದಲಿಂಗ ಮಹಾರಾಜರು,ಬಳಿರಾಮ ಮಹಾರಾಜರು,ಅನೇಕ ಹರಗುರು ಚರಮೂರ್ತಿ ಪೂಜ್ಯರು,ಸಾಧು ಸಂತರು ರಾಜಕೀಯ ಗಣ್ಯರು ಪಾಲ್ಗೊಂಡಿದ್ದರು.

ಲೋಕ ಕಲ್ಯಾಣಕ್ಕಾಗಿ ಪ್ರಾರ್ಥನೆ

ಅರಣ್ಯ ಪ್ರದೇಶದ ಗುಡ್ಡದಲ್ಲಿ ಪಂಚಾಕ್ಷರಿ ಪರ್ವತಲಿಂಗ ಪರಮೇಶ್ವರ ಮಹಾರಾಜರು ಕುಳಿತು ಲೋಕಕಲ್ಯಾಣಕ್ಕಾಗಿ ಮಹಾ ತಪಸ್ಸು ನಡೆಸಿ 501 ಶಿವಲಿಂಗಗಳು ಸ್ಥಾಪಿಸಿ ಆಶೀರ್ವಾದ ಮಾಡುತ್ತಿದ್ದು ಈವರ್ಷ 501ದಂಪತಿಗಳಿಂದ ಶಿವ ಪಾರ್ವತಿ ಮೂರ್ತಿಗೆ ಮಹಾ ಮಸ್ತಾಭಿಷೇಕ ಮಾಡಿಸಿದ್ದಾರೆ, ಪೂಜ್ಯರ ಆಶೀರ್ವಾದ ಸರ್ವ ಜನಾಂಗದ ಮೇಲೆ ದೇಶದ ಅಭಿವೃದ್ಧಿಗಾಗಿ ಇರಲಿದೆ.

– ರೇವುನಾಯಕ ಬೆಳಮಗಿ
ಮಾಜಿ ಸಚಿವರು ಕಲಬುರ್ಗಿ

ಹಾಲಿ ರಾಜ್ಯ ಸಚಿವ, ಮಾಜಿ ಕೇಂದ್ರ ಸಚಿವ ಕಾರ್ಯಕ್ರಮದಲ್ಲಿ ಮಾತಿನಲ್ಲಿ ತಲ್ಲೀನ

ಪಂಗರಗಾದ ಸೋನ್ಯಾಲಗಿರಿಯಲ್ಲಿ ಪಂಚಾಕ್ಷರಿ ಪರ್ವತಲಿಂಗ ಪರಮೇಶ್ವರ ಹಮ್ಮಿಕೊಂಡಿದ್ದ 32ನೇ ಜಾತ್ರಾಮಹೋತ್ಸವದ ಕಾರ್ಯಕ್ರಮದ ಮಧ್ಯದಲ್ಲಿಯೇ ಹಾಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಮತ್ತು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಇರ್ವರು ಮಾಜಿ ಹಾಲಿ ಸಚಿವರು ನಡೆಯುತ್ತಿದ್ದ ಕಾರ್ಯಕ್ರಮದಲ್ಲಿ ಪಕ್ಷದ ಬಿಜೆಪಿ ಕಾಂಗ್ರೇಸ್ ಬೇರೆ ಬೇರೆ ಪಕ್ಷಗಳ ವಿರೋಧಿಗಳಾಗಿದ್ದರು ಮಾತಿನಲ್ಲಿ ಕನಿಷ್ಠ 10ನಿಮಿಷ ತಲ್ಲಿನರಾಗಿದ್ದು ಅವರ ಜೋತೆ ಕೆಪಿಸಿಸಿ ಉಪಾಧ್ಯಕ್ಷ ಸುಭಾಷ್ ರಾಠೋಡ್ ಸಹ ಗುಸುಗುಸು ಮಾತನಾಡುತ್ತಿರುವುದು ಸಾರ್ವಜನಿಕರಲ್ಲಿ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ.

ಬಿಗ್ ಬಾಸ್ ವಿನ್ನರ್ ಹಣಮಂತ ಲಂಬಾಣಿಯವರಿಗೆ ಸನ್ಮಾನ

ಉದಯವಾಹಿನಿ ಚಿತ್ರ

ಬಿಗ್ ಬಾಸ್ ವಿನ್ನರ್ ಹಣಮಂತ ಲಂಬಾಣಿ ಕಾರ್ಯಕ್ರಮದಲ್ಲಿ ಆಗಮಿಸಿ ನನಗೆ ಓಟ್ ಹಾಕಿ ಗೆಲ್ಲಿಸಿದ್ದಕ್ಕಾಗಿ ಧನ್ಯವಾದಗಳು ಸಲ್ಲಿಸಿ ಕಾರ್ಯಕ್ರಮದಲ್ಲಿ ಅದ್ಭುತವಾಗಿ ಗಾಯಕ ಹಾಡುಗಳು ಮಾಡಿದರು,ಯುವಕರಿಗೆ ಸಾರ್ವಜನಿಕರಿಗೆ ರಂಜಿಸಿದರು, ಯುವಕರು ಕುಣಿದು ಕುಪ್ಪಳಿಸಿದರು, ನಂತರ ಪಂಚಾಕ್ಷರಿ ಪರಮೇಶ್ವರ ಮಹಾರಾಜರು ಬಿಗ್ ಬಾಸ್ ವಿನ್ನರ್ ಹಣಮಂತ ಲಂಬಾಣಿಯವರಿಗೆ ಬೆಳ್ಳಿಕಿರೀಟ ತೊಡಿಸಿ ಸನ್ಮಾನಿಸಿ ಗೌರವಿಸಲಾಯಿತು.

ಬೆಂಡೆಬೆಂಬಳಿ ಮರೇಮ್ಮ ದೇವಿ ಅದ್ಧೂರಿ ಪಲ್ಲಕ್ಕಿ ಮೆರವಣಿಗೆ

• ಉದಯವಾಹಿನಿ, ವಡಗೇರಾ

ಉದಯವಾಹಿನಿ ಚಿತ್ರ

ಮಹಾಶಿವರಾತ್ರಿ ನಿಮಿತ್ಯ ಪ್ರತಿ ವರ್ಷದಂತೆ ಈ ವರ್ಷವೂ ತಾಲ್ಲೂಕಿನ ಬೆಂಡೆಬೆಂಬಳಿ ಗ್ರಾಮದ ಮರೇಮ್ಮ ದೇವಿಯ ಪಲ್ಲಕ್ಕಿ ಮೆರವಣಿಗೆಯು ಶಿವರಾತ್ರಿ ಅಮಾವಾಸ್ಯೆ ದಿನದಂದು ಬೆಳಿಗ್ಗೆ ತಾಲ್ಲೂಕಿನ ಕೃಷ್ಣವೇಣಿ ಭೀಮಾ ಸಂಗಮಕ್ಕೆ ತೆರಳಿತು ಅಲ್ಲಿ ಗಂಗಾ ಸ್ನಾನ ವಿವಿಧ ಪೂಜಾ ಕಾರ್ಯಕ್ರಮಗಳು ದೇವಸ್ಥಾನದ ಅರ್ಚಕರಾದ ಜುಬಲಪ್ಪ ಪೂಜಾರಿ ನೇತೃತ್ವದಲ್ಲಿ ಜರುಗಿದವು ನಂತರ ಅಲ್ಲಿಂದ ಪಲ್ಲಕ್ಕಿ ಮೆರವಣಿಗೆಯು ಗುಂಡ್ಲೂರು ಅಗ್ನಿಹಾಳ ಶಿವಪುರ ಗೋನಾಲ ಗ್ರಾಮಗಳ ಮೂಲಕ ಬೆಂಡೆಬೆಂಬಳಿ ಗ್ರಾಮ ತಲುಪಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಪಲ್ಲಕ್ಕಿ ಮೆರವಣಿಗೆಯು ಡೊಳ್ಳು ಬಾಜ ಭಜಂತ್ರಿ ಕಳಸದ ಮೆರವಣಿಗೆಯೊಂದಿಗೆ ಸಾಯಂಕಾಲ ದೇವಸ್ಥಾನ ತಲುಪಿ ಮೂಲ ದೇವಸ್ಥಾನದಲ್ಲಿ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ನಂತರ ರಾತ್ರಿಯಿಡಿ ಭಜನಾ ಕಾರ್ಯಕ್ರಮ ನಡೆಯಿತು.

ಈ ಕಾರ್ಯಕ್ರಮದಲ್ಲಿ ನಿಂಗಪ್ಪ ದಂಡಿನ್, ಜುಬಲಪ್ಪ ಕಟ್ಟಿಮನಿ, ಮರಲಿಂಗ ತೋಟ, ದೇವಪ್ಪ ತೇಕರಾಳ, ಗುರುಬಸಪ್ಪ ಕೊಂಬಿನ, ರವಿ ನಂದೆಳ್ಳಿ, ಹಣಮಂತ ಹಳ್ಳಿ,ಯಲ್ಲಪ್ಪ ಕೊದ್ದಡ್ಡಿ, ನಾಗಪ್ಪ ಕಕ್ಕೇರಾ, ತಾಯಪ್ಪ, ಸಾಬು ಕೋನಳ್ಳಿ, ಸೈದಪ್ಪ ಕಲ್ಮನಿ ಹಾಗೂ ಗ್ರಾಮದ ಭಕ್ತರು ಮಹಿಳೆಯರು ಭಾಗವಹಿಸಿದ್ದರು.

ಕುಡಿಯುವ ನೀರಿನ ಸಮಸ್ಯೆ : ಮುನ್ನೆಚ್ಚರಿಕೆ ವಹಿಸಲು ಜಿಲ್ಲಾಧಿಕಾರಿ ಸೂಚನೆ

• ಉದಯವಾಹಿನಿ, ಮಂಗಳೂರು

ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ

ಬೇಸಿಗೆ ಪ್ರಾರಂಭವಾಗಿರುವುದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ನಿರ್ವಹಣೆ ಹಾಗೂ ಕಾಡ್ಗಿಚ್ಚು ನಿರ್ವಹಣೆ ಕುರಿತು ಮುಂಜಾಗ್ರತ ಕ್ರಮ ಕೈಗೊಳ್ಳಲು ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆಯಿತು.

ಜಿಲ್ಲಾಧಿಕಾರಿ ಮುಲ್ಲೈ ಮುಹಿಲನ್ ಎಂ ಪಿ ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ಮಹಾನಗರ ಪಾಲಿಕೆಗೆ ನೀರು ಸರಬರಾಜು ಮಾಡುವ ಬಂಟ್ವಾಳದ ತುಂಬೆ ಡ್ಯಾಮ್ ನಲ್ಲಿ 5.70 ಮೀಟರ್ ನೀರು ಇದ್ದು, ಎ ಎಂ ಆರ್ ಅಣೆಕಟ್ಟಿನಲ್ಲಿ ನೀರಿನ ಮಟ್ಟ 18.9 ಮೀಟರ್ ಇದೆ ಎಂದು ಮಹಾನಗರಪಾಲಿಕೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಬಂದಲ್ಲಿ ಅಥವಾ ಸಾರ್ವಜನಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಎಲ್ಲಾ ಅಧಿಕಾರಿಗಳು ತಮ್ಮ ಹಂತದಲ್ಲಿ ವ್ಯವಸ್ಥಿತವಾಗಿ ಕ್ರಮವಹಿಸಲು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಿ ಸಮಸ್ಯೆಗಳನ್ನು ಪರಿಹರಿಸಲು ಜಿಲ್ಲಾಧಿಕಾರಿ ಸೂಚಿಸಿದರು.

ಕುಡಿಯುವ ನೀರಿಗೆ ಯಾವುದೇ ಸಮಸ್ಯೆ ಆಗದಂತೆ ಎಲ್ಲಾ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಅವರು ಸೂಚಿಸಿದರು. ಅಗತ್ಯ ಬಿದ್ದರೆ ಟ್ಯಾಂಕರ್ ಮೂಲಕವೂ ನೀರು ಸರಬರಾಜು ಮಾಡಲು ಅವರು ತಿಳಿಸಿದರು. ಅರಣ್ಯ ಪ್ರದೇಶದಲ್ಲಿ ಬೆಂಕಿ ಅವಘಡ ತಪ್ಪಿಸಲು ರಸ್ತೆ ಬದಿಗಳ, ಕಾಡಿನ ಒಳಗಡೆ ಇರುವ ವಿದ್ಯುತ್ ಲೈನ್‌ಗಳು ಗಾಳಿಗೆ ತಾಗಿಕೊಂಡು ಬೆಂಕಿ ಕಿಡಿ ಹಾರದಂತೆ, ಟ್ರಾನ್ಸ್ ಫಾರ್ಮರ್‌ಗಳಲ್ಲಿ ಉಂಟಾಗುವ ಬೆಂಕಿಯ ಕಿಡಿಗಳು ಒಣಗಿದ ಹುಲ್ಲು ಮತ್ತು ಗಿಡ ಗಂಟೆಗಳನ್ನು ಸ್ವಚ್ಛಗೊಳಿಸಲು ಜಿಲ್ಲಾಧಿಕಾರಿ ತಿಳಿಸಿದರು.

> ನಗರ ಪ್ರದೇಶಗಳಲ್ಲಿ ಆಯಾ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕುಡಿಯುವ ನೀರಿನ ಸರಬರಾಜು ನಿರ್ವಹಣೆ ಮಾಡಲು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಿವಿಗಳ ಆರೈಕೆ ಬಗ್ಗೆ ಗಮನವಿರಲಿ: ಆರೋಗ್ಯ ಶಿಕ್ಷಣಾಧಿಕಾರಿ ಎನ್‌ಎಸ್ ಮಂಜುನಾಥ್

• ಉದಯವಾಹಿನಿ, ಚಿತ್ರದುರ್ಗ

ಉದಯವಾಹಿನಿ ಚಿತ್ರ

ತಾಲ್ಲೂಕು ಆರೋಗ್ಯ ಮತ್ತು ಸರ್ಕಾರಿ ಐ ಟಿ ಐ ತರಬೇತಿ ಕೇಂದ್ರ ಚಿತ್ರದುರ್ಗ ಇವರ ಸಹಯೋಗದೊಂದಿಗೆ ಶುಕ್ರವಾರ ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಕಿವಿಗಳ ಆರೈಕೆ ಬಗ್ಗೆ ಮಾಹಿತಿ ಶಿಕ್ಷಣ ಸಂವಹನ ಕಾರ್ಯಕ್ರಮ ಜರುಗಿತು.

ತಾಲ್ಲೂಕ ಆರೋಗ್ಯ ಶಿಕ್ಷಣಾಧಿಕಾರಿ ಎನ್‌ಎಸ್ ಮಂಜುನಾಥ್ ಮಾಹಿತಿ ಶಿಕ್ಷಣ ನೀಡುತ್ತಾ ಭಾರತದಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿನ ಪ್ರಕಾರ, ಸುಮಾರು 63 ಮಿಲಿಯನ್ ಜನರು ಗಮನಾರ್ಹ ಶ್ರವಣೇಂದ್ರಿಯ ದುರ್ಬಲತೆಯಿಂದ ಬಳಲುತ್ತಿದ್ದಾರೆ. ಇದರಂತೆ ಭಾರತೀಯ ಜನಸಂಖ್ಯೆ ಯಲ್ಲಿ ಅಂದಾಜು ಶೇಕಡ 6.3% ರಷ್ಟು ಪ್ರಮಾಣದಲ್ಲಿದೆ.ಎನ್.ಎಸ್.ಎಸ್.ಓ. ಸಮೀಕ್ಷೆ 2001ರ ಪ್ರಕಾರ, ಪ್ರಸ್ತುತ ತೀವ್ರವಾದ ಕಿವುಡುತನದ ನಷ್ಟದಿಂದ ಬಳಲುತ್ತಿರುವ ಸಂಖ್ಯೆ ಒಂದು ಲಕ್ಷಜನ ಸಂಖ್ಯೆಗೆ 291 ವ್ಯಕ್ತಿಗಳು. ಇದರಲ್ಲಿ 0 ರಿಂದ 14 ವರ್ಷಗಳ ನಡುವಿನ ವಯಸ್ಸಿನ ಮಕ್ಕಳಲ್ಲಿ ಹೆಚ್ಚು ಶೇಕಡಾವಾರು ಕಂಡು ಬಂದಿದೆ, ಕರ್ನಾಟಕ ರಾಜ್ಯದಲ್ಲಿ 2018ರ ಅಂದಾಜು ಜನಗಣತಿಗೆ 0-6 ವರ್ಷದ ಮಕ್ಕಳಲ್ಲಿ 20,839 ಮಕ್ಕಳು ಶ್ರವಣದೋಷದಿಂದ ಬಳಲುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಇವುಗಳಲ್ಲಿ ಹೆಚ್ಚಿನ ಕಿವುಡುತನವು ಹುಟ್ಟಿನಿಂದ ಬಂದಂತಹುಗಳಾಗಿ ರುತ್ತವೆ. ಶ್ರವಣದೋಷ ಮತ್ತು ಕಿವುಡುತನದ ಪ್ರಮುಖ ಕಾರಣಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸಿ, ಅಸ್ತಿತ್ವದಲ್ಲಿರುವ ಕಿವುಡುತನದ ಪ್ರಮಾಣದ ಹೊರೆ ಯನ್ನು ಶೇ. 25ರಷ್ಟು ಇಳಿಸುವುದು.

ಗಾಯ ಅಥವಾ ರೋಗದಿಂದ

ಅಧ್ಯಕ್ಷರ ಆಯ್ಕೆ ಘೋಷಣೆಗೆ ದಿನಾಂಕ ಬಹುತೇಕ ಫಿಕ್ಸ್

ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಅಸ್ಸಾಂ, ಗುಜರಾತ್ ರಾಜ್ಯಗಳ ಸಾಂಸ್ಥಿಕ ಚುನಾವಣೆ

ಹೊಸದಿಲ್ಲಿ : ಕರ್ನಾಟಕ ಬಿಜೆಪಿ ಘಟಕದ ಅಧ್ಯಕ್ಷ ಹುದ್ದೆಯಂತೆ, ರಾಷ್ಟ್ರಾಧ್ಯಕ್ಷ ಸ್ಥಾನಕ್ಕೂ ಇಂದು, ನಾಳೆ ಎಂದು ದಿನ ಮುಂದೂಡಿಕೆಯಾಗುತ್ತಲೇ ಬರುತ್ತಿದೆ. ಆದರೆ, ಸದ್ಯದ ಮಾಹಿತಿಯ ಪ್ರಕಾರ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಈ ಪ್ರಕ್ರಿಯೆಯನ್ನು ಇನ್ನಷ್ಟು ವಿಳಂಬ ಮಾಡದಿರಲು ನಿರ್ಧರಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ನಂತರ ಯಾರು ಪಕ್ಷದ ನೇತೃತ್ವ ವಹಿಸಿಕೊಳ್ಳಲಿದ್ದಾರೆ ಎನ್ನುವ ಪ್ರಶ್ನೆಗೆ, ಬಹುತೇಕ ಮಾರ್ಚ್ 15 ಮಾರ್ಚ್ ವೇಳೆಗೆ ಉತ್ತರ ಸಿಗುವ ಸಾಧ್ಯತೆ ಇದೆ ಎಂದು ಪಕ್ಷದ ಉನ್ನತ ಮೂಲಗಳ ಮಾಹಿತಿಗಳನ್ನು ಆಧರಿಸಿ ಹಲವು ಮಾಧ್ಯಮಗಳು ವರದಿ ಮಾಡಿವೆ. ಬಿಜೆಪಿಯಲ್ಲಿ ಇರುವ ಕಾನೂನಿನ ಪ್ರಕಾರ, ದೇಶದ ಅರ್ಧದಷ್ಟು ರಾಜ್ಯಗಳಲ್ಲಿ ಪಕ್ಷದ ಸಾಂಸ್ಥಿಕ ಚುನಾವಣೆಗಳು ಮುಗಿದ ನಂತರವೇ ಹೊಸ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಆರಂಭವಾಗಲಿದೆ. 36 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 12 ರಲ್ಲಿ ಈಗಾಗಲೇ ಚುನಾವಣೆಗಳು ಮುಗಿದಿವೆ. ಇನ್ನು 6 ರಾಜ್ಯಗಳಲ್ಲಿ ಚುನಾವಣೆ ನಡೆಯಬೇಕಿದೆ. ಪಕ್ಷದ ಮೂಲಗಳ ಪ್ರಕಾರ, ಮುಂದಿನ ಎರಡು ವಾರಗಳಲ್ಲಿ ಆರು ರಾಜ್ಯಗಳ ಸಾಂಸ್ಥಿಕ ಚುನಾವಣೆಯನ್ನು ಮುಗಿಸಲು, ಬಿಜೆಪಿಯ ಚುನಾವಣಾ ಸಮಿತಿ ನಿರ್ಧರಿಸಿದೆ. ಈ ಪ್ರಕ್ರಿಯೆ ಮುಗಿದ ಬೆನ್ನಲ್ಲೇ, ಅಧ್ಯಕ್ಷರ ಘೋಷಣೆಯಾಗಲಿದೆ ಎಂದು ಹೇಳಲಾಗುತ್ತಿದೆ. ಈಗಿನ ಯೋಜನೆಯ ಪ್ರಕಾರ, ಸಾಂಸ್ಥಿಕ ಚುನಾವಣೆಯ ಜೊತೆಗೆ, ಅಧ್ಯಕ್ಷರ ಆಯ್ಕೆಯ ಕೆಲಸವನ್ನು ಮುಗಿಸಲು ಬಿಜೆಪಿಯ ಹಿರಿಯ ನಾಯಕರು ಮತ್ತು ಸಂಘ ಪರಿವಾರ ನಿರ್ಧರಿಸಿದೆ. ಬಿಜೆಪಿ ಈಗ ತಮಿಳುನಾಡು, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಅಸ್ಸಾಂ ಮತ್ತು ಗುಜರಾತ್ ರಾಜ್ಯಗಳ ಸಾಂಸ್ಥಿಕ ಚುನಾವಣೆಗಳ ಮೇಲೆ ಗಮನ ಹರಿಸಿದೆ ಎಂದು ಹೇಳಲಾಗುತ್ತಿದೆ. ಗಮನಿಸಬೇಕಾದ ವಿಚಾರ ಏನಂದರೆ, ಕರ್ನಾಟಕದಲ್ಲಿ ಇಷ್ಟೊಂದು ಸಮಸ್ಯೆ ಎದುರಾಗುತ್ತಿದ್ದರೂ, ಸದ್ಯಕ್ಕೆ ಇಲ್ಲಿನ ರಾಜ್ಯಾಧ್ಯಕ್ಷರ ಪ್ರಕ್ರಿಯೆ ಕೈಗೆತ್ತಿಕೊಳ್ಳುವ ಸಾಧ್ಯತೆ ಕಮ್ಮಿ. ಈ ಮೇಲಿನ ಐದು ರಾಜ್ಯಗಳಲ್ಲಿ ಮುಂದಿನ ವರ್ಷ ವಿಧಾನಸಭಾ ಚುನಾವಣೆಗಳು ನಡೆಯಲಿವೆ. ಹೆಚ್ಚಿನ ರಾಜ್ಯಗಳ ಬಿಜೆಪಿ ಮುಖ್ಯಸ್ಥರಿಗೆ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ನಿಮ್ಮ ಶಿಫಾರಸಿನ ಹೆಸರನ್ನು ಕೊಡಿ ಎಂದು ಬಿಜೆಪಿಯ ರಾಷ್ಟ್ರೀಯ ಘಟಕದಿಂದ ಮಾಹಿತಿ ಹೋಗಿದೆ ಎನ್ನುವ ಮಾಹಿತಿಯಿದೆ. ಹಾಲೀ ರಾಷ್ಟ್ರೀಯ ಅಧ್ಯಕ್ಷರಾಗಿರುವ ಜೆ.ಪಿ.ನಡ್ಡಾ ಅವರು ಕಳೆದ ಜೂನ್ ತಿಂಗಳಿನಿಂದ ಎರಡೆರಡು ಹುದ್ದೆಗಳನ್ನು ನಿಭಾಯಿಸುತ್ತಿದ್ದಾರೆ. ಅವರು ಕೇಂದ್ರದ ಆರೋಗ್ಯ ಇಲಾಖೆಯ ಸಚಿವರೂ ಆಗಿದ್ದಾರೆ. ಬಿಜೆಪಿಯ ಆಂತರಿಕ ಕಾನೂನಿನ ಪ್ರಕಾರ, ಒಬ್ಬರಿಗೆ ಒಂದೇ ಹುದ್ದೆ ಎನ್ನುವ ಪದ್ಧತಿಯಿದೆ. ಹಾಗಾಗಿ, ಮುಂದಿನ 15 ದಿನಗಳಲ್ಲಿ ಹೊಸ ಅಧ್ಯಕ್ಷರ ನೇಮಕ ಬಹುತೇಕ ಪಕ್ಕಾ ಎಂದು ಹೇಳಲಾಗುತ್ತಿದೆ. ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಯಾರು ಆಯ್ಕೆಯಾಗಬಹುದು ಎಂಬುದು ಈಗ ಭಾರೀ ಚರ್ಚೆಯ ವಿಷಯವಾಗಿದೆ. ಪಕ್ಷದ ಈ ಅತ್ಯುನ್ನತ ಹುದ್ದೆಗೆ ನಾಲ್ವರ ಹೆಸರು ಮಂಚೂಣಿಯಲ್ಲಿ ಕೇಳಿ ಬರುತ್ತಿದೆ. ಆದರೆ, ಬಿಜೆಪಿ ಯಾವಾಗಲೂ ಅಚ್ಚರಿಯ ಆಯ್ಕೆಗಳನ್ನು ಮಾಡುವಲ್ಲಿ ಎತ್ತಿದಕೈ.

ನಾಲ್ವರಲ್ಲಿ ಯಾರಿಗೆ ಕಿರೀಟ?

ಅಧ್ಯಕ್ಷ ಹುದ್ದೆಗೆ ಕೇಳಿ ಬರುತ್ತಿರುವ ನಾಲ್ಕು ಹೆಸರುಗಳು

- **ಶಿವರಾಜ್ ಸಿಂಗ್ ಚೌಹಾನ್** – ಹಾಲೀ ಕೇಂದ್ರ ಕೃಷಿ ಸಚಿವರಾಗಿರುವ ಶಿವರಾಜ್ ಸಿಂಗ್ ಚೌಹಾನ್, ಮಧ್ಯ ಪ್ರದೇಶದ ಮಾಜಿ ಮುಖ್ಯಮಂತ್ರಿ ಕೂಡಾ. ಪಕ್ಷದೊಳಗೆ ಮಾಮಾಜೀ ಎಂದು ಕರೆಯಲ್ಪಡುವ ಇವರಿಗೆ ಆರ್ ಎಸ್ ಎಸ್ ಬ್ಯಾಕ್ ಅಪ್ ಇದೆ ಎಂದು ಹೇಳಲಾಗುತ್ತಿದೆ
- **ಮನೋಹರ್ ಲಾಲ್ ಖಟ್ಟರ್** – ಹಾಲೀ ಕೇಂದ್ರ ಇಂಧನ ಖಾತೆಯ ಸಚಿವ ಮತ್ತು ಹರಿಯಾಣದ ಮಾಜಿ ಸಿಎಂಆಗಿರುವ ಖಟ್ಟರ್ ಅವರ ಹೆಸರೂ ಕೇಳಿ ಬರುತ್ತಿದೆ.
- **ಅನುರಾಗ್ ಸಿಂಗ್ ಠಾಕೂರ್** – ಹಿಮಾಚಲ ಪ್ರದೇಶದ ಮೂಲ ಅನುರಾಗ್, ಉತ್ತಮ ವಾಗ್ಮಿ ಕೂಡಾ. ಹಲವು ಬಾರಿ ಲೋಕಸಭೆಯಲ್ಲಿ ರಾಹುಲ್ ಗಾಂಧಿ ಆದಿಯಾಗಿ, ವಿಪಕ್ಷಗಳನ್ನು ಕಟ್ಟಿ ಹಾಕುವಲ್ಲಿ ಇವರು ಯಶಸ್ವಿಯಾಗಿದ್ದರು.
- **ಧರ್ಮೇಂದ್ರ ಪ್ರಧಾನ್** – ಕೇಂದ್ರ ಶಿಕ್ಷಣ ಇಲಾಖೆಯ ಸಚಿವರಾದ ಇವರು ಹೆಸರು ಕೂಡಾ ಕೇಳಿ ಬರುತ್ತಿದೆ. ಎಬಿವಿಪಿ ಕಾರ್ಯಕರ್ತರಾಗಿನಿಂದ ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ಇವರು ಕೇಂದ್ರದಲ್ಲಿ ಹಲವು ಹುದ್ದೆಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ.

ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪಾತ್ರ ಬಹುಮುಖ್ಯ ಎಂದು ಹೇಳಲಾಗುತ್ತಿದೆ. ಜೆ.ಪಿ. ನಡ್ಡಾ ಅವರು 2019 ರಲ್ಲಿ ಪಕ್ಷದ ಕಾರ್ಯಕಾರಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ಜನವರಿ 2020 ರಲ್ಲಿ ಅವರನ್ನು ಸರ್ವಾನುಮತದಿಂದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿತ್ತು. ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಅವರ ಅಧಿಕಾರಾವಧಿಯನ್ನು ಜೂನ್ 2024 ರವರೆಗೆ ವಿಸ್ತರಿಸಲಾಗಿತ್ತು. ಇದಾದ ನಂತರವೂ ಅಧ್ಯಕ್ಷರ ಆಯ್ಕೆ ನೆನೆಗುದಿಗೆ ಬಿದ್ದಿತ್ತು. ಈಗ, 15ದಿನದೊಳಗೆ ಕೊನೆಗೂ ಮಹೂರ್ತ ಫಿಕ್ಸ್ ಆಗಿದೆ ಎಂದು ಹೇಳಲಾಗುತ್ತಿದೆ.

ನೇಪಾಳದಲ್ಲಿ 5.5 ತೀವ್ರತೆಯ ಭೂಕಂಪ, ಭಾರತ, ಚೀನಾ, ಟಿಬೆಟ್‌ನಲ್ಲೂ ಕಂಪನ

ಕಠ್ಮಂಡು: ನೇಪಾಳದ ಕಟ್ಮಂಡುವಿನಲ್ಲಿ ಪ್ರಬಲ ಭೂಕಂಪ ಸಂಭವಿಸಿದ್ದು, ರಿಕ್ಟರ್ ಮಾಪಕದಲ್ಲಿ 5.5 ತೀವ್ರತೆ ದಾಖಲಾಗಿದೆ. ನೇಪಾಳದ ಪೂರ್ವ ಮತ್ತು ಮಧ್ಯ ಭಾಗಗಳಲ್ಲಿರುವ ಜನರಿಗೆ ಭೂಕಂಪದ ಅನುಭವ ಆಗಿದೆ. ಅಲ್ಲದೆ ಭಾರತ ಚೀನಾ, ಟಿಬೆಟ್‌ನ ಕೆಲವು ಭಾಗಗಳಲ್ಲೂ ಭೂಕಂಪದ ಅನುಭವ ಆಗಿದೆ. ಹಿಮಾಲಯದ ಮಧ್ಯಭಾಗದ ಸಿಂಧುಪಾಲ್‌ಚೌಕ್ ಜಿಲ್ಲೆಯಲ್ಲಿ ಕೇಂದ್ರಬಿಂದು ಪತ್ತೆಯಾಗಿದೆ. ರಾಷ್ಟ್ರೀಯ ಭೂಕಂಪ ನಿರ್ವಹಣಾ ಮತ್ತು ಸಂಶೋಧನಾ ಕೇಂದ್ರ ತನ್ನ ವೆಬ್‌ಸೈಟ್‌ನಲ್ಲಿ ಭೂಕಂಪದ ಕೇಂದ್ರವು ಸಿಂಧುಪಾಲ್‌ಚೌಕ್ ಜಿಲ್ಲೆಯ ಭೈರವಕುಂಡದಲ್ಲಿ ಸ್ಥಳೀಯ ಕಾಲಮಾನ ಬೆಳಗಿನ ಜಾವ 2:51ಕ್ಕೆ ಆಗಿದೆ ಎಂದು ಗುರುತಿಸಿದೆ. ನೇಪಾಳದ ಹಲವು ಪ್ರದೇಶಗಳಲ್ಲಿ ವಿಶೇಷವಾಗಿ ಪೂರ್ವ ಮತ್ತು ಮಧ್ಯ ಪ್ರದೇಶಗಳಲ್ಲಿ, ಭೂಮಿ ಕಂಪಿಸಿದ ಅನುಭವ ಉಂಟಾಗಿದೆ ಎಂದು ವರದಿ ಮಾಡಿದೆ.

ಭಾರತ, ಟಿಬೆಟ್, ಚೀನಾದ ಗಡಿ ಪ್ರದೇಶಗಳಲ್ಲೂ ಕಂಪ ನದ ಅನುಭವವಾಗಿದೆ ಎಂದು ವರದಿಗಳು ತಿಳಿಸಿವೆ. ಭೂಕಂಪದ ಪರಿಣಾಮ ಯಾವುದೇ ಸಾವು ನೋವುಗಳು, ಗಂಭೀರ ಹಾನಿ ಗಳು ಸಂಭವಿಸಿಲ್ಲ. ಅಧಿಕಾರಿಗಳು ಪರಿಸ್ಥಿತಿಯನ್ನು ಗಮನಿಸುತ್ತಿದ್ದಾರೆ.

ನೇಪಾಳವು ಹೆಚ್ಚು ಭೂಕಂಪ ಪೀಡಿತ ಪ್ರದೇಶ ವಾಗಿರುವುದರಿಂದ, ಜನರು ಎಚ್ಚರಿಕೆ ಯಿಂದಿರಲು, ನಂತರದ ಭೂಕಂಪಗಳ ಬಗ್ಗೆ ಜಾಗರೂಕರಾಗಿರಲು ಅಧಿಕಾರಿಗಳು ಸೂಚಿಸಿದ್ದಾರೆ. ಭೂಕಂಪದ ನಂತರದ ಸಣ್ಣ ಕಂಪನಗಳಿಗೆ ಸಿದ್ಧರಾಗಿರಿ ಎಂದೂ ಜನರಿಗೆ ಎಚ್ಚರಿಕೆ ನೀಡಿದ್ದಾರೆ. ನಿನ್ನೆಯಷ್ಟೇ ಅಸ್ಸಾಂನ ಮೊರಿಗಾಂವ್ ಜಿಲ್ಲೆಯಲ್ಲಿ ಗುರುವಾರ ಮುಂಜಾನೆ 5.0 ತೀವ್ರತೆಯ ಭೂಕಂಪ ಸಂಭವಿಸಿತ್ತು. ರಾಜಧಾನಿ ಗುವಾಹಟಿ ಮತ್ತು ರಾಜ್ಯದ ಇತರ ಭಾಗಗಳಲ್ಲೂ ಜನ ಕಂಪನದ ಅನುಭವ ಪಡೆದುಕೊಂಡಿದ್ದರು.

ಭೂಕಂಪವು ಭೂಮಿಯ 16 ಕಿಲೋಮೀಟರ್ ಆಳದಲ್ಲಿ ಆಗಿದ್ದು, ತಡರಾತ್ರಿ ಸುಮಾರು 2:25 ಗಂಟೆಗೆ ಈ ಕಂಪನ ಸಂಭವಿಸಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದರು.

ಶಕ್ತಿ ಮಸೂದೆ ಜಾರಿಗೆ ಕಾಂಗ್ರೇಸ್, ಎನ್‌ಸಿಪಿ ಆಗ್ರಹ

ಪುಣೆ: ಮಹಿಳೆ, ಮಕ್ಕಳ ಮೇಲಿನ ದೌರ್ಜನ್ಯ ಕೃತ್ಯಗಳಲ್ಲಿ ಮರಣದಂಡನೆ ವಿಧಿಸಲು ಅವಕಾಶವುಳ್ಳ ಶಕ್ತಿ ಮಸೂದೆಯನ್ನು ಮಹಾರಾಷ್ಟ್ರ ಸರ್ಕಾರ ಜಾರಿಗೊಳಿಸಲಿ ಎಂದು ವಿರೋಧ ಪಕ್ಷಗಳಾದ ಕಾಂಗ್ರೇಸ್, ಎನ್‌ಸಿಪಿ ಆಗ್ರಹಪಡಿಸಿವೆ. ಇಲ್ಲಿನ ಸ್ವಾರ್ಗೇಟ್ ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಬಸ್‌ನಲ್ಲಿ ಮಹಿಳೆಯ ಮೇಲೆ ನಡೆದ ಅತ್ಯಾಚಾರ ಘಟನೆ ಬಗ್ಗೆ ವಿರೋಧ ಪಕ್ಷಗಳು ಕಳವಳ ವ್ಯಕ್ತಪಡಿಸಿವೆ. ಅತ್ಯಾಚಾರದಂತ ದೌರ್ಜನ್ಯ ಎಸಗುವವರಿಗೆ ಕಠಿಣ ಶಿಕ್ಷೆ ವಿಧಿಸಲು ಅನುವಾಗುವಂತೆ ಶಕ್ತಿ ಮಸೂದೆ ಜಾರಿಗೊಳಿಸುವಂತೆ ಒತ್ತಾಯಿಸಿವೆ.

ಸುದ್ದಿಗಾರರೊಂದಿಗೆ ಮಾತನಾಡಿದ ಎನ್‌ಸಿಪಿ ನಾಯಕ ಅನಿಲ್ ದೇಶ್‌ಮುಖ್ ಎಂವಿಎ ಸರ್ಕಾರವಿದ್ದಾಗ ನಾಲ್ಕು ವರ್ಷಗಳ ಹಿಂದೆ ಶಾಸನಸಭೆಯು ಮಸೂದೆಯನ್ನು ಅಂಗೀಕರಿಸಿದೆ. ಕೇಂದ್ರ ಸರ್ಕಾರದ ಅನುಮೋದನೆ ಬಾಕಿ ಇದೆ ಎಂದು ತಿಳಿಸಿದರು. ಶಕ್ತಿ ಮಸೂದೆ ಜಾರಿಗೊಳಿಸದಿರುವುದು ಮಹಾಯುತಿ ಸರ್ಕಾರದ ವೈಫಲ್ಯ ಎಂದು ಕಾಂಗ್ರೇಸ್ ಶಾಸಕಾಂಗ ಪಕ್ಷದ ನಾಯಕ ವಿಜಯ್ ವಾಡೆಟ್ಟಿವಾರ್ ಟೀಕಿಸಿದ್ದಾರೆ. ಮಸೂದೆಗೆ ರಾಷ್ಟ್ರಪತಿಗಳ ಅಂಕಿತ ದೊರೆತಿಲ್ಲ. ಮಾ.3ರಿಂದ ಆರಂಭವಾಗುವ ಅಧಿವೇಶನದಲ್ಲೇ ಮರು ಪ್ರಸ್ತಾಪಿಸಿ ಮಸೂದೆ ಜಾರಿಗೆ ಕ್ರಮವಹಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಜಾಮಾ ಮಸೀದಿ ಸ್ವಚ್ಛಗೊಳಿಸಲು ಭಾರತೀಯ ಪುರಾತತ್ವ ಇಲಾಖೆಗೆ ಹೈಕೋರ್ಟ್ ಸೂಚನೆ

ಪ್ರಯಾಗರಾಜ್: ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯ ಚಂದೌಸಿಯಲ್ಲಿನ ಶಾಹಿ ಜಾಮಾ ಮಸೀದಿ ಆವರಣವನ್ನು ಸ್ವಚ್ಛಗೊಳಿಸುವಂತೆ ಭಾರತೀಯ ಪುರಾತತ್ವ ಇಲಾಖೆಗೆ (ಎಎಸ್‌ಐ) ಅಲಹಾಬಾದ್ ಹೈಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ. ಆದರೆ, ಮಸೀದಿಗೆ ಬಣ್ಣ ಬಳಿಯುವುದಕ್ಕೆ ಅವಕಾಶ ನೀಡಿಲ್ಲ. ರಂಜಾನ್‌ಗೆ ಮುಂಚಿತವಾಗಿ ಮಸೀದಿಗೆ ಬಣ್ಣ ಬಳಿಯಲು, ಸ್ವಚ್ಛಗೊಳಿಸಲು ಅನುಮತಿ ಕೋರಿ ಜಾಮಾ ಮಸೀದಿಯ ಆಡಳಿತ ಸಮಿತಿಯು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರೋಹಿತ್ ರಂಜನ್ ಅಗರ್ವಾಲ್ ಈ ಆದೇಶವನ್ನು ಹೊರಡಿಸಿದ್ದಾರೆ.

ಜಾಮಾ ಮಸೀದಿಯ ಸ್ಥಳವನ್ನು ಪರಿಶೀಲಿಸಲು ಮತ್ತು ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಈ ಸಂಬಂಧ ವರದಿ ಸಲ್ಲಿಸಲು ಮೂವರು ಅಧಿಕಾರಿಗಳನ್ನು ಒಳಗೊಂಡ ತಂಡವನ್ನು ನೇಮಿಸುವಂತೆ ಎಎಸ್‌ಐಗೆ ಗುರುವಾರ ನ್ಯಾಯಾಲಯ ಸೂಚಿಸಿತ್ತು. ಎಎಸ್‌ಐ ನೀಡಿರುವ ವರದಿ ಪ್ರಕಾರ, ಮಸೀದಿಯ ಒಳಭಾಗದಲ್ಲಿ ಸೆರಾಮಿಕ್ ಪೇಂಟ್ ಮಾಡಲಾಗಿದ್ದು, ಸದ್ಯಕ್ಕೆ ಬಣ್ಣ ಬಳಿಯುವ ಅಗತ್ಯವಿಲ್ಲ ಎಂದು ಹೇಳಿತ್ತು. ಶುಕ್ರವಾರ ನಡೆದ ವಿಚಾರಣೆ ವೇಳೆ ಮಸೀದಿ ಸಮಿತಿ ಪರ ವಾದ ಮಂಡಿಸಿದ ಹಿರಿಯ ವಕೀಲ ಎಸ್‌ಎಫ್‌ಎ ನಖ್ವಿ, ಬಣ್ಣ ಬಳಿಯುವುದು, ಲೈಟಿಂಗ್ ಕೆಲಸ ಮಾತ್ರ ಆಗಬೇಕು ಎಂದು ಮನವಿ ಮಾಡಿದರು.

ಹೀಗಾಗಿ ನ್ಯಾಯಾಲಯವು, ಮಸೀದಿಯಲ್ಲಿನ ಧೂಳನ್ನು ಸ್ವಚ್ಛಗೊಳಿಸುವಂತೆ ಮತ್ತು ಆವರಣದಲ್ಲಿನ ಹುಲ್ಲನ್ನು ತೆರವುಗೊಳಿಸುವಂತೆ ಎಎಸ್‌ಐಗೆ ಸೂಚಿಸಿತು. ಮಸೀದಿಯನ್ನು ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದು ನಖ್ವಿ ನ್ಯಾಯಾಲಯಕ್ಕೆ ಭರವಸೆ ನೀಡಿದ್ದು, ಕಾನೂನು ಸುವ್ಯವಸ್ಥೆ ಕಾಪಾಡಲಾಗುವುದು ಎಂದು ರಾಜ್ಯದ ಅಡ್ವೋಕೇಟ್ ಜನರಲ್ ಹೇಳಿದರು.

ಮದರಸಾದಲ್ಲಿ ಪ್ರಾರ್ಥನೆ ವೇಳೆ ಬಾಂಬ್ ಸ್ಫೋಟ

ಇಸ್ಲಾಮಾಬಾದ್: ಪಾಕಿಸ್ತಾನದ ಖೈಬರ್ ಪಖ್ತುನ್ಖ್ವಾ ಪ್ರದೇಶದ ಮದರಸಾವೊಂದರಲ್ಲಿ ನಡೆದ ಭೀಕರ ಬಾಂಬ್ ದಾಳಿಯಲ್ಲಿ, ಕನಿಷ್ಠ ಐವರು ದಾರುಣವಾಗಿ ಸಾವನ್ನಪ್ಪಿದ್ದಾರೆ. ಇಲ್ಲಿನ ಅಕ್ಕೋರಾ ಖಟ್ಟಕ್ ಜಿಲ್ಲೆಯ ದಾರುಲ್ ಉಲೂಮ್ ಹಕ್ಕಾನಿಯಾ ಮದರಸಾದಲ್ಲಿ ಭೀಕರ ಬಾಂಬ್ ಸ್ಫೋಟ ಸಂಭವಿಸಿದೆ ಎಂದು ಮೂಲಗಳು ಖಚಿತಪಡಿಸಿವೆ.

ಶುಕ್ರವಾರದ ಪ್ರಾರ್ಥನೆಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಜನ ಸೇರಿದ್ದ ಸಮಯದಲ್ಲೇ ಬಾಂಬ್ ಸ್ಫೋಟಗೊಂಡಿದೆ. ದುರ್ಘಟನೆಯಲ್ಲಿ ಕನಿಷ್ಠ ಐವರು ಸಾವನ್ನಪ್ಪಿದ್ದು, ಇನ್ನೂ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಮೌಲಾನಾ ಹಮೀದುಲ್ ಹಕ್ ಹಕ್ಕಾನಿ ಈ ದಾಳಿಯ ಗುರಿಯಾಗಿದ್ದರು ಎಂಬುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಘಟನೆಯನ್ನು ಖಂಡಿಸಿದ್ದು, ಗಾಯಾಳುಗಳಿಗೆ ಉತ್ತಮ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಜಿಲ್ಲಾ ಪೊಲೀಸ್ ಮುಖ್ಯಸ್ಥ ಅಬ್ದುಲ್ ರಶೀದ್, ಪ್ರಕರಣದ ತನಿಖೆ ನಡೆಯುತ್ತಿದ್ದು, ನೌಶೇರಾದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಇದು ಆತ್ಮಾಹುತಿ ಬಾಂಬ್ ಸ್ಫೋಟ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ದಾಳಿಯ ಹೊಣೆಯನ್ನು ಇದುವರೆಗೂ ಯಾವ ಸಂಘಟನೆಯೂ ಹೊತ್ತುಕೊಂಡಿಲ್ಲ.. ಎಂದು ಇನ್ಸ್‌ಪೆಕ್ಟರ್ ಜನರಲ್ ಜುಲ್ಫಿಕಾರ್ ಹಮೀದ್ ಸಮಾಟಿವಿಗೆ ತಿಳಿಸಿದ್ದಾರೆ. ಮೌಲಾನಾ ಹಕ್ಕಾನಿ ಅವರು ಎಗಖ-ಖ ನ ಮುಖ್ಯಸ್ಥರಾಗಿದ್ದು, ಅವರು ದಿವಂಗತ ಮೌಲಾನಾ ಸಮಿಯುಲ್ ಹಕ್ ಅವರ ಹಿರಿಯ ಮಗ. ಪಾಕಿಸ್ತಾನದ ರಾಜಕೀಯದಲ್ಲಿ ಜನಪ್ರಿಯರಾಗಿದ್ದ ಅವರು ಖ್ಯಾತ ಇಸ್ಲಾಮಿಕ್ ವಿದ್ವಾಂಸರೂ ಹೌದು. ನವೆಂಬರ್ 2002 ರಿಂದ 2007ರವರೆಗೆ ರಾಷ್ಟ್ರೀಯ ಅಸೆಂಬ್ಲಿಯ ಸದಸ್ಯರಾಗಿದ್ದರು.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಈ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಇಂತಹ ಹೇಡಿತನದ, ಘೋರ ಉಗ್ರ ಕೃತ್ಯಗಳು ಭಯೋತ್ಪಾದನೆಯ ವಿರುದ್ಧದ ನಮ್ಮ ಸಂಕಲ್ಪವನ್ನು ಕುಗ್ಗಿಸಲು ಸಾಧ್ಯವಿಲ್ಲ ಎಂದು ಶೆಹಬಾಜ್ ಷರೀಫ್ ಹೇಳಿದ್ದಾರೆ. ದೇಶದಿಂದ ಎಲ್ಲಾ ರೀತಿಯ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ನಾವು ದೃಢಸಂಕಲ್ಪ ಹೊಂದಿದ್ದೇವೆ ಎಂದು ಶೆಹಬಾಜ್ ಷರೀಫ್ ಹೇಳಿದ್ದಾರೆ.

ಭದ್ರತೆ ವಿಚಾರದಲ್ಲಿ ಅದೆಷ್ಟು ಗಂಭೀರ

ಪಾಕಿಸ್ತಾನದಲ್ಲಿ ಸದ್ಯ ಚಾಂಪಿಯನ್ಸ್ ಟ್ರೋಫಿ 2025ರ ಪಂದ್ಯಾವಳಿಗಳು ನಡೆಯುತ್ತಿದ್ದು, ಈ ಸರಣಿಯಲ್ಲಿ ಭಾಗವಹಿಸುವ ಎಲ್ಲಾ ತಂಡಗಳಿಗೆ ಸೂಕ್ತ ಭದ್ರತೆ ಒದಗಿಸಲಾಗುವುದು ಎಂದು ಪಾಕಿಸ್ತಾನ ಭರವಸೆ ನೀಡಿದೆ. ಆದರೆ ಇದೀಗ ಸಂಭವಿಸಿರುವ ಬಾಂಬ್ ಸ್ಫೋಟ ಘಟನೆಯು, ಪಾಕಿಸ್ತಾನ ತನ್ನ ಆಂತರಿಕ ಭದ್ರತೆ ವಿಚಾರದಲ್ಲಿ ಅದೆಷ್ಟು ಗಂಭೀರವಾಗಿದೆ ಎಂಬುದನ್ನು ತೋರಿಸುತ್ತದೆ.

ಶಸ್ತ್ರಾಸ್ತ್ರಗಳನ್ನು ಒಪ್ಪ

ಸುಲಭ ಕ್ಯಾಚ್ ಕೈಚೆಲ್ಲಿದರೂ ಔಟಾದ ಆರ್‌ಸಿಬಿ ಬ್ಯಾಟರ್

ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಆತಿಥೇಯ ಆರ್‌ಸಿಬಿ, ಗುಜರಾತ್ ಜೈಂಟ್ಸ್ ನಡುವಿನ ಹಣಾಹಣಿಯಲ್ಲಿ ಮತ್ತೊಮ್ಮೆ ಆರ್‌ಸಿಬಿ ಬ್ಯಾಟಿಂಗ್ ವಿಫಲವಾಗಿದೆ. ಈ ಪಂದ್ಯದಲ್ಲಿ ಮೊದಲು

ಬ್ಯಾಟಿಂಗ್ ಮಾಡಿದ ಆರ್‌ಸಿಬಿ ತಂಡದ ಅಗ್ರ ಕ್ರಮಾಂಕ ಮತ್ತೊಮ್ಮೆ ಕೋಚನೀಯವಾಗಿ ವಿಫಲವಾಯಿತು. ಆದಾಗ್ಯೂ, ಕನಿಕಾ ಅಹುಜಾ ಮತ್ತು ರಾಘವಿ ಬಿಷ್ಟ್ ಒಟ್ಟಾಗಿ ಇನ್ನಿಂಗ್ಸ್ ನಿಭಾಯಿಸಿದರು. ಇಬ್ಬರೂ ತಂಡವನ್ನು ಉತ್ತಮ ಸ್ಥಿತಿಗೆ ಕೊಂಡೊಯ್ಯುತ್ತಿದ್ದರು. ಆದರೆ 12 ನೇ ಓವರ್‌ನಲ್ಲಿ ಪರಿಸ್ಥಿತಿ ಬದಲಾಗಿ ರಾಘವಿ ಬಿಷ್ಟ್ ಔಟಾದರು. ಆದರೆ ಅವರು ಔಟಾದ ರೀತಿ ಅತ್ಯಂತ ವಿಚಿತ್ರವಾಗಿದೆ. ವಿಚಿತ್ರ ರೀತಿಯಲ್ಲಿ ಔಟಾದ ಆರ್‌ಸಿಬಿ ಬ್ಯಾಟರ್ ವಾಸ್ತವವಾಗಿ ಆರ್‌ಸಿಬಿ ಇನ್ನಿಂಗ್ಸ್‌ನ 12ನೇ ಓವರ್‌ನಲ್ಲಿ ಮೇಘನಾ ಸಿಂಗ್ ಎಸೆದ ಚೆಂಡನ್ನು ರಾಘವಿ ಬಿಷ್ಟ್ ಕವರ್ಸ್‌ನಲ್ಲಿ ನಿಂತಿದ್ದ ನಾಯಕಿ ಆಶ್ಲೀ ಗಾರ್ಡ್ನರ್ ಕಡೆಗೆ ಆಡಿದರು. ಗಾರ್ಡ್ನರ್ ಸುಲಭವಾಗಿ ಕ್ಯಾಚ್ ತೆಗೆದುಕೊಳ್ಳಬಹುದಿತ್ತು. ಆದರೆ ಗಾರ್ಡ್ನರ್ ಅವರಿಗೆ ಈ ಸುಲಭ ಕ್ಯಾಚ್ ಅನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಇದನ್ನು ನೋಡಿ ಎಲ್ಲರೂ ಆಘಾತಕ್ಕೊಳಗಾದರು. ಆದರೆ ಇತ್ತ ಕ್ಯಾಚ್ ಕೈಚೆಲ್ಲಿದನ್ನು ನೋಡಿದ ರಾಘವಿ ರನ್‌ಗಾಗಿ ಓಡುವ ತಪ್ಪನ್ನು ಮಾಡಿದರು. ಇದನ್ನು ಗಮನಿಸಿದ ಮಿಡ್-ಆಫ್ ಫೀಲ್ಡರ್ ಭಾರತಿ ಫುಲ್ಮಾಲಿ ಬೇಗನೆ ಬಂದು ಚೆಂಡನ್ನು ಹಿಡಿದು ನೇರವಾಗಿ ಸ್ಟಂಪ್‌ಗಳತ್ತ ಎಸೆದರು.

ಮೊದಲ ಬಾರಿಗೆ ಅರ್ಹತೆ ಪಡೆದು ಇತಿಹಾಸ ಸೃಷ್ಟಿಸಿದ ಓಮನ್

ಪಾಕಿಸ್ತಾನದಲ್ಲಿ ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿಯ ನಡುವೆ ಭಾರತದ ಆತಿಥ್ಯದಲ್ಲಿ ಕೆಲವೇ ತಿಂಗಳಲ್ಲಿ ನಡೆಯಲ್ಲಿರುವ ಏಷ್ಯಾಕಪ್ ಬಗ್ಗೆ ಬಿಗ್ ಅಪ್‌ಡೇಟ್ ಹೊರಬಿದ್ದಿದೆ. ಸದ್ಯದ ಮಾಹಿತಿ ಪ್ರಕಾರ ಏಷ್ಯಾಕಪ್ ಸೆಪ್ಟಂಬರ್ ತಿಂಗಳಲ್ಲಿ ನಡೆಯುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಈ ಪಂದ್ಯಾವಳಿಯಲ್ಲಿ ಏಷ್ಯಾದ 8 ತಂಡಗಳು ಭಾಗವಹಿಸಲಿದ್ದು, ಇದೇ ಮೊದಲ ಬಾರಿಗೆ ಈ ಟೂರ್ನಿಗೆ ಅರ್ಹತೆ ಪಡೆಯುವ ಮೂಲಕ ಕ್ರಿಕೆಟ್ ಶಿಶು ಓಮನ್ ಇತಿಹಾಸ ಸೃಷ್ಟಿಸಿದೆ.

ಭಾರತಕ್ಕೆ ಎದುರಾಳಿ

ವಾಸ್ತವವಾಗಿ, 54 ಲಕ್ಷ ಜನಸಂಖ್ಯೆಯನ್ನು ಹೊಂದಿರುವ ಈ ದೇಶವು ಮೊದಲ ಬಾರಿಗೆ ಏಷ್ಯಾಕಪ್‌ಗೆ ಅರ್ಹತೆ ಪಡೆದಿದೆ.

ಪುರುಷರ ಪ್ರೀಮಿಯರ್ ಕಪ್ 2024 ರಲ್ಲಿ, ಓಮನ್ ತಂಡವು ಯುಎಇ, ಕುವೈತ್, ಬಹ್ರೇನ್ ಮತ್ತು ಕಾಂಬೋಡಿಯಾದಂತಹ ತಂಡಗಳೊಂದಿಗೆ ಗ್ರೂಪ್ ಬಿಯಲ್ಲಿ ಸ್ಥಾನ ಪಡೆದಿತ್ತು. ಗುಂಪು ಹಂತದಲ್ಲಿ ಅಗ್ರ 2ನೇ ಸ್ಥಾನ ಪಡೆಯುವ ಮೂಲಕ ಸೆಮಿಫೈನಲ್‌ಗೆ ಅರ್ಹತೆ ಪಡೆದದಿದ್ದ ಓಮನ್, ಏಕಪಕ್ಷೀಯ ಪಂದ್ಯದಲ್ಲಿ ಹಾಂಗ್ ಕಾಂಗ್ ತಂಡವನ್ನು ಸೋಲಿಸಿ ಫೈನಲ್‌ಗೆ ಪ್ರವೇಶಿಸಿತ್ತು. ಆದರೆ ಪ್ರಶಸ್ತಿ ಪಂದ್ಯದಲ್ಲಿ ಓಮನ್, ಯುಎಇ ವಿರುದ್ಧ 55 ರನ್‌ಗಳಿಂದ ಸೋಲನ್ನು ಎದುರಿಸಬೇಕಾಯಿತು. ಇದರ ಹೊರತಾಗಿಯೂ, ಯುಎಇ ಮತ್ತು ಹಾಂಗ್ ಕಾಂಗ್ ಜೊತೆಗೆ ಟೂರ್ನಮೆಂಟ್‌ನಲ್ಲಿ ಅಗ್ರ-3 ನೇ ಸ್ಥಾನ ಪಡೆದ ಓಮನ್, 2025 ರ ಏಷ್ಯಾ ಕಪ್‌ಗೆ ಅರ್ಹತೆ ಪಡೆದುಕೊಂಡಿತು.

ಅಜೇಯ ತಂಡವಾಗಿ ಏಷ್ಯಾಕಪ್ ಫೈನಲ್‌ಗೇರಿದ ಟೀಂ

ಭಾರತದ ಗುಂಪಿನಲ್ಲಿ ಓಮನ್

2025 ರ ಏಷ್ಯಾ ಕಪ್‌ನಲ್ಲಿ 8 ತಂಡಗಳು ಭಾಗವಹಿಸಲಿದ್ದು, ಇದನ್ನು ತಲಾ 4ರಂತೆ ಎರಡು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಆ ಪ್ರಕಾರ ಓಮನ್ ಮತ್ತು ಭಾರತ ನಡುವೆ ಪಂದ್ಯ ನಡೆಯುವ ಸಾಧ್ಯತೆ ಇದೆ. ಕ್ರಿಕ್ ಬಜ್ ವರದಿಯ ಪ್ರಕಾರ, ಈ ಬಾರಿ ಭಾರತ ಮತ್ತು ಪಾಕಿಸ್ತಾನ ಕೂಡ ಒಂದೇ ಗುಂಪಿನಲ್ಲಿ ಸ್ಥಾನ ಪಡೆಯಲ್ಲಿವೆ ಎಂದು ಹೇಳಲಾಗುತ್ತಿದೆ. ಗುಂಪು ಹಂತದ ನಂತರ ಸೂಪರ್-4 ಹಂತದ ಪಂದ್ಯಗಳನ್ನು ಆಡಲಾಗುತ್ತದೆ. ಈ ಸುತ್ತಿಗೆ ಅರ್ಹತೆ ಪಡೆದರೆ ಎರಡೂ ತಂಡಗಳು ಮತ್ತೊಮ್ಮೆ ಮುಖಾಮುಖಿಯಾಗುವ ಸಾಧ್ಯತೆ ಇದೆ. ಈ ಸುತ್ತಿನಲ್ಲಿ ಮೊದಲ ಮತ್ತು ಎರಡನೇ ಸ್ಥಾನಗಳನ್ನು ಗಳಿಸುವ ತಂಡಗಳು ಫೈನಲ್‌ಗೆ ಸ್ಥಾನ ಪಡೆಯುತ್ತವೆ. ಭಾರತ ಮತ್ತು ಪಾಕಿಸ್ತಾನ ಸೂಪರ್-4 ರಲ್ಲಿ ಅಗ್ರ-2 ಸ್ಥಾನ ಪಡೆಯಲು ಸಾಧ್ಯವಾದರೆ, ಫೈನಲ್‌ನಲ್ಲಿಯೂ ಈ ಎರಡು ತಂಡಗಳು ಮುಖಾಮುಖಿಯಾಗಬಹುದು.

ಇಂಡಿಯಾ: ಪಂದ್ಯಾವಳಿಯನ್ನು ಎಲ್ಲಿ ಆಯೋಜಿಸಲಾಗುವುದು ಏಷ್ಯಾಕಪ್ ಆತಿಥ್ಯ ಭಾರತದ ಬಳಿ ಇದ್ದರೂ, ಈ ಪಂದ್ಯಾವಳಿಯನ್ನು ತಟಸ್ಥ ಸ್ಥಳದಲ್ಲಿ ನಡೆಸಲಾಗುತ್ತಿದೆ.

ಭಾರತ ಮತ್ತು ಪಾಕಿಸ್ತಾನ ನಡುವೆ ನಡೆಯುತ್ತಿರುವ ವಿವಾದದಿಂದಾಗಿ, ಪಂದ್ಯವನ್ನು ತಟಸ್ಥ ಸ್ಥಳದಲ್ಲಿ ನಡೆಸಲು ಒಪ್ಪಿಗೆ ನೀಡಲಾಗಿದೆ, ಆದರೆ ಆತಿಥೇಯ ಹಕ್ಕುಗಳು ಬಿಸಿಸಿಐ ಬಳಿಯೇ ಇರುತ್ತವೆ. ಅದೇ ರೀತಿ, ಮುಂದಿನ ಬಾರಿ ಭಾರತ ಅಥವಾ ಪಾಕಿಸ್ತಾನ ಪಂದ್ಯಾವಳಿಯನ್ನು ಆಯೋಜಿಸುವ ಸರದಿ ಬಂದಾಗ, ಈ ಪಂದ್ಯಾವಳಿಯನ್ನು ಕೂಡ ತಟಸ್ಥ ಸ್ಥಳದಲ್ಲಿ ಆಯೋಜಿಸಲಾಗುತ್ತದೆ

ಅತಿ ಹೆಚ್ಚು ವಿಕೆಟ್ ಉರುಳಿಸಿ ಇತಿಹಾಸ ಸೃಷ್ಟಿಸಿದ 22 ವರ್ಷದ ಯುವ ಸ್ಪಿನ್ನರ್

ವಿದರ್ಭ ಕ್ರಿಕೆಟ್ ಮೈದಾನದಲ್ಲಿ ನಡೆಯುತ್ತಿರುವ ವಿದರ್ಭ ಹಾಗೂ ಕೇರಳ ನಡುವಿನ 2024-25ರ ರಣಜಿ ಟ್ರೋಫಿ ಫೈನಲ್ ಪಂದ್ಯ ಕುತೂಹಲ ಘಟ್ಟದತ್ತ ಸಾಗುತ್ತಿದೆ. ಈ ಪಂದ್ಯದಲ್ಲಿ ಉಭಯ ತಂಡಗಳು ತಲಾ ಒಂದೊಂದು ಇನ್ನಿಂಗ್ಸ್ ಆಡಿದ್ದು, ವಿದರ್ಭ ತಂಡ ಮೊದಲ ಇನ್ನಿಂಗ್ಸ್‌ನಲ್ಲಿ 37 ರನ್‌ಗಳ ಮುನ್ನಡೆ ಪಡೆದುಕೊಂಡಿದೆ. ತಂಡಕ್ಕೆ ಈ ಮುನ್ನಡೆ ತಂದುಕೊಡುವಲ್ಲಿ 22 ವರ್ಷದ ಸ್ಪಿನ್ ಬೌಲರ್ ಹರ್ಷ್ ದುಬೆ ಪ್ರಮುಖ ಪಾತ್ರವಹಿಸಿದ್ದಾರೆ. ಹರ್ಷ್ ದುಬೆ ರಣಜಿ ಟ್ರೋಫಿಯ ಒಂದು ಸೀಸನ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು ಮುರಿದಿದ್ದಾರೆ. ಕೇರಳದ ಇನ್ನಿಂಗ್ಸ್‌ನಲ್ಲಿ ದುಬೆ 9 ನೇ ವಿಕೆಟ್ ಪಡೆಯುವುದರೊಂದಿಗೆ ಈ ಸೀಸನ್‌ನಲ್ಲಿ 69 ವಿಕೆಟ್ ಪೂರೈಸಿದರು. ಇದು ರಣಜಿ ಟ್ರೋಫಿಯ ಒಂದು ಸೀಸನ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯಾಗಿದೆ. ಈ ಮೂಲಕ ಹರ್ಷ್ ದುಬೆ ಒಂದು ಆವೃತ್ತಿಯಲ್ಲಿ ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು ಸರಿಗಟ್ಟಿದರು. ಈ ಮೊದಲು ಈ ದಾಖಲೆ ಬಿಹಾರದ ಅಶುತೋಷ್ ಅಮನ್ ಅವರ ಹೆಸರಿನಲ್ಲಿತ್ತು. ಅವರು 2018-19ರ ರಣಜಿಯಲ್ಲಿ ಗರಿಷ್ಠ 68 ವಿಕೆಟ್‌ಗಳನ್ನು ಪಡೆಯುವ ಮೂಲಕ ಇತಿಹಾಸ ಸೃಷ್ಟಿಸಿದ್ದರು. ಇದೀಗ ಆ ದಾಖಲೆಯನ್ನು ಹರ್ಷ್ ದುಬೆ ಮುರಿದಿದ್ದಾರೆ.

3 ವರ್ಷಗಳ ವೃತ್ತಿಜೀವನದಲ್ಲಿ ದಾಖಲೆ ಸೃಷ್ಟಿ ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದ ಹರ್ಷ್ ದುಬೆ ಅವರ ಈ ಸಾಧನೆ ವಿಶೇಷವಾಗಿದೆ ಏಕೆಂದರೆ ಅವರಿಗೆ ಇನ್ನೂ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಹೆಚ್ಚಿನ ಅನುಭವವಿಲ್ಲ. ಡಿಸೆಂಬರ್ 2022 ರಲ್ಲಿ ರಣಜಿ ಟ್ರೋಫಿಗೆ ಪಾದಾರ್ಪಣೆ ಮಾಡಿದ ದುಬೆಗೆ ಇದು ಮೂರನೇ ರಣಜಿ ಸೀಸನ್. ಈ ಫೈನಲ್‌ಗೂ ಮೊದಲು ದುಬೆ ಕೇವಲ 17 ಪ್ರಥಮ ದರ್ಜೆ ಪಂದ್ಯಗಳನ್ನು ಆಡಿದ್ದರು.

ಇದರಲ್ಲಿ ಅವರು 94 ವಿಕೆಟ್‌ಗಳನ್ನು ಪಡೆದಿದ್ದಾರೆ. ತಮ್ಮ ಅಲ್ಪಾವಧಿಯ ವೃತ್ತಿ ಜೀವನದಲ್ಲಿ, ಹರ್ಷ್ 8 ಬಾರಿ ಇನ್ನಿಂಗ್ಸ್‌ನಲ್ಲಿ 5 ವಿಕೆಟ್‌ಗಳನ್ನು ಪಡೆದ ಸಾಧನೆಯನ್ನು ಮಾಡಿದ್ದಾರೆ. ಈ ಸೀಸನ್‌ನಲ್ಲಿ ಇಲ್ಲಿಯವರೆಗೆ, ಹರ್ಷ್ 19 ಇನ್ನಿಂಗ್ಸ್‌ಗಳಲ್ಲಿ 16.98 ರ ಅತ್ಯುತ್ತಮ ಸರಾಸರಿಯಲ್ಲಿ 69 ವಿಕೆಟ್‌ಗಳನ್ನು ಪಡೆದಿದ್ದಾರೆ.

ಫೈನಲ್‌ನ ಮೂರನೇ ದಿನದಂದು ದಾಖಲೆ

ಫೆಬ್ರವರಿ 28, ಶುಕ್ರವಾರ ನಾಗ್ಪುರದಲ್ಲಿ ನಡೆದ ಫೈನಲ್ ಪಂದ್ಯದ ಮೂರನೇ ದಿನದಂದು, ಕೇರಳ 342 ರನ್‌ಗಳಿಗೆ ಮೊದಲ ಇನ್ನಿಂಗ್ಸ್ ಮುಗಿಸಿತು. ಕೇರಳ ತಂಡವನ್ನು ಈ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಹರ್ಷ್ ದುಬೆ ಪ್ರಮುಖ ಪಾತ್ರ ವಹಿಸಿದರು. ಈ ಪಂದ್ಯಾವಳಿಯಲ್ಲಿ ಈಗಾಗಲೇ ಸತತ ವಿಕೆಟ್‌ಗಳನ್ನು ಪಡೆದಿದ್ದ ಹರ್ಷ್ ದುಬೆ, ತಂಡವನ್ನು ಫೈನಲ್‌ಗೆ ಕೊಂಡೊಯ್ಯುವಲ್ಲಿ ಪ್ರಮುಖರಾಗಿದ್ದರು. ಇದೀಗ ಕೇರಳ ವಿರುದ್ಧದ ಫೈನಲ್ ಪಂದ್ಯದ ಮೊದಲ ಇನ್ನಿಂಗ್ಸ್‌ನಲ್ಲಿ ಹರ್ಷ್ ದುಬೆ 3 ವಿಕೆಟ್‌ಗಳನ್ನು ಕಬಳಿಸಿದರು.

3 ವರ್ಷಗಳ ವೃತ್ತಿಜೀವನದಲ್ಲಿ ದಾಖಲೆ

ಭಾರತ-ಪಾಕ್ ಮಧ್ಯೆ ಕ್ರಿಕೆಟ್ ಸರಣಿ ಸಿಕ್ಕಿತು ದೊಡ್ಡ ಸೂಚನೆ

ಭಾರತ ಹಾಗೂ ಪಾಕಿಸ್ತಾನ ತಂಡ ಚಾಂಪಿಯನ್ಸ್ ಟ್ರೋಫಿಯಲ್ಲಿ ಮುಖಾಮುಖಿ ಆಗಿತ್ತು. ಈ ರೀತಿ ಐಸಿಸಿ ಸರಣಿಗಳಲ್ಲಿ ಮಾತ್ರ ಭಾರತ ಹಾಗೂ ಪಾಕಿಸ್ತಾನ ಮುಖಾಮುಖಿ ಆಗುತ್ತವೆಯೇ ಹೊರತು ಎರಡೂ ದೇಶಗಳ ಮಧ್ಯೆ ಸರಣಿಗಳು ನಡೆಯದೇ ದಶಕ ಕಳೆದಿದೆ.

2012-13ರಲ್ಲಿ ಭಾರತ ಹಾಗೂ ಪಾಕಿಸ್ತಾನ ಸರಣಿ ಪಂದ್ಯಗಳನ್ನು ಆಡಿತ್ತು. ಇದಾದ ಬಳಿಕ ಈ ರೀತಿಯ ಯಾವುದೇ ಸರಣ ಎರಡೂ ದೇಶಗಳ ಮಧ್ಯೆ ನಡೆದಿಲ್ಲ. ಇದು ಮತ್ತೆ ನಡೆಯಬೇಕು ಎಂದರೆ ಒಂದೇ ಷರತ್ತು ಇದೆ ಎಂದು ಕಾಮೆಂಟೇಟರ್ ಸುನೀಲ್ ಗವಾಸ್ಕರ್ ಅವರು ಹೇಳಿದ್ದಾರೆ. ಇತ್ತೀಚೆಗೆ ಚಾನೆಲ್ ಒಂದರಲ್ಲಿ ಮಾತನಾಡಿರೋ ಸುನೀಲ್ ಗವಾಸ್ಕರ್ ಭಾರತ ಮತ್ತು ಪಾಕಿಸ್ತಾನ ದ್ವಿಪಕ್ಷೀಯ ಸರಣಿಯನ್ನು ಆಡುವ ಏಕೈಕ ಮಾರ್ಗವೆಂದರೆ ಎರಡೂ ರಾಷ್ಟ್ರಗಳ ಸರ್ಕಾರಗಳು ಗಡಿಯಲ್ಲಿ ಶಾಂತಿ ನೆಲೆಸುವುದನ್ನು ಖಚಿತ ಪಡಿಸಿಕೊಳ್ಳಬೇಕು. ಅಂದಾಗ ಮಾತ್ರ ದ್ವಿಪಕ್ಷೀಯ ಸರಣಿ ಸಾಧ್ಯ' ಎಂದಿದ್ದಾರೆ. 'ದೇಶದ ಗಡಿಯಲ್ಲಿ ಶಾಂತಿ ಇಲ್ಲದೆ ಭಾರತ ಹಾಗೂ ಪಾಕ್ ಸರಣಿ ಪಂದ್ಯವನ್ನಾಡಲು ಹೇಗೆ ಸಾಧ್ಯ ಒಂದೊಮ್ಮೆ ಗಡಿಯಲ್ಲಿ ಶಾಂತಿ ನೆಲೆಸಿದರೆ ಭಾರತ , ಪಾಕಿಸ್ತಾನ ಸರ್ಕಾರ ಈ ಬಗ್ಗೆ ಚರ್ಚಿಸಬಹುದು.



ಕಾಪು ಶ್ರೀಹೊಸ ಮಾರಿಗುಡಿ ಕಂಡು ನಿಬ್ಬೆರಗಾದ ಶಿಲ್ಪಾ ಶೆಟ್ಟಿ

ಉಡುಪಿ: ಬಾಲಿವುಡ್ ಚೆಲುವೆ ಸ್ಟಾರ್ ನಟಿ ಶಿಲ್ಪಾ ಶೆಟ್ಟಿ ಕರಾವಳಿ ಪ್ರವಾಸದಲ್ಲಿದ್ದಾರೆ. ಉಡುಪಿ ಜಿಲ್ಲೆಯ ಕಾಪು ಹೊಸ ಮಾರಿ ಗುಡಿಗೆ ಭೇಟಿ ಕೊಟ್ಟು ಮಾರಿಯಮ್ಮನ ದರ್ಶನ ಮಾಡಿದ್ದಾರೆ. ಹೊಸ ಮಾರಿಗುಡಿ ಕಂಡು ನಿಬ್ಬೆರಗಾಗಿದ್ದಾರೆ.

ಕಾಪುವಿನಲ್ಲಿ ಹತ್ತು ದಿನಗಳ ಕಾಲ ಅದ್ಧೂರಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ನಡೆಯುತ್ತಿತ್ತು. ಹೊಸ ಮಾರಿಗುಡಿ ನೂತನ ದೇವಸ್ಥಾನದ ವೀಕ್ಷಣೆ ಮಾಡಿದ ಶಿಲ್ಪಾ ಶೆಟ್ಟಿ ಖುಷಿಗೊಂಡರು. ಮಾರಿಗುಡಿಯ ನಿರ್ಮಾಣ, ಮರದ ಕೆತ್ತನೆ, ಚಿನ್ನದ ಗದ್ದಿಗೆ ಕಂಡು ನಟಿ ಸಂತಸ ವ್ಯಕ್ತಪಡಿಸಿದರು.

ದೇಗುಲದ ಆಡಳಿತ ಮಂಡಳಿ ಮತ್ತು ವ್ಯವಸ್ಥಾಪನಾ ಮಂಡಳಿಯಿಂದ ಶಿಲ್ಪಾ ಶೆಟ್ಟಿಗೆ ಗೌರವ ಸಲ್ಲಿಸಲಾಯಿತು. ತಂಗಿ ಶಮಿತಾ ಶೆಟ್ಟಿ, ತಾಯಿ ಅವರ ಕುಟುಂಬದ ಜೊತೆ ಬಾಲಾಲಯದಲ್ಲಿರುವ ಮಾರಿಯಮ್ಮನ ದರ್ಶನ ಮಾಡಿ ಪ್ರಸಾದ ಸ್ವೀಕಾರ ಮಾಡಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಶಿಲ್ಪಾ ಶೆಟ್ಟಿ, ದೇವಸ್ಥಾನದ ರಚನೆ, ಮರದ ಕೆತ್ತನೆ ನೋಡ ಬಹಳ ಖುಷಿಯಾಯ್ತು. ಸಂಪೂರ್ಣ ಜೀರ್ಣೋದ್ಧಾರ ಕಾರ್ಯಕ್ರಮ, ಅಭಿವೃದ್ಧಿ ಆದ್ಮೇಲೆ ಮತ್ತೊಂದು ಬಾರಿ ಭೇಟಿ ಕೊಡುವುದಾಗಿ ಹೇಳಿದ್ದಾರೆ.

ಮಾಸ್ ಅವತಾರ ತಾಳಿದ ಸಲ್ಮಾನ್ ಖಾನ್

ಬಾಲಿವುಡ್ ನಟ ಸಲ್ಮಾನ್ ಖಾನ್ ಮತ್ತು ರಶ್ಮಿಕಾ ಮಂದಣ್ಣ ನಟನೆಯ 'ಸಿಕಂದರ್' ಚಿತ್ರದ ಟೀಸರ್ ರಿಲೀಸ್ ಆಗಿದೆ. ಚಿತ್ರದ ಆಯಕ್ಷನ್ ಪ್ಯಾಕ್ಡ್ ಟೀಸರ್ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ ಎದುರಾಳಿಗಳಿಗೆ ಸದೆಬಡಿಯುವ ಮಾಸ್ ಅವತಾರದಲ್ಲಿ ಸಲ್ಮಾನ್ ಖಾನ್ ಕಾಣಿಸಿಕೊಂಡಿದ್ದಾರೆ. ಸಖತ್ ಡೈಲಾಗ್ ಕೂಡ ಹೊಡೆದಿದ್ದಾರೆ. ಸಿಕಂದರ್' ಟೀಸರ್‌ನಲ್ಲಿ ಸಲ್ಮಾನ್ ಖಾನ್ ಖಡಕ್ ಲುಕ್ ಹಾಗೂ ಆಯಕ್ಷನ್ ಸೀಕ್ವೆನ್ಸ್ ನೋಡುಗರಿಗೆ ಕಿಕ್ ಕೊಟ್ಟಿದೆ. ಸಲ್ಮಾನ್ ಪ್ರೇಯಸಿಯಾಗಿ ರಶ್ಮಿಕಾ ಮಿಂಚಿದ್ದಾರೆ. ಸಾಲು ಸಾಲು ಸಿನಿಮಾಗಳ ಸೋಲಿನಿಂದ ಕೆಂಗೆಟ್ಟಿರುವ ಸಲ್ಮಾನ್‌ಗೆ ಲಕ್ಕಿ ನಟಿ ರಶ್ಮಿಕಾ ಜೊತೆಯಾಗಿರೋದ್ರಿಂದ ಸಿನಿಮಾ ಸಕ್ಸಸ್ ಕಾಣುತ್ತಾ ಎಂಬುದನ್ನು ಕಾದುನೋಡಬೇಕಿದೆ. ಈದ್ ಹಬ್ಬದಂದು ಸಿನಿಮಾ ಬಿಡುಗಡೆಯಾಗಲಿದೆ.

ಈ ವರ್ಷ ರಶ್ಮಿಕಾ ನಟನೆಯ 'ಪುಷ್ಪ 2' ಮತ್ತು 'ಛಾವಾ'ಗೆ ಉತ್ತಮ ಪ್ರಶಂಸೆ ಸಿಕ್ಕಿದೆ. ರಶ್ಮಿಕಾ ಮಂದಣ್ಣ ಅಭಿನಯದ ಜೊತೆ ಗಲ್ಲಾಪೆಟ್ಟಿಗೆ ಕೂಡ ಲೂಟಿ ಮಾಡಿದೆ. ಹಾಗಾಗಿ ಸಹಜವಾಗಿ 'ಸಿಕಂದರ್' ಚಿತ್ರದ ಮೇಲೆ ಫ್ಯಾನ್ಸ್‌ಗೆ ನಿರೀಕ್ಷೆ ಹೆಚ್ಚಿಸಿದೆ.

ಹಾಟ್ ಅವತಾರ ತಾಳಿದ ನಿವೇದಿತಾ ಗೌಡ

'ಬಿಗ್ ಬಾಸ್' ಖ್ಯಾತಿಯ ನಿವೇದಿತಾ ಗೌಡ ಡಿವೋರ್ಸ್ ಪಡೆದ ಬಳಿಕ ಮತ್ತಷ್ಟು ಬೋಲ್ಡ್ ಆಗಿದ್ದಾರೆ. ಸದಾ ಒಂದಲ್ಲಾ ಒಂದು ಫೋಟೋಶೂಟ್ ಮೂಲಕ ಮೋಡಿ ಮಾಡುತ್ತಲೇ ಇರುತ್ತಾರೆ. ಈಗ ಬಾಸ್ ಟಬ್‌ನಲ್ಲಿ ಕುಳಿತು ನಟಿ ಫೋಟೋಗೆ ಪೋಸ್ ಕೊಟ್ಟಿದ್ದಾರೆ. ಬಾತ್‌ಟಬ್‌ನಲ್ಲಿ ಕುಳಿತು ಎದೆಯ ಸೀಳು ಕಾಣುವಂತೆ ನಟಿ ಕ್ಯಾಮೆರಾ ಕಣ್ಣಿಗೆ ಹಾಟ್ ಆಗಿ ಪೋಸ್ ನೀಡಿದ್ದಾರೆ. ಲಾಂಗ್ ಡ್ರೆಸ್‌ನಲ್ಲಿ ಮಿಂಚಿದ್ದಾರೆ. ನಟಿಯ ಅವತಾರಕ್ಕೆ ಬಗೆ ಬಗೆಯ ಕಾಮೆಂಟ್‌ಗಳು ಹರಿದು ಬರುತ್ತಿವೆ. ನಿವಿ ಬೋಲ್ಡ್ ಪೋಸ್ ನೋಡಿ ಇದೇನಾ ಡಿವೋರ್ಸ್‌ಗೆ ಕಾರಣ ಎಂದೆಲ್ಲಾ ನೆಟ್ಟಿಗರು ಸೋಶಿಯಲ್ ಮೀಡಿಯಾದಲ್ಲಿ ಚರ್ಚಿಸಿದ್ದಾರೆ.



ಇನ್ನೂ ಚಂದನ್ ಶೆಟ್ಟಿ ಜೊತೆ ದಾಂಪತ್ಯಕ್ಕೆ ಅಂತ್ಯ ಹಾಡಿದ ಮೇಲೆ ನಿವೇದಿತಾ ಸಿನಿಮಾ ಕೆರಿಯರ್ ಕಡೆ ನಟಿ ಹೆಚ್ಚಿನ ಗಮನ ನೀಡುತ್ತಿದ್ದಾರೆ. ಸದ್ಯ 'ಬಾಯ್ಸ್ ವರ್ಸಸ್ ಗರ್ಲ್ಸ್' ಶೋನಲ್ಲಿ ನಟಿ ಆಯಕ್ಟೀವ್ ಆಗಿದ್ದಾರೆ. ಮಾಜಿ ಪತಿ ಚಂದನ್ ಶೆಟ್ಟಿ ಜೊತೆ 'ಮುದ್ದು ರಾಕ್ಷಸಿ' ಎಂಬ ಸಿನಿಮಾ ಮಾಡಿದ್ದಾರೆ. ಈ ಎರಡು ಸಿನಿಮಾಗಳ ರಿಲೀಸ್ ಬಗ್ಗೆ ಸದ್ಯದಲ್ಲೇ ಅಪ್‌ಡೇಟ್ ಸಿಗಲಿದೆ.

ರಜನಿಕಾಂತ್ ಸಿನಿಮಾದಲ್ಲಿ ಪೂಜಾ ಹೆಗ್ಡೆ

ಕಾವಳಿ ಬೆಡಗಿ ಪೂಜಾ ಹೆಗ್ಡೆ ಅವರು 'ಕೂಲಿ' ಚಿತ್ರತಂಡವನ್ನು ಸೇರಿಕೊಂಡಿದ್ದಾರೆ. ಸೂಪರ್ ಸ್ಟಾರ್ ರಜನಿಕಾಂತ್) ನಟನೆಯ 'ಕೂಲಿ' ಸಿನಿಮಾದಲ್ಲಿ ಐಟಂ ಹಾಡಿಗೆ ಹೆಜ್ಜೆ ಹಾಕಲು ನಟಿ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ.

ಪೂಜಾ ಹೆಗ್ಡೆಗೆ ಸಕ್ಸಸ್ ಸಿಗದ